ವಿಶ್ವವಾಣಿ
ವಿಶ್ವಾಸವೇ ವಿಶ್ವ

ದೇಶ, ವಿದೇಶಗಳಿಂದ ಕೋಟ್ಯಂತರ ಮಂದಿ ಆಗಮನ

ಈ ಬಾರಿ 45 ಕೋಟಿ ಜನರು ಭಾಗವಹಿಸುವ ನಿರೀಕ್ಷೆ

ಇಂದಿನಿಂದ ಮಹಾ ಕುಂಭಮೇಳ

ಲಖನೌ: ಪ್ರತಿ 12 ವರ್ಷಗಳಿಗೊಮ್ಮೆ ನಡೆಯುವ ಮಹಾ ಕುಂಭಮೇಳವು ಸೋಮವಾರ ದಿಂದ ಪ್ರಾರಂಭವಾಗಲಿದ್ದು, ಫೆಬ್ರವರಿ 26ರವರೆಗೆ ನಡೆಯಲಿದೆ.

ದಟ್ಟ ಮಂಜಿನ ನಡುವೆಯೂ ಮೇಳ ಪ್ರದೇಶದಲ್ಲಿ ಭಕ್ತರ ದಂಡು ಹರಿದು ಬರುತ್ತಿದೆ. ಕಳೆದ ಬಾರಿ 25 ಕೋಟಿ ಜನರು ಸಂಗಮದಲ್ಲಿ ಸ್ನಾನ ಮಾಡಿದ್ದರು. ಈ ಬಾರಿ 45 ಕೋಟಿ ಜನರು ಮಹಾಕುಂಭ ಮೇಳದಲ್ಲಿ ಭಾಗಿಯಾಗಲಿದ್ದಾರೆ ಎಂದು ಅಂದಾಜಿಸಲಾಗಿದೆ ಎಂದು ಉತ್ತರ ಪ್ರದೇಶ ಸರಕಾರ ತಿಳಿಸಿದೆ.

ಮಹಾಕುಂಭ ಮೇಳಕ್ಕೆ ಆಗಮಿಸುವ ಯಾತ್ರಿಕರ ಸುರಕ್ಷತೆಗಾಗಿ ಪ್ರಯಾಗರಾಜ್ ದಾದ್ಯಂತ 50,000 ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಉತ್ತರ ಪ್ರದೇಶದ ಪೊಲೀಸ್ ಮಹಾ ನಿರ್ದೇಶಕ ಪ್ರಶಾಂತ್ ಕುಮಾರ್ ಹೇಳಿದ್ದಾರೆ. 2019ರ ಕುಂಭಕ್ಕೆ ಹೋಲಿಸಿದರೆ ಈ ಬಾರಿ ಭದ್ರತೆಗಾಗಿ ಶೇ.40ರಷ್ಟು ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗುವುದು. ಜತೆಗೆ, ಜನಸಂದಣಿ ನಿರ್ವಹಣೆ ಮತ್ತು ಸಂಚಾರ ನಿಯಮಗಳಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಮೇಳಕ್ಕೆ ಭೇಟಿ ನೀಡುವ ಯಾತ್ರಿಕರ ಸಂಖ್ಯೆಯನ್ನು ಲೆಕ್ಕ ಹಾಕುವುದು ಈವರೆಗೆ ಸವಾಲಾಗಿತ್ತು. ಹಾಗಾಗಿ, ಈ ಬಾರಿ ಎ.ಐ ಆಧಾರಿತ 2,700 ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸುತ್ತಿದ್ದು, ಯಾತ್ರಿಕರ ಸಂಖ್ಯೆಯನ್ನು ನಿಖರವಾಗಿ ತಿಳಿಯಲಿದೆ ಎಂದು ತಿಳಿಸಿದ್ದಾರೆ.

- ದಟ್ಟ ಮಂಜಿನ ನಡುವೆಯೂ ಹರಿದು ಬರುತ್ತಿರುವ ಭಕ್ತರ ದಂಡು
- ಪ್ರಯಾಗರಾಜ್‌ದಾದ್ಯಂತ 50,000 ಪೊಲೀಸ್ ಸಿಬ್ಬಂದಿ ನಿಯೋಜನೆ
- ಜನಸಂದಣಿ ನಿರ್ವಹಣೆ ಮತ್ತು ಸಂಚಾರ ನಿಯಮಗಳಲ್ಲಿ ಅಗತ್ಯ ಕ್ರಮ
- ಭಕ್ತರನ್ನು ಲೆಕ್ಕ ಹಾಕುವುದಕ್ಕಾಗಿ ಎ.ಐ ಆಧಾರಿತ 2,700 ಸಿ.ಸಿ ಟಿ.ವಿ ಕ್ಯಾಮೆರಾ

ಅಯೋಧ್ಯೆಗೂ ಭಕ್ತರ ದಂಡು

ಪ್ರಯಾಗ್‌ರಾಜ್‌ನಿಂದ 160 ಕಿ.ಮೀ ದೂರದಲ್ಲಿರುವ ಅಯೋಧ್ಯೆಗೂ ನಿತ್ಯ 75 ಸಾವಿರಕ್ಕೂ ಹೆಚ್ಚು ಭಕ್ತರು ಭೇಟಿ ನೀಡುತ್ತಿದ್ದಾರೆ. ತಿಂಗಳ ಕಾಲ ನಡೆಯುವ ಮಹಾಕುಂಭಮೇಳದ ಸಂದರ್ಭದಲ್ಲಿ ಅಯೋಧ್ಯೆಗೆ ಬರುವವರ ಸಂಖ್ಯೆ ನಿತ್ಯ 2 ಲಕ್ಷ ದಾಟಬಹುದು ಎಂದು ಅಂದಾಜಿಸಲಾಗಿದೆ.

ಪುಟ ತೆರೆದಂತೆ...

ಸೋನಿಯಾ ಹೆಗಲಿಗೆ ಡಿಕೆಶಿ ಗಂಟು
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
ಸಂ.ಪುಟ | 6

ರಾಮ ರಾಮಾ... ಇದೆಂಥ ಅವಸ್ಥೆ...!

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
ಸಂ.ಗಮ | 7

ಇಂದು ಬೆಳಗ್ಗೆ ಕೈ ಸರ್ವ ಸದಸ್ಯರ, ಸಂಜೆ ಶಾಸಕಾಂಗ ಪಕ್ಷದ ಸಭೆ

ಪವರ್ ಶೇರಿಂಗ್ ಬಗ್ಗೆ ತುಟಿಬಿಚ್ಚದಂತೆ ಎಚ್ಚರಿಕೆ ನೀಡುವ ಸಾಧ್ಯತೆ

ಬಣ ಬಡಿದಾಟಕ್ಕೆ ಬ್ರೇಕ್?

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ಭುಗಿಲೆದ್ದಿರುವ ಬಣ ಬಡಿದಾಟಕ್ಕೆ ಬ್ರೇಕ್ ಹಾಕಲು ಮತ್ತೊಮ್ಮೆ ಪಕ್ಷದ ವರಿಷ್ಠರು ಎಂಟ್ರಿಯಾಗಿದ್ದು, ಯಾವ ನಾಯಕರೂ ಈ ವಿಷಯವನ್ನು ಬಹಿರಂಗವಾಗಿ ಮಾತನಾಡದಂತೆ ಸೂಚನೆ ನೀಡಲಿದ್ದಾರೆ.

ಸೋಮವಾರ ಬೆಳಗ್ಗೆ ಕಾಂಗ್ರೆಸ್ ಕಚೇರಿಯಲ್ಲಿ ಸರ್ವ ಸದಸ್ಯರ ಸಭೆ ಹಾಗೂ ಸಂಜೆ ಖಾಸಗಿ ಹೋಟೆಲ್‌ನಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಹಮ್ಮಿಕೊಳ್ಳಲಾಗಿದೆ. ಈ ಎರಡೂ ಸಭೆಯಲ್ಲಿ ರಾಜ್ಯ ಕಾಂಗ್ರೆಸ್‌ನಲ್ಲಿ ಭುಗಿಲೆದ್ದಿರುವ ಭಿನ್ನಮತವನ್ನು ತಣಿಸುವ ನಿಟ್ಟಿನಲ್ಲಿ ವರಿಷ್ಠರು ಕೆಲ ಸೂಚನೆಗಳನ್ನು ನೀಡಲಿದ್ದಾರೆ ಎನ್ನಲಾಗಿದೆ.

ಡಿಸೆಂಬರ್ ಕೊನೆಯ ವಾರದಿಂದ ರಾಜ್ಯ ರಾಜಕೀಯದಲ್ಲಿ ಶುರುವಾಗಿರುವ ಸಚಿವರುಗಳ ಡಿನ್ನರ್ ಸಭೆ, ಅಧಿಕಾರ ಹಂಚಿಕೆ ಬಗ್ಗೆ ನಾಯಕರ ಪರ-ವಿರೋಧ ಚರ್ಚೆ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗೆ ಸಂಬಂಧಿಸಿದಂತೆ ಸರಣಿ ಹೇಳಿಕೆಗಳನ್ನು ನಾಯಕರು ನೋಡುತ್ತಾ ಬಂದಿದ್ದಾರೆ. ಈ ಎಲ್ಲ ವಿಷಯಗಳನ್ನು ಮುಂದಿಟ್ಟುಕೊಂಡು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪಕ್ಷದ ಹೈಕಮಾಂಡ್‌ಗೆ ದೂರು ಸಲ್ಲಿಸಿದ್ದರು. ಇದರ ಬೆನ್ನಲ್ಲೇ ನಡೆಯುತ್ತಿರುವ ಈ ಎರಡೂ ಸಭೆಗಳಲ್ಲಿ ಬಣ ಬಡಿದಾಟಕ್ಕೆ ಬ್ರೇಕ್ ಹಾಕುವ ನಿಟ್ಟಿನಲ್ಲಿ ಎಚ್ಚರಿಕೆ ನೀಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಈ ಸಭೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲ ಇಬ್ಬರೂ ಭಾಗವಹಿಸಲಿದ್ದಾರೆ ಎನ್ನಲಾಗಿತ್ತು. ಆದರೆ ಎಐಸಿಸಿ ಕಟ್ಟಡ ಉದ್ಘಾಟನಾ ಕಾರ್ಯಕ್ರಮದ ತಯಾರಿಯಲ್ಲಿರುವ ವೇಣುಗೋಪಾಲ್ ಅವರು ಗೈರಾಗುವ ಸಾಧ್ಯತೆಯಿದ್ದು, ಸುರ್ಜೇವಾಲ ಅವರು ಸೋಮವಾರ ಬೆಳಗ್ಗೆ ಆಗಮಿಸಲಿದ್ದಾರೆ. ಶಾಸಕರು, ಪದಾಧಿಕಾರಿಗಳಿಂದ ಸಲಹೆ-ಸೂಚನೆಗಳನ್ನು ತೆಗೆದುಕೊಳ್ಳುವುದಕ್ಕಿಂತ ಎಚ್ಚರಿಕೆಗೆ ಈ ಸಭೆಗಳು ಸೀಮಿತವಾಗಲಿವೆ ಎಂದು ತಿಳಿದುಬಂದಿದೆ.

ಹೈಕಮಾಂಡ್ ಏನೇನು ಸೂಚನೆ ನೀಡಬಹುದು?

- ಯಾವ ನಾಯಕರೂ ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಚರ್ಚಿಸಬಾರದು
- ಯಾವುದೇ ಅಸಮಾಧಾನವಿದ್ದರೂ ಪಕ್ಷದ ವೇದಿಕೆಯಲ್ಲೇ ಚರ್ಚಿಸಿ, ಬಗೆಹರಿಸಿಕೊಳ್ಳಬೇಕು
- ನಾಯಕರು ಯಾವುದೇ ಸಭೆಗಳನ್ನು ನಡೆಸುವ ಮೊದಲು ಪಕ್ಷದ ವರಿಷ್ಠರ ಅನುಮತಿ ಕಡ್ಡಾಯ
- ಊಟ-ತಿಂಡಿ ನೆಪದಲ್ಲಿ ಸಭೆಗಳನ್ನು ನಡೆಸಿ, ಪಕ್ಷದಲ್ಲಿ ಗೊಂದಲ ಸೃಷ್ಟಿಸುವಂತಿಲ್ಲ
- ಪಕ್ಷದ ಹೈಕಮಾಂಡ್ ಹಂಚಿರುವ ಜವಾಬ್ದಾರಿಗಳನ್ನು ನಿಭಾಯಿಸಿ. ಬೇರೆಯವರ ಬಗ್ಗೆ ಚಿಂತೆ ಬೇಡ

ಇಕ್ಕಟ್ಟಿಗೆ ಕೈಕಮಾಂಡ್

ರಾಜ್ಯ ನಾಯಕತ್ವದ ವಿಷಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಸಮಬಲ ಹೊಂದಿದ್ದು, ವಿಧಾನಸಭಾ ಚುನಾವಣೆ, ಲೋಕಸಭೆ ಹಾಗೂ ಉಪಚುನಾವಣೆಯ ಗೆಲುವಿ ನಲ್ಲಿ ಈ ಇಬ್ಬರ ಪಾತ್ರ ಮಹತ್ವದ್ದಾಗಿದೆ. ಆದ್ದರಿಂದ ಇತ್ತ ಸಿದ್ದರಾಮಯ್ಯ ಅವರ ಬಣಕ್ಕೆ ಎಚ್ಚರಿಕೆ ನೀಡಿದರೆ ಸಿದ್ದರಾಮಯ್ಯ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಡಿ.ಕೆ.ಶಿವಕುಮಾರ್ ಬಣಕ್ಕೆ ಎಚ್ಚರಿಕೆ ನೀಡಿದರೆ ಡಿಕೆಶಿ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಆದ್ದರಿಂದ ಈ ಇಬ್ಬರನ್ನೂ ನಿಭಾಯಿಸುವುದೇ ಪಕ್ಷದ ಹೈಕಮಾಂಡ್‌ಗೆ ತಲೆನೋವಾಗಿದೆ.

ಬಹಿರಂಗ ಹೇಳಿಕೆ ಸಲ್ಲ

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಸಭೆಯಲ್ಲಿ ಯಾವುದೇ ನಾಯಕರಾಗಲಿ, ಶಾಸಕರಾಗಲಿ ಬಹಿರಂಗ ಹೇಳಿಕೆಗಳನ್ನು ನೀಡದಂತೆ ತಾಕೀತು ಮಾಡಲಿದ್ದಾರೆ. ಯಾವುದೇ ಸಮಸ್ಯೆಗಳಿದ್ದರೂ ಪಕ್ಷದ ಚೌಕಟ್ಟಿನಲ್ಲಿ ಚರ್ಚಿಸಿ ಸಮಸ್ಯೆ ಬಗೆಹರಿಸಿಕೊಳ್ಳುವ ಸೂಚನೆ ನೀಡುವ ಸಾಧ್ಯತೆಯಿದೆ. ಇದರೊಂದಿಗೆ ಬೆಳಗಾವಿಯಲ್ಲಿ ಜೂ.21ರಂದು ನಡೆಯಲಿರುವ ಗಾಂಧಿ ಭಾರತ ಸಮಾವೇಶವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಕೆಲವೊಂದಷ್ಟು ಸಲಹೆ-ಸೂಚನೆಗಳನ್ನು ನೀಡಲಿದ್ದಾರೆ ಎನ್ನಲಾಗಿದೆ. ಸಂಜೆ ಶಾಸಕಾಂಗ ಪಕ್ಷದ ಸಭೆ ನಡೆಯಲಿದ್ದು, ತೆರಿಗೆ ಹಂಚಿಕೆ ಕೊರತೆಯ ಬಗ್ಗೆ ಚರ್ಚೆಯಾಗುವ ಸಾಧ್ಯತೆಯಿದೆ. ಈ ಸಭೆಯ ಬಳಿಕ ಬೂದಿಮುಚ್ಚಿದ ಕೆಂಡವಾಗಿರುವ ಕಾಂಗ್ರೆಸ್ ಒಳಬೇಗುದಿ ಇತ್ಯರ್ಥವಾಗುವುದೋ ಹೆಚ್ಚಳವಾಗುವುದೋ ಎನ್ನುವ ಕುತೂಹಲ ಹಲವರಲ್ಲಿದೆ.

ವಿಶ್ವವಾಣಿ ಸಂಕ್ರಾಂತಿ ಸಂಭ್ರಮ

2025ರ ಕ್ಯಾಲೆಂಡರ್ ವರ್ಷದ ಮೊದಲ ಹಬ್ಬವಾಗಿ ಸಂಕ್ರಾಂತಿ ಹಬ್ಬ ನಮ್ಮ ಮಂದಿದೆ. ಸೂರ್ಯನ ಪಥ ಬದಲಾವಣೆ ಜತೆ ಸುಗ್ಗಿಯ ಸಂಭ್ರಮವನ್ನು ಸಾರುವ ಈ ಹಬ್ಬ ನಮ್ಮ ಕೃಷಿ ಸಂಸ್ಕೃತಿಯ ಪ್ರತೀಕ. ಮನೆಯ ಹೆಣ್ಣು ಮಕ್ಕಳು ಹೊಸ ಬಟ್ಟೆ ಉಟ್ಟು ಎಳ್ಳು ಬೆಲ್ಲ ಹಂಚುವುದು ಹಬ್ಬದ ವೈಶಿಷ್ಟ್ಯ. ಈ ಹಬ್ಬದ ಸಂಭ್ರಮ ಹೆಚ್ಚಿಸಿಕೊಳ್ಳಲು ವಿಶ್ವವಾಣಿ ವೇದಿಕೆ ಕಲ್ಪಿಸುತ್ತಿದೆ. ನಿಮ್ಮ ಮನೆಯ ಲಕ್ಷ್ಮಿಯರು ಎಳ್ಳು ಬೆಲ್ಲ ಬೀರುವ ಆಕರ್ಷಕ ಫೋಟೋವನ್ನು ಕ್ಲಿಕ್ಕಿಸಿ ನಮಗೆ ಕಳುಹಿಸಿ. ಆಯ್ದ ಫೋಟೋಗಳನ್ನು ಪ್ರಕಟಿಸುತ್ತೇವೆ.

ನಿಬಂಧನೆಗಳು

1. ಗುಣಮಟ್ಟದ ಒಂದು ಫೋಟೋ ಸಾಕು
2. ಒಬ್ಬರು ಅಥವಾ ಹೆಚ್ಚು ಸದಸ್ಯರಿರುವ ಫೋಟೋ ಕಳುಹಿಸಬಹುದು
3. ನಿಮ್ಮ ಫೋಟೋ ಜನವರಿ 15ರ ಅಪರಾಹ್ನ 2 ಗಂಟೆ ಒಳಗೆ ನಮಗೆ ತಲುಪಲಿ.

ವಾಟ್ಸ್‌ಆ್ಯಪ್ ನಂಬರ್

63623 93988

ದಾರಿದೀಪೋಕ್ತಿ

ಯಾರಾದರೂ ಕೆಟ್ಟದಾಗಿ ನಿಂದಿಸಿದರೆ ಮನಸ್ಸನ್ನು ಕೆಡಿಸಿಕೊಳ್ಳಬಾರದು. ಯಾರಾದರೂ ಒರಟಾಗಿ ವರ್ತಿಸಿದರೆ ಅದಕ್ಕೆ ಮಹತ್ವ ನೀಡಬಾರದು. ಯಾರಾದರೂ ನಿಮ್ಮನ್ನು ನಿಕೃಷ್ಟವಾಗಿ ನೋಡಿದರೆ ದೃಢಚಿತ್ತರಾಗಿರಬೇಕು. ಬೇರೆಯವರ ಕೆಟ್ಟ ವರ್ತನೆ ನಿಮ್ಮ ಆಂತರಿಕ ಶಾಂತಿಯನ್ನು ಹಾಳು ಮಾಡಬಾರದು.

ವಕ್ರತುಂಡೋಕ್ತಿ

ಮದುವೆಯೇ ಉತ್ತರವಾಗಿದ್ದರೆ, ಪ್ರಶ್ನೆಯ ಒಕ್ಕಣಿಕೆ ಮಾತ್ರ ಸರಿಯಾಗಿರಬೇಕು.

ಪಕ್ಷ ತೊರೆಯದಂತೆ ಶಾಸಕರಿಗೆ ದೇವೇಗೌಡ, ಕುಮಾರಸ್ವಾಮಿ ಮನವಿ

ಜೆಡಿಎಸ್ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಚುನಾವಣೆ

ಬೆಂಗಳೂರು: ಆಪರೇಷನ್ ಹಸ್ತದ ಆತಂಕದಲ್ಲಿ ಜೆಡಿಎಸ್ ಕರೆದಿದ್ದ ತುರ್ತು ಸಭೆಯಲ್ಲಿ ಎಲ್ಲ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದರೊ ಂದಿಗೆ, ಪಕ್ಷ ಸಂಘಟನೆಗೆ ಒತ್ತು ನೀಡಬೇಕು ಎನ್ನುವ ಸಂದೇಶ ಜೆಡಿಎಸ್ ವರಿಷ್ಠ ದೇವೇಗೌಡ ಹಾಗೂ ಕೇಂದ್ರ ಸಚಿವ ಕುಮಾರಸ್ವಾಮಿ ರವಾನಿಸಿದರು.

ಜೆ.ಪಿ.ಭವನದಲ್ಲಿ ಭಾನುವಾರ ನಡೆದ ಸಭೆಯಲ್ಲಿ ಪಕ್ಷ ಸಂಘಟನೆ, ಆಪರೇಷನ್ ಹಸ್ತಕ್ಕೆ ಜೆಡಿಎಸ್ ಶಾಸಕರು ಬಲಿಯಾಗಬಾರದು ಎನ್ನುವ ಬಗ್ಗೆ ಚರ್ಚಿಸಿದರು. ಈ ಸಭೆಯಿಂದ ಶಾಸಕ ಜಿ.ಟಿ.ದೇವೇಗೌಡ ಅಂತರ ಕಾಯ್ದುಕೊಂಡಿದ್ದರು. ಇನ್ನುಳಿದಂತೆ ಬಹುತೇಕ ಶಾಸಕರು ಭಾಗವಹಿಸಿದ್ದರು. ಜೆಡಿಎಸ್ ರಾಜ್ಯಾಧ್ಯಕ್ಷ ಸ್ಥಾನಕ್ಕೆ ನಿಖಿಲ್ ಕುಮಾರಸ್ವಾಮಿ ಅವರ ಹೆಸರನ್ನು ಈ ಸಭೆಯಲ್ಲೇ ಘೋಷಿಸುವ ಸಾಧ್ಯತೆಯಿದೆ ಎನ್ನಲಾಗಿತ್ತು. ಆದರೆ ಅಂತಿಮವಾಗಿ ಚುನಾವಣೆಯ ಮೂಲಕ ಅಧ್ಯಕ್ಷರ ಆಯ್ಕೆ ಮಾಡಲು ತೀರ್ಮಾನಿಸಲಾಗಿದೆ.

→ 4



ಜೆಡಿಎಸ್ ಕುಟುಂಬ ಆಧಾರಿತ ಪಕ್ಷ ಎಂದು ಕಾಂಗ್ರೆಸ್ ಹೇಳುತ್ತದೆ. ಯಾರಾದರೂ ಒಮ್ಮೆ ಕಾಂಗ್ರೆಸ್ ಕಚೇರಿಗೆ ಹೋಗಿ ಅಲ್ಲಿ ಗೋಡೆಗಳ ಮೇಲೆ ನೇತು ಹಾಕಿರುವ ಫೋಟೋಗಳನ್ನು ನೋಡಿ. ಕುಟುಂಬ ಆಧಾರಿತ ಪಕ್ಷ ಯಾವುದೆಂದು ಗೊತ್ತಾಗುತ್ತದೆ.

– **ಎಚ್.ಡಿ.ದೇವೇಗೌಡ** ಮಾಜಿ ಪ್ರಧಾನಿ

ಎಚ್‌ಡಿಕೆ ಮುಗಿಸಲು ಸಾಧ್ಯವಿಲ್ಲ



ಸಭೆಯಲ್ಲಿ ಮಾತನಾಡಿದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು, ಜೆಡಿಎಸ್ ಪಕ್ಷವನ್ನು ಮುಗಿಸಬೇಕೆಂದು ಕಾಂಗ್ರೆಸ್ ಹೊಂಚು ಹಾಕುತ್ತಿದೆ. ಯಾವುದೇ ಕಾರಣಕ್ಕೂ ಅದರ ಕನಸು ಈಡೇರುವುದಿಲ್ಲ. ನಮ್ಮದು ಸಮರ್ಥ ನಾಯಕರ, ಸಮರ್ಥ ಕಾರ್ಯಕರ್ತರ ಪಕ್ಷ. ನಮ್ಮ ಪಕ್ಷವನ್ನು ಬೇರೆಯವರು ಮುಗಿಸುವುದು ಅಸಾಧ್ಯ. ಮಾರ್ಚ್ ತಿಂಗಳಿಂದ ನಾನು ಜಿಲ್ಲೆಗಳಲ್ಲಿ ಪ್ರವಾಸ ಮಾಡುತ್ತೇನೆ, ಕಾರ್ಯ ಕರ್ತರ ಮನೆಗಳಲ್ಲಿಯೇ ವಾಸ್ತವ್ಯ ಹೂಡಿ ಪಕ್ಷ ಕಟ್ಟುತ್ತೇನೆ. ಸದಸ್ಯತ್ವ ಅಭಿಯಾನವನ್ನು ನೀವು ಮುಂದುವರಿಸಿ ಎಂದು ಹೇಳಿದರು.

ಬಿಸಿಸಿಐಗೆ ದೇವಜೀತ್ ಸೈಕಿಯಾ ಕಾರ್ಯದರ್ಶಿ, ಭಾಟಿಯಾ ಖಜಾಂಚಿ

ಮುಂಬೈ: ದೇವಜೀತ್ ಸೈಕಿಯಾ ಅವರನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕಾರ್ಯದರ್ಶಿ ಮತ್ತು ಖಜಾಂಚಿಯಾಗಿ ಪ್ರಭತೇಜ್ ಸಿಂಗ್ ಭಾಟಿಯಾ ಅವಿರೋಧವಾಗಿ ಆಯ್ಕೆ ಮಾಡಲಾಯಿತು.



ಅಸ್ಸಾಂ ರಾಜ್ಯದವರಾದ ಸೈಕಿಯಾ ಅವರು ಡಿ.1ರಿಂದ ಹಂಗಾಮಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಅವರು ಜಂಟಿ ಕಾರ್ಯ ದರ್ಶಿಯೂ ಆಗಿದ್ದರು. ಈಗ ಆ ಹುದ್ದೆ ತೆರವಾಗಿದೆ. ಖಜಾಂಚಿ ಭಾಟಿಯಾ ಛತ್ತೀಸಗಡದವರು. ಈ ಮೊದಲು ಕಾರ್ಯದರ್ಶಿಯಾಗಿದ್ದ ಜಯ್ ಶಾ ಅವರು ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಅಧ್ಯಕ್ಷರಾಗಿ ಡಿ.1ರಂದು ಅಧಿಕಾರ ವಹಿಸಿಕೊಂಡಿದ್ದರು. ಖಜಾಂಚಿಯಾಗಿದ್ದ ಆಶಿಶ್ ಶಿಲಾರ್ ಅವರು ಮಹಾರಾಷ್ಟ್ರ ಸರಕಾರದಲ್ಲಿ ಸಚಿವರಾಗಿದ್ದಾರೆ. ಆದ್ದರಿಂದ ಇವರಿಬ್ಬರು ಬಿಸಿಸಿಐನಲ್ಲಿ ತಮ್ಮ ಹುದ್ದೆಗಳಿಂದ ಕೆಳಗಿಳಿದಿದ್ದರು.

ಫನ್‌ತರಂಗ

– ರಘುಪತಿ ಶೃಂಗೇರಿ –

ಶಾಸಕನ ಮನೆ ಮೇಲಿನ ತೆರಿಗೆ ದಾಳಿಯ ವೇಳೆ ಸಿಕ್ಕಿದ ಚಿನ್ನ, ಕೋಟ್ಯಾಂತರ ಹಣ ಹಾಗೂ ಮೂರು ಮೊಸಳೆಗಳು

ಸುದ್ದಿ



ಗಣರಾಜ್ಯೋತ್ಸವಕ್ಕೆ ಮುಖ್ಯ ಅತಿಥಿಯಾಗಿ ಇಂಡೋನೇಷ್ಯಾ ಅಧ್ಯಕ್ಷ?

ದೆಹಲಿ: ಇಂಡೋನೇಷ್ಯಾ ಅಧ್ಯಕ್ಷ ಪ್ರಬೊವೊ ಸುಬಿಯಾಂಟೊ ಅವರು ಮುಂಬರುವ ಗಣರಾಜ್ಯೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವ ಸಾಧ್ಯತೆಯಿದೆ ಎನ್ನಲಾಗಿದೆ. 73 ವರ್ಷದ ಮಾಜಿ ಸೇನಾ ಜನರಲ್ ಪ್ರಬೊವೊ ಸುಬಿಯಾಂಟೊ ಅವರು 2024ರ ಅಕ್ಟೋಬರ್‌ನಲ್ಲಿ ಇಂಡೋನೇಷ್ಯಾದ ಅಧ್ಯಕ್ಷ ರಾಗಿ ಅಧಿಕಾರ ವಹಿಸಿಕೊಂಡಿದ್ದರು. ಭಾರತಕ್ಕೆ ಭೇಟಿ ನೀಡುವ ಸಂದರ್ಭದಲ್ಲಿ ಸುಬಿಯಾಂಟೊ ಅವರು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಪ್ರಮುಖ ವಿಚಾರಗಳ ಕುರಿತು ಮಾತುಕತೆ ನಡೆಸುವ ನಿರೀಕ್ಷೆ ಇದೆ.

ಟ್ರಂಪ್ ಪದಗ್ರಹಣ: ವಿದೇಶಾಂಗ ಸಚಿವ ಎಸ್.ಜೈಶಂಕರ್ ಭಾಗಿ

ದೆಹಲಿ: ಅಮೆರಿಕದ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪದಗ್ರಹಣ ಸಮಾರಂಭದಲ್ಲಿ ವಿದೇಶಾಂಗ ಸಚಿವ ಎಸ್.ಜೈಶಂಕರ್ ಭಾಗಿಯಾಗಲಿದ್ದಾರೆ. ಅಮೆರಿಕದ ಆಹ್ವಾನದ ಮೇರೆಗೆ ಜೈಶಂಕರ್ ಅವರು ಡೊನಾಲ್ಡ್ ಟ್ರಂಪ್ ಅವರ ಪ್ರಮಾಣವಚನ ಸಮಾರಂಭದಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ. ಅದೇ ವೇಳೆ, ಅಮೆರಿಕ ಆಡಳಿತದ ಪ್ರತಿನಿಧಿಗಳು, ಇತರ ರಾಷ್ಟ್ರಗಳ ಗಣ್ಯರೊಂದಿಗೆ ಸಭೆ ನಡೆಸಲಿದ್ದಾರೆ. ಜ.20ರಂದು ನಡೆಯುವ ಸಮಾರಂಭದಲ್ಲಿ ನಿರ್ಗಮಿತ ಅಧ್ಯಕ್ಷ ಜೋ ಬೈಡನ್ ಅವರು ಟ್ರಂಪ್‌ಗೆ ಅಧಿಕಾರ ಹಸ್ತಾಂತರಿಸಲಿದ್ದಾರೆ.

ಎಚ್‌ಎಂಪಿ ವೈರಸ್ ಸೋಂಕಿನ ಪ್ರಮಾಣ ಇಳಿಕೆ: ಚೀನಾ ಸ್ಪಷ್ಟನೆ

ಬೀಜಿಂಗ್: ಎಚ್‌ಎಂಪಿವಿ ಸೋಂಕಿತರ ಸಂಖ್ಯೆಯಲ್ಲಿ ಏರಿಳಿತಗಳಾಗುತ್ತಿದ್ದು, ಉತ್ತರ ಚೀನಾದಲ್ಲಿ ಇಳಿಕೆಯಾಗಿದೆ. 14 ವರ್ಷ ಮತ್ತು ಅದಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲೂ ಸೋಂಕಿನ ಪ್ರಮಾಣ ಕ್ಷೀಣಿಸಿದೆ ಎಂದು ಚೀನಾದ ರೋಗ ನಿಯಂತ್ರಣ ಮತ್ತು ತಡೆ ಕೇಂದ್ರದ ಸಂಶೋಧಕ ವಾಂಗ್ ಲಿಪಿಂಗ್ ಭಾನುವಾರ ತಿಳಿಸಿದ್ದಾರೆ. ಪ್ರಸ್ತುತ ಜನರಿಗೆ ಉಂಟಾಗುತ್ತಿರುವ ಉಸಿರಾಟದ ಸಮಸ್ಯೆಯು ಈ ಹಿಂದೆ ಇದ್ದ ರೋಗಕಾರಕಗಳಿಂದಲೇ ಉಂಟಾಗಿದೆ. ಹೊಸ ಸಾಂಕ್ರಾಮಿಕ ರೋಗ ಪತ್ತೆಯಾಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.



ಸಂಕ್ರಾಂತಿ ವೇಳೆಯೇ ವಿಕೃತಿ ಮೆರೆದ ಕಿರಾತಕರು | ಹಿಂದೂ ಸಮಾಜದ ಆಕ್ರೋಶ, ತಪಿತಸ್ಥರಿಗೆ ಶಿಕ್ಷೆ ನೀಡುವಂತೆ ಆಗ್ರಹ

ಹಸುಗಳ ಕೆಚ್ಚಲು ಕೊಯ್ದ ಪಾಪಿಗಳು!

ಬೆಂಗಳೂರು: ಗೋವುಗಳ ಹಬ್ಬ ಎನಿಸಿರುವ ಸಂಕ್ರಾಂತಿ ಹಬ್ಬದ ಸಂದರ್ಭದಲ್ಲಿಯೇ ಕಿಡಿಗೇಡಿಗಳು ಮೂರು ಹಸುಗಳ ಕೆಚ್ಚಲು ಕೊಯ್ದು, ಮಚ್ಚಿನಿಂದ ಹಲ್ಲೆ ಮಾಡಿ ವಿಕೃತಿ ಮೆರೆದಿರುವ ಘಟನೆ ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಶನಿವಾರ ನಡೆದಿದ್ದು, ಭಾನುವಾರ ಪ್ರಕರಣ ಬೆಳಕಿಗೆ ಬಂದಿದೆ.

ಚಾಮರಾಜಪೇಟೆಯ ಕರ್ಣ ಎಂಬುವವರಿಗೆ ಸೇರಿದ 8 ಹಸುಗಳು ಓಲ್ಡ್ ಪೆನ್ಷನ್ ಮೊಹಲ್ಲಾದಲ್ಲಿನ ರಸ್ತೆಬದಿ ಶೆಡ್‌ನಲ್ಲಿ ಮಲಗಿದ್ದವು. ಆ 8 ಹಸುಗಳಲ್ಲಿ ಮೂರು ಹಸುಗಳ ಕೆಚ್ಚಲುಗಳನ್ನು ಕೊಯ್ದ ಕಿರಾತಕರು ರಕ್ತದ ಕೋಡಿಯನ್ನೇ ಹರಿಸಿದ್ದಾರೆ. ಮೂಖರೋಧನೆ ಅನುಭವಿಸುತ್ತಿದ್ದ ಹಸುಗಳಿಗೆ ಚಾಮರಾಜಪೇಟೆಯ ಪಶು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾ ಗುತ್ತಿದೆ. ವಿಷಯ ತಿಳಿಯುತ್ತಿದ್ದಂತೆ ಹಿಂದೂ ಸಂಘಟನೆಗಳ ಕಾರ್ಯಕರ್ತರು, ಮುಖಂಡರು ಘಟನಾ ಸ್ಥಳದಲ್ಲಿ ಜಮಾಯಿಸಿದ್ದು, ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಸ್ಥಳದಲ್ಲಿ ಕೆಎಸ್ ಆರ್‌ಪಿ ತುಕಡಿ ನಿಯೋಜಿಸಲಾಗಿದೆ.

→ 4

ಈ ಸರಕಾರದಲ್ಲಿ ಯಾವುದೇ ಭಯ ಇಲ್ಲದಂತೆ ಕಾಣಿಸುತ್ತಿದೆ. ರಾಜ್ಯ ಕಾಂಗ್ರೆಸ್ ಸರಕಾರ ಗೋವುಗಳಿಗೆ ಸರಿಯಾದ ರಕ್ಷಣೆ ನೀಡದಿರುವುದು, ಗೋಶಾಲೆಗಳಿಗೆ ಸರಿಯಾದ ಅನುದಾನ ನೀಡದೇ ನಿರ್ಲಕ್ಷ್ಯ ಮಾಡಿರುವುದರ ಪರಿಣಾಮ ಇಂತಹ ಹೃದಯ ಹೀನ ಕೃತ್ಯಗಳು ನಡೆಯಲು ಪ್ರೇರಣೆ ನೀಡಿದಂತಾಗಿದೆ. ನಮಗೆಲ್ಲ ಈ ಕೃತ್ಯ ಅತ್ಯಂತ ಘಾಸಿಯುಂಟು ಮಾಡಿದೆ.

– **ಬಸವರಾಜ ಬೊಮ್ಮಾಯಿ,** ಸಂಸದ



ತಪ್ಪಿತಸ್ಥರಿಗೆ ಕಾನೂನು ಪ್ರಕಾರ ಶಿಕ್ಷೆ: ಸಿಎಂ

ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಹಸುಗಳ ಕೆಚ್ಚಲು ಕೊಯ್ದ ಪ್ರಕರಣಕ್ಕೆ ಸಂಬಂಧಿಸಿ ತಪ್ಪಿತಸ್ಥರನ್ನು ಪತ್ತೆ ಹಚ್ಚಿ ಶಿಕ್ಷೆಗೆ ಒಳಪಡಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ. ಪ್ರಾಣಿ ಹಿಂಸೆ ಮಾಡುವುದು ಅಪರಾಧ. ತಪ್ಪಿತಸ್ಥರ ಮಾಹಿತಿ ದೊರೆತಿಲ್ಲ. ತಪ್ಪಿತಸ್ಥರನ್ನು ಪತ್ತೆ ಹಚ್ಚಿ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಪೊಲೀಸ್ ಆಯುಕ್ತರಿಗೆ ಸೂಚನೆ ನೀಡಲಾಗಿದೆ. ಘಟನೆ ಸಂಬಂಧ ಹಿಂದೂ ಸಂಘಟನೆಗಳ ಪ್ರತಿಭಟನೆ ರಾಜಕೀಯ ಪ್ರೇರಿತವಾಗಿದೆ ಎಂದರು.

ಪ್ರತಿಭಟನೆ ನಡೆಸಿದ್ದಕ್ಕೆ ವಿಕೃತಿ

ಆರು ತಿಂಗಳ ಹಿಂದೆ ಚಾಮರಾಜಪೇಟೆಯಲ್ಲಿರುವ ಪಶು ಆಸ್ಪತ್ರೆಯನ್ನು ಸ್ಥಳಾಂತರಿಸುವ ಆಲೋಚನೆಯಿತ್ತು. ಇದನ್ನು ಖಂಡಿಸಿ ಪ್ರತಿಭಟನೆ ನಡೆಸಲಾಗಿತ್ತು. ಈ ಪ್ರತಿಭಟನೆಯಲ್ಲಿ ಕರ್ಣ ಎಂಬುವವರು ಹಸುಗಳ ಸಮೇತ ಭಾಗವಹಿಸಿದ್ದರು. ಇದರಿಂದ ಕುಪಿತಗೊಂಡಿರುವ ಕೆಲವರು ಕೆಲ ದಿನಗಳ ಹಿಂದೆ ಹಸುವಿನ ಗುದದ್ವಾರಕ್ಕೆ ಪೈಪ್ ಇಟ್ಟು ವಿಕೃತಿ ಮೆರೆದಿದ್ದರು. ಶನಿವಾರ ಕೆಚ್ಚಲುಗೆ ಚಾಕು ಹಾಕಿ ಇರಿದಿದ್ದಾರೆ. ಪಶು ಆಸ್ಪತ್ರೆ ಉಳಿಸಲು ನಡೆಸಿದ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದಕ್ಕೆ ವಿರೋಧಿಗಳು ಈ ಕೃತ್ಯ ಎಸಗಿರಬಹುದು ಎಂದು ಹಸು ಮಾಲೀಕ ಕರ್ಣ ಅವರು ಅನುಮಾನ ವ್ಯಕ್ತಪಡಿಸಿದ್ದಾರೆ.

ಪ್ರಕರಣ ದಾಖಲು

ಹಸುವಿನ ಕೆಚ್ಚಲು ಕೊಯ್ದ ಕಿಡಿಗೇಡಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆ 325 (ಪ್ರಾಣಿಗಳ ಮೇಲಿನ ದೌರ್ಜನ್ಯ ತಡೆ) ಕಾಯಿದೆಯಡಿ ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಘಟನೆ ನಡೆದ ಪ್ರದೇಶದ ಸಿ.ಸಿ. ಟಿವಿ ಪರಿಶೀಲನೆ ನಡೆಸಿರುವ ಪೊಲೀಸರು, ಸ್ಥಳೀಯರಿಂದ ಮಾಹಿತಿ ಕಲೆ ಹಾಕಿದ್ದಾರೆ.

ಕರಾಳ ಸಂಕ್ರಾಂತಿ ಆಚರಣೆ

ಹಸುಗಳ ಕೆಚ್ಚಲು ಕೊಯ್ದ ಜಿಹಾದಿಗಳ ವಿರುದ್ಧ ಸರಕಾರ ಕಠಿಣ ಕ್ರಮ ವಹಿಸದಿದ್ದರೆ, ರಾಜ್ಯಾದ್ಯಂತ ಕರಾಳ ಸಂಕ್ರಾಂತಿ ಆಚರಿಸಲಾಗುವುದು. ಇಡೀ ದೇಶ ಗೋವನ್ನು ಪವಿತ್ರ ಎಂದು ಪರಿಗಣಿಸಿದೆ. ಸಂಕ್ರಾಂತಿ ಹಬ್ಬದಲ್ಲಿ ಗೋವನ್ನು ಪೂಜಿಸಲಾಗುತ್ತದೆ. ಅಂತಹ ಹಬ್ಬದ ಸಮಯದಲ್ಲೇ ಹಸುವಿನ ಕೆಚ್ಚಲು ಕೊಯ್ದು ಹಾಕುವ ಕೊಡುಗೆ ನೀಡಿದೆ. ಇಂತಹ ಜಿಹಾದಿ ಮನಸ್ಥಿತಿಯನ್ನು ನಾನು ಈವರೆಗೆ ನೋಡಿಲ್ಲ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಕಿಡಿಕಾರಿದ್ದಾರೆ.

ಸಮಾಚಾರ ಸಣ್ಣದಲ್ಲ

ನಾಳೆ ಶ್ರೀರಂಗನಾಥ ಸ್ವಾಮಿ ಜಾತ್ರೆ

ಚಿಕ್ಕನಾಯಕನಹಳ್ಳಿ: ತಾಲೂಕಿನ ಬೆಳಗುಲಿ ಹೊನ್ನಮರಡಿ ಶ್ರೀರಂಗನಾಥ ಸ್ವಾಮಿಯ ಮಕರ ಸಂಕ್ರಾಂತಿ ಜಾತ್ರಾ ಮಹೋತ್ಸವ ಜ.14 ರಂದು ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವೈಭವಯುತವಾಗಿ ನೆರವೇರಲಿದೆ. ಶ್ರೀಹೊನ್ನಮರಡಿ ರಂಗನಾಥ ಸ್ವಾಮಿ ಬೆಟ್ಟದ ಮೇಲೆ ಶ್ರೀಉಡುಸಲಮ್ಮ ದೇವಿ ಆಗಮನದೊಂದಿಗೆ ಗಂಡುಗತ್ರಿ, ಮುಳ್ಳಾವಿಗೆ ಉರುವತ್ತಿ ಮತ್ತು ದೊಡ್ಡ ಊಳಗ ಕಾರಣಿಕವೂ ನಡೆಯುವುದು. ಜಾತ್ರೆ ಅಂಗವಾಗಿ ಸ್ವಾಮಿಗೆ ವಿಶೇಷ ಪೂಜಾ ಕೈಂಕರ್ಯ ಏರ್ಪಡಿಸಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಭಕ್ತರು ಆಗಮಿಸಲಿದ್ದು, ದೇವಸ್ಥಾನದ ಆಡಳಿತ ಮಂಡಳಿ,ವಿವಿಧ ಗ್ರಾಮಸ್ಥರು ಹಾಗೂ ಭಕ್ತರ ಸಹಕಾರದಿಂದ ಅನ್ನದಾನ ಹಮ್ಮಿಕೊಳ್ಳಲಾಗಿದೆ. ಅಂದು ಸಂಜೆ ಬೆಳಗುಲಿ ಗ್ರಾಮದಲ್ಲಿ ಶ್ರೀರಂಗನಾಥ ಸ್ವಾಮಿ, ಕೆಂಚರಾಯ ಸ್ವಾಮಿ, ಜಾಲಿಮರದಮ್ಮ, ಉಡುಸಲಮ್ಮದೇವಿಯ ಉತ್ಸವ ನಡೆಯಲಿದೆ ಎಂದು ದೇವಾಲಯದ ಕಮಿಟಿ ತಿಳಿಸಿದೆ.

ಕ್ರೂಸರ್ ವಾಹನ ಡಿಕ್ಕಿ: ಇಬ್ಬರ ಸಾವು

ಶಿರಾ: ಚಾಲಕನ ನಿಯಂತ್ರಣ ತಪ್ಪಿ ಕ್ರೂಸರ್ ವಾಹನ ಲಾರಿಗೆ ಡಿಕ್ಕಿ ಆಗಿದ್ದು, ಕ್ರೂಸರ್ ವಾಹನದ ಚಾಲಕ ಸೇರಿ ಇಬ್ಬರು ಸಾವನ್ನಪ್ಪಿದ್ದು, ನಾಲ್ವರಿಗೆ ತೀವ್ರ ಗಾಯಗಳಾಗಿರುವ ಘಟನೆ ರಾಷ್ಟ್ರೀಯ ಹೆದ್ದಾರಿ 48 ರಲ್ಲಿರುವ ಎಮ್ಮೇರಹಳ್ಳಿ ಬ್ರಿಡ್ಜ್ ಬಳಿ ನಡೆದಿದೆ. ಚಾಲಕ ಬಸವರಾಜು (40), ಸುರೇಶ್ (28) ಮೃತ ದುರ್ದೈವಿಗಳು. ಮೃತರನ್ನು ರಾಯಚೂರು ಜಿಲ್ಲೆಯ ಮಾನ್ವಿ ಮೂಲದವರು ಎಂದು ಗುರುತಿಸಲಾಗಿದೆ. ಅಪಘಾತದಲ್ಲಿ ಆನಂದ್, ವೀರೇಶ್, ಆದೆಪ್ಪ, ನಾಗಮ್ಮ ತೀವ್ರ ಗಾಯಗೊಂಡಿದ್ದು, ಶಿರಾ ತಾಲೂಕು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಕೂಲಿ ಕೆಲಸ ಮಾಡಲು ಬೆಂಗಳೂರಿನತ್ತ ಕ್ರೂಸರ್ ವಾಹನದಲ್ಲಿ ತೆರಳುತ್ತಿದ್ದರು. ಈ ವೇಳೆ ಚಾಲಕನ ನಿಯಂತ್ರಣ ತಪ್ಪಿ ಹಿಂಬದಿಯಿಂದ ಲಾರಿಗೆ ಕ್ರೂಸರ್ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ಕ್ರೂಸರ್ ವಾಹನ ಸಂಪೂರ್ಣ ನಜ್ಜುಗುಜ್ಜಾಗಿದೆ. ಘಟನೆ ಸಂಬಂಧ ಶಿರಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶ್ರೀಗಳ ಪುಣ್ಯಸ್ಮರಣೆ ಜನವರಿ 13ಕ್ಕೆ

ತುಮಕೂರು: ಜಿಲ್ಲಾ ಒಕ್ಕಲಿಗರ ಒಕ್ಕೂಟ ಹಾಗೂ ಒಕ್ಕಲಿಗರ ಸಂಘಸಂಸ್ಥೆಗಳ ಆಶ್ರಯದಲ್ಲಿ ಸೋಮವಾರ (ಜ.13) ನಗರದ ಬಿಜಿಎಸ್ ವೃತ್ತದಲ್ಲಿ ಆದಿ ಚುಂಚನಗಿರಿ ಮಹಾಸಂಸ್ಥಾನದ ಜಗದ್ಗುರು ಡಾ. ಬಾಲಗಂಗಾಧರನಾಥ ಸ್ವಾಮೀಜಿಗಳ 12ನೇ ಪುಣ್ಯಸ್ಮರಣೆ ಏರ್ಪಾಟಾಗಿದೆ. ಬೆಳಗ್ಗೆ 9.30ಕ್ಕೆ ಕುಣಿಗಲ್ ತಾಲೂಕು ಅರೆಶಂಕರ ಮಠದ ಸಿದ್ದರಾಮ ಚೈತನ್ಯ ಸ್ವಾಮೀಜಿಗಳ ದಿವ್ಯಸಾನಿಧ್ಯದಲ್ಲಿ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಲಿದೆ. ಬಾಲಗಂಗಾಧರನಾಥ ಸ್ವಾಮೀಜಿಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಭಕ್ತಿನಮನ ಅರ್ಪಿಸಲಾಗುವುದು ಎಂದು ಜಿಲ್ಲಾ ಒಕ್ಕಲಿಗರ ಒಕ್ಕೂಟದ ಭೈರವ ಗಿರೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಂದ್ರಮೌಳೀಶ್ವರ ರಥೋತ್ಸವ ಇಂದು

ತುಮಕೂರು: ಕ್ಯಾತಸಂದ್ರದ ಹರಿ-ಹರ ಕ್ಷೇತ್ರವೆಂದೇ ಪ್ರಸಿದ್ಧವಾದ ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಾಲಯದಲ್ಲಿ 121 ನೇ ಬ್ರಹ್ಮರಥೋತ್ಸವವು ಜನವರಿ 13 ರ ಸೋಮವಾರ ಬನದ ಹುಣ್ಣಿಮೆಯಂದು ಮಧ್ಯಾಹ್ನ 12.30 ರಿಂದ 1.15ರ ಶುಭ ಅಭಿಜಿನ್ ಲಗ್ನದಲ್ಲಿ ನಡೆಯಲಿದೆ. ಬೆಳಗ್ಗೆ 7 ಗಂಟೆಯಿಂದ ನವಗ್ರಹ ಪುರಸ್ಸರ ಮೃತ್ಯುಂಜಯ ಹೋಮ, ರಥಾಂಗಹೋಮ, ಮಧ್ಯಾಹ್ನ 12.30 ರಿಂದ 1.15ರ ಶುಭ ಅಭಿಜಿನ್ ಲಗ್ನದಲ್ಲಿ ಬ್ರಹ್ಮರಥೋತ್ಸವ, ಸಂಜೆ 6 ರಿಂದ 9 ರವರೆಗೆ ಧವಳೋತ್ಸವ, ಸತ್ಯನಾರಾಯಣವ್ರತ ನೆರವೇರಲಿದೆ. ಜ.14 ರಂದು ಬೆಳಗ್ಗೆ 9 ಗಂಟೆಯಿಂದ 1.30ರವರೆಗೆ ನಿತ್ಯ ಹೋಮ, ಬಲಿಹರಣ, ಪೂರ್ಣಾಹುತಿ, ಶ್ರೀಲಕ್ಷ್ಮೀ ನರಸಿಂಹ ಕಲ್ಯಾಣೋತ್ಸವ, ಸಂಜೆ 6 ಗಂಟೆಯಿಂದ 9 ರವರೆಗೆ ಶಯನೋತ್ಸವ, ಚಂಡಿಕಾ ಪಾರಾಯಣ ನಡೆಯಲಿದೆ. ಚಂಡಿಕಾಹೋಮ: ಜ.15 ರಂದು ಬೆಳಗ್ಗೆ 8-30 ರಿಂದ ಶ್ರೀಚಂಡಿಕಾಹೋಮ, ಕುಮಾರಿ ಪೂಜೆ, ಸುಹಾಸಿನಿ ಪೂಜೆ, ಮಧ್ಯಾಹ್ನ 1.30 ಕ್ಕೆ ಪೂರ್ಣಾಹುತಿ ನೆರವೇರಲಿದ್ದು, ಸಂಜೆ 6.30 ಕ್ಕೆ ಬೆಂಗಳೂರಿನ ಶ್ರೀನಾಟ್ಯ ಕೇಂದ್ರದ ಸ್ಮಿತಾ ಭಾರ್ಗವ್ ಅವರಿಂದ ಭರತನಾಟ್ಯ ಕಾರ್ಯಕ್ರಮ ಏರ್ಪಟ್ಟಿದೆ.

ವಿಶ್ವ ಯಾತ್ರಾ
ನಿಮ್ಮ ಸಹ ಪ್ರಯಾಣಿಕ ಶನಿವಾರ

{ಜಗದೀಶ ಶೆಟ್ಟರ್ } ಸಂಸದ

ಹಿಂದುತ್ವದ ಬಗ್ಗೆ ಹೋರಾಡುವ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರನ್ನು ರಾಜಕೀಯವಾಗಿ ಮುಗಿಸುವ ಹುನ್ನಾರ ನಡೆದಿದೆ. ರವಿ ಅವರಿಗೆ ಬೆದರಿಕೆ ಪತ್ರ ಬರೆಯಲಾಗಿದೆ. ಇದರಿಂದ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಎಷ್ಟು ಹದಗೆಟ್ಟಿದೆ. ಅರಾಜಕತೆ ಸೃಷ್ಟಿಯಾಗಿದೆ ಎಂಬುದು ತಿಳಿಯುತ್ತದೆ.

ತೆಂಗಿನಲ್ಲಿ ಹೆಚ್ಚುವರಿ ಉತ್ಪಾದನೆ, ತರಬೇತಿ ಕಾರ್ಯಕ್ರಮ ಉದ್ಘಾಟನೆ | ಡಾ.ಎಚ್.ವಿ.ಸುರೇಶ್

ಹವಾಮಾನಕ್ಕೆ ಹೊಂದುವ ತಳಿ ಅಭಿವೃದ್ಧಿಪಡಿಸಿ

ಕುಣಿಗಲ್: ಹವಾಮಾನ ವೈಪರೀತ್ಯ ಸಹಿಸಿಕೊಂಡು ಉತ್ತಮ ಇಳುವರಿ ನೀಡುವಂತ ಬೆಳೆಗಳ ತಳಿ ಅಭಿವೃದ್ಧಿ ಹಾಗೂ ಸಂಶೋಧನೆ ಮಾಡುವ ಮಹತ್ತರ ಹೊಣೆಗಾರಿಕೆ ಕೃಷಿ ಸಂಶೋಧಕರು,ವಿಜ್ಞಾನಿಗಳ ಮೇಲಿದೆ ಎಂದು ಬೆಂಗಳೂರು ಕೃಷಿವಿವಿಕುಲಪತಿ ಡಾ.ಎಚ್.ವಿ.ಸುರೇಶ್ ಹೇಳಿದರು.

ಪಟ್ಟಣದ ಖಾಸಗಿ ಸಮುದಾಯಭವನದಲ್ಲಿ ತೆಂಗು ಅಭಿವೃದ್ಧಿ ಮಂಡಳಿ ಸಂಸ್ಥಾಪನಾ ಅಂಗವಾಗಿ ಕುಣಿಗಲ್ ತಾಲೂಕು ಕೋಕೋನಟ್ ಪ್ರೊಡ್ಯುಸರ್ ಕಂಪನಿ ವಿವಿಧ ಸಂಸ್ಥೆ,ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಳ್ಳಲಾದ ತೆಂಗಿನಲ್ಲಿ ಹೆಚ್ಚುವರಿ ಉತ್ಪಾದನೆ ಹಾಗೂ ಲಾಭದಾಯಕ ಮಾಡಬಹುದಾದ ತಾಂತ್ರಿಕ ಅವಕಾಶಗಳ ಬಗ್ಗೆ ವಿಚಾರಸಂಕೀರಣ ಹಾಗೂ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ರಾಜ್ಯ ಸೇರಿದಂತೆ ಇತರೆ ರಾಜ್ಯದಲ್ಲಿ ತೆಂಗು ಬೆಳೆಯನ್ನು ಅವಲಂಬಿಸಿಕೊಂಡು ಲಕ್ಷಾಂತರ ಕುಟುಂಬ ಜೀವನ ನಿರ್ವಹಣೆ ಮಾಡುತ್ತಿವೆ. ಕಾಲಬದಲಾದಂತೆ ತೆಂಗಿನ ಮೌಲ್ಯವರ್ಧಿತ ಉತ್ಪನ್ನಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದರ ಜತೆಗೆ ತೆಂಗಿನಲ್ಲಿರುವ ಆರೋಗ್ಯವರ್ಧಕ ಅಂಶಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸಬೇಕು ಎಂದರು.

ಕುಣಿಗಲ್ ಪಟ್ಟಣದಲ್ಲಿ ಹಮ್ಮಿಕೊಳ್ಳಲಾದ ತೆಂಗಿನಲ್ಲಿ ಹೆಚ್ಚುವರಿ ಉತ್ಪಾದನೆ ಹಾಗೂ ಲಾಭದಾಯಕ ತಾಂತ್ರಿಕ ಅವಕಾಶ ವಿಚಾರಸಂಕೀರಣವನ್ನು ಕುಲಪತಿ ಡಾ.ಎಸ್.ವಿ.ಸುರೇಶ್ ಉದ್ಘಾಟಿಸಿದರು.

ಪ್ರಕೃತಿಯಲ್ಲಿ ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಪ್ರಾಮಾಣಿಕವಾಗಿ, ಇತಿಮಿತಿಯಲ್ಲಿ, ನಿಖರವಾಗಿ, ಯಶಸ್ವಿಯಾಗಿ ಬಳಸಿಕೊಂಡಾಗ ಕೃಷಿಯಲ್ಲಿ ಸರ್ವತೋಮುಖ ಯಶಸ್ಸು ಸಾಧಿಸಬಹುದು ಎಂದರು.

ತೆಂಗುಮಂಡಳಿ ಅಧ್ಯಕ್ಷ ಡಾ.ಜಯನಾಥ್, ತೆಂಗಿನ ಉತ್ಪಾದನೆಯಲ್ಲಿ ಭಾರತವೂ ಜಾಗತಿಕವಾಗಿ ಮುನ್ನಡೆಸಾಧಿಸಿದೆ.ದೇಶದ 19ರಾಜ್ಯ, 4ಕೇಂದ್ರಾಡಳಿತ ಪ್ರದೇಶದಲ್ಲಿ ತೆಂಗುಬೆಳೆಯಲಾಗುತ್ತಿದೆ. 12ಲಕ್ಷ ಕುಟುಂಬಗಳು ತೆಂಗುಬೆಳೆ ನಂಬಿಜೀವನ ನಡೆಸುತ್ತಿದೆ. ಒಟ್ಟು ತೆಂಗು ಉತ್ಪಾದನೆಯ ಶೇ.98ರಷ್ಟು ಸಣ್ಣ,ಅತಿಸಣ್ಣ ರೈತಕುಟುಂಬಗಳು ನಿರ್ವಹಣೆ ಮಾಡುತ್ತಿವೆ..ದೇಶವೂ ವಾರ್ಷಿಕ 19,309,90ದಶಲಕ್ಷ ತೆಂಗಿನಕಾಯಿ ಉತ್ಪಾದನೆ ಮಾಡುತ್ತಿದೆ. 20021-22ನೇಸಾಲಿನಲ್ಲಿ ವಾರ್ಷಿಕ ಜಿಡಿಪಿಗೆ 3ಲಕ್ಷದಶಲಕ್ಷರೂಪಾಯಿಗಳಿಗಿಂತ ಹೆಚ್ಚು ಆರ್ಥಿಕ ಕೊಡುಗೆ ನೀಡಿದೆ. ತೆಂಗಿನಮರ ಏರುವವರಿಗೆ ವಿಮಾವ್ಯವಸ್ಥೆಯನ್ನು ಮಂಡಳಿ ಮಾಡಿದೆ ಎಂದರು.

ಕಂಪನಿ ಅಧ್ಯಕ್ಷ ಹಾಗೂ ಬೆಂಗಳೂರು ಕೃಷಿವಿವಿ ವಿಶ್ರಾಂತ ಕುಲಪತಿ ಡಾ.ಕೆ.ನಾರಾಯಣಗೌಡ, ಕೃಷಿಯಲ್ಲಿ ಲಾಭ ಇಲ್ಲವೆಂದು ರೈತರು ಗ್ರಾಮಾಂತರ ಪ್ರದೇಶದಿಂದ ಪಟ್ಟಣಕ್ಕೆ ವಲಸೆಹೋಗುತ್ತಾರೆ. ಆದರೆ, ಇರುವ ಜಮೀನಿನಲ್ಲಿ ಸಮಗ್ರ ಕೃಷಿಯನ್ನು ವ್ಯವಸ್ಥಿತವಾಗಿ ಮಾಡಿದರೆ ಸ್ವಗ್ರಾಮದಲ್ಲೆ ಉತ್ತಮ ಆರ್ಥಿಕಭದ್ರತೆ ಕಂಡುಕೊಳ್ಳಬಹುದು. ತೆಂಗಿನ ಕೃಷಿ ಕೈಗೊಂಡಲ್ಲಿ ಕೆಲವರ್ಷ ನಾವು ಅದನ್ನು ಕಾಪಾಡಿದರೆ ನಂತರ ಸಾಯುವವರೆಗೂ ಅವು ನಮ್ಮನ್ನು ಕಾಪಾಡುತ್ತವೆ ಎಂಬುದ ಮರೆಯಬಾರದು ಎಂದರು.

> ಮೂಲಕ ಸ್ಥಳೀಯವಾಗಿ ಉತ್ಪಾದನೆ ಅಗುವ ತೆಂಗಿನ ಉತ್ಪನ್ನಗಳ ಬಳಕೆ ಹೆಚ್ಚಾದಷ್ಟು ಇದನ್ನು ಅವಲಂಬಿಸಿದ ಕುಟುಂಬಗಳ ಆರ್ಥಿಕತೆಯವೃದ್ದಿಗೂ ಪೂರಕವಾಗುತ್ತದೆ . ತೆಂಗಿನ ವಿವಿಧ ಉಪ, ಉತ್ಪನ್ನಗಳ ಸಂಶೋಧನೆ ಹಾಗೂ ಅವುಗಳ ಜನಪರ ಸರ್ವಾಂಗೀಣ ಲಾಭಗಳ ಬಗ್ಗೆ ಇನ್ನು ಹೆಚ್ಚಿನ ಸಂಶೋಧನೆ ಮಾಡುವ ಮೂಲಕ ತೆಂಗುಬೆಳೆಗಾರರ ಸ್ವಾವಲಂಬನೆಗೆ ಸಂಬಂಧಿತ ಸಂಸ್ಥೆಗಳು ಶ್ರಮಿಸಬೇಕು.
>
> ಡಾ.ಎಚ್.ವಿ.ಸುರೇಶ್, ಬೆಂಗಳೂರು ಕೃಷಿ ವಿವಿ ಕುಲಪತಿ

ಕೃಷಿವಿಜ್ಞಾನಿಗಳಾದ ಡಾ.ವಿ.ಗೋವಿಂದೆಗೌಡ, ಡಾ.ಕೀರ್ತಿಶಂಕರ್, ಡಾ.ಕೆ.ಆರ್.ಶ್ರೀನಿವಾಸ, ಡಾ.ಪಿ.ಬಿ.ಸಿಂಧು, ಮನೋಜ್ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸನೀಡಿದರು. ಯುನಿಯನ್‌ಬ್ಯಾಂಕ್ ಎಜಿಎಂ ಜೆ.ಮಹೇಶ, ತೋಟಗಾರಿಕೆ ಹಿರಿಯನಿರ್ದೇಶಕ ಎಂ,ರಾಜು, ಕಂಪನಿ ನಿರ್ದೇಶಕರಾದ ಅನಂದಸ್ವಾಮಿ, ವಸಂತಕುಮಾರ್ ಇತರರು ಇದ್ದರು.

ಎತ್ತಿನ ಬಂಡಿ ಸ್ಪರ್ಧೆ: ಸಂಭ್ರಮಿಸಿದ ಜನತೆ

ಗೌರಿಬಿದನೂರು: ತಾಲೂಕಿನ ಹುದುಗೂರು ಗ್ರಾಮದಿಂದ ಮುದುಗಾನಕುಂಟೆಗೆ ಹೋಗುವ ರಸ್ತೆಯಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ 3ನೇ ಬಾರಿ ರೈತಮಿತ್ರ ಬಳಗ ಸಮೂಹದಿಂದ ಖಾಲಿ ಎತ್ತಿನಗಾಡಿ ಓಡಿಸೋ ಸ್ಪರ್ಧೆ ಆಯೋಜಿಸಿದ್ದು. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಹುದುಗೂರು ರೈತಮಿತ್ರ ಬಳಗದ ವತಿಯಿಂದ ವಿಶೇಷ ವಿಭಾಗೀಯ ಪ್ರತ್ಯೇಕವಾಗಿ ಸೂಕ್ತ ಬಹುಮಾನಗಳನ್ನು ವಿತರಿಸಲು ಸಿದ್ಧಪಡಿಸಿದ್ದರು.

ಯಾವ ಎತ್ತಿನ ಜೋಡಿ 300ಮೀ ಅಂತವನ್ನು ಮೊದಲು ಓಡುತ್ತವೆಯೋ ಅವುಗಳನ್ನು ವಿಜಯ ಎತ್ತುಗಳೆಂದು ಘೋಷಿಸಿ ಬಹುಮಾನ ನೀಡಲಾಗುವುದಾಗಿ ಸಮಿತಿಯವರು ತಿಳಿಸಿದರು. ತಾಲೂಕಿನ ಹೊರಭಾಗದಲ್ಲಿ ನಡೆದ ಜೋಡಿ ಎತ್ತಿನ ಬಂಡಿ ಓಟದಲ್ಲಿ ಜಾನುವಾರುಗಳು ದೂಳೆಬ್ಬಿಸಿ ರೈತ ಸಮೂಹವನ್ನು ಖುಷಿ ಪಡಿಸಿದವು. ಎತ್ತಿನ ಬಂಡಿಯ ಓಟವೆಂದರೆ ರೈತ ಸಮೂಹಕ್ಕೆ ಎಲ್ಲಿಲ್ಲದ ಖುಷಿ ಹಿಗಾಗಿ ಸದರಿ ಸ್ಪರ್ಧೆಯಲ್ಲಿ ತಾಲೂಕಿನವರು ಮಾತ್ರವಲ್ಲದೆ ನೆರೆಯರಾಜ್ಯವಾದ ಆಂಧ್ರಪ್ರದೇಶದಿಂದಲೂ ಸಹ ಒಟ್ಟು 50ಕ್ಕೂ ಹೆಚ್ಚು ಜೋಡೆತ್ತುಗಳು ಸ್ಪರ್ಧೆಯಲ್ಲಿ ಭಾಗವಹಿದ್ದವು. ಸ್ಪರ್ಧೆಯನ್ನು 2ವಿಭಾಗಳಾಗಿ ವಿಂಗಡಿಸಲಾಗಿತ್ತು. ಹಸುಗಳವಿಭಾಗ ಮತ್ತು ಎತ್ತುಗಳ ವಿಭಾಗವಾಗಿ ಪ್ರತ್ಯೇಕವಾಗಿಯೇ ಸ್ಪರ್ಧೆಯನ್ನು ನಡೆಸಲಾಯಿತು.

ಅಬ್ಬಾ ಎತ್ತುಗಳ ಶರವೇಗವದ ಓಟ, ಧೂಳೆಬ್ಬಿಸಿ ಮಿಂಚಿನಂತೆ ಓಡುವ ನೋಟ ನೋಡಿದ್ರೆ ಮೈ ಜುಮ್ ಎನ್ನುವಂತಿತಿತ್ತು. ಎತ್ತಿನಗಾಡಿ ಓಟದ ಸ್ಪರ್ಧೆ ನೋಡಲು ಸಾವಿರಾರು ಜನರು ಆಗಮಿಸಿದ್ದರು. ಗಾಡಿ ಓಟದಲ್ಲಿದ್ದಾಗ ಜನ ಕೂಗುವ ಮೂಲಕ ಯುವಕರಿಗೆ ಹುರಿದುಂಬಿಸಿದರು. ಕೆಲವು ಜೋಡಿ ಎತ್ತುಗಳ ಅಭಿಮಾನಿಗಳು ಎತ್ತುಗಳು ಅಖಾಡದಲ್ಲಿ ಮಿಂಚಿನ ಓಟ ಓಡುತ್ತಿದ್ದಂತೆ ಅವುಗಳ ಜೊತೆ-ಜೊತೆಗೆ ಓಡಿ ಹುರುಪು ತುಂಬಿದರು.

ಎತ್ತಿನಗಾಡಿ ಓಡಿಸೋ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಹುದುಗೂರು ರೈತಮಿತ್ರ ಬಳಗದ ವತಿಯಿಂದ ವಿಶೇಷ ವಿಭಾಗೀಯ ಪ್ರತ್ಯೇಕವಾಗಿ ಸೂಕ್ತ ಬಹುಮಾನಗಳನ್ನು ವಿತರಿಸಲು ಸಿದ್ಧಪಡಿಸಿದ್ದರು.

ಮಾಲಿಕನ ಮನೋಭಾವಕ್ಕೆ ತಕ್ಕಂತೆ ಎತ್ತುಗಳು ಬಂಡಿಯನ್ನು ಹೊತ್ತು ಓಡುತ್ತಿರುವ ದೃಶ್ಯ ನೆರೆದ ಜನರಲ್ಲಿ ರೋಮಾಂಚನ ಮೂಡಿಸುವಂತೆ ಮಾಡಿತ್ತು. ಕ್ರೀಡಾಂಗಣದ ಇಕ್ಕೆಲಗಳಲ್ಲಿ ನೆರೆದಿದ್ದ ತಾಲ್ಲೂಕಿನ ಕ್ರೀಡಾಸಕ್ತರು ಚಪ್ಪಾಳೆಮೂಲಕ ಎತ್ತುಗಳನ್ನು ಹಾಗೂ ಚಕ್ಕಡಿಗಳಲ್ಲಿ ಕುಳಿತ ಸವಾರರನ್ನು ಉತ್ತೇಜಿಸುವ ಕೆಲಸ ಮಾಡುತ್ತಿದ್ದರು.

ಈ ಕಾರ್ಯಕ್ರಮದಲ್ಲಿ ಶಾಸಕರಾದ ಕೆ.ಹೆಚ್.ಪುಟ್ಟಸ್ವಾಮಿಗೌಡ, ವಕೀಲ ಚಂದನ್ ರಾಜಪ್ಪರವರ, ಕೆ.ಎಚ್.ಪಿ. ಆಪ್ತಕಾರ್ಯದರ್ಶಿ ಶ್ರೀನಿವಾಸಗೌಡ, ಗ್ರಾ.ಪಂ.ಅಧ್ಯಕ್ಷ-ಬಿ.ಕುಮಾರ್, ಕೆ.ಹೆಚ್.ಪಿ.ಮುಖಂಡರಾದ ನಂಜುಂಡಪ್ಪ, ಹರೀಶ್ ರೆಡ್ಡಿ, ಗ್ರಾ.ಪಂ.ಸದಸ್ಯರಾದ ಅಶ್ವತ್ಥಪ್ಪ, ಬೇಬಿರಮೇಸ್,ಗಂಗಾಧರಪ್ಪ,ಪ್ರಮೋದುಕುಮಾರ್,ಬಾಲಪ್ಪ, ಗಾಯಿತ್ರಿಸುರೇಶ್ ಮತ್ತು ರೈತಭಾಂದವರು ಮತ್ತು ಸಮಾಜ ಸೇವಕ ಕೆ. ಜೈಪಾಲ್ ರೆಡ್ಡಿ ಹಾಗೂ ಮುಖಂಡರು ಭಾಗವಹಿಸಿದ್ದರು.

ಮೌಲ್ಯಯುತ ಜೀವನಕ್ಕೆ ಆದ್ಯತೆ ನೀಡಿ: ನವೀನ್

ಚಿಕ್ಕಬಳ್ಳಾಪುರ: ಇಂದಿನ ಪೋಷಕರು ತಮ್ಮ ಮಕ್ಕಳ ಮೇಲೆ ಹೆಚ್ಚಿನ ಅಂಕಗಳಿಸುವಂತೆ ಒತ್ತಡ ಹೇರುತ್ತಿರುವುದನ್ನು ಕಾಣುತ್ತಿದ್ದೇವೆ. ಆದರೆ ಅಂಕಗಳಿಕೆಯಷ್ಟೇ ಆದರೆ ಸಾಲದು, ಜೀವನ ಮೌಲ್ಯಗಳಿಗೂ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಕೆ.ವಿ.ಶಿಕ್ಷಣ ಸಂಸ್ಥೆ ಮತ್ತು ಪಂಚಗಿರಿ ದತ್ತಿಗಳ ಅಧ್ಯಕ್ಷ ಕೆ.ವಿ.ನವೀನ್ ಕಿರಣ್ ಹೇಳಿದರು.

ನಗರ ಹೊರವಲಯದ ಕೆ.ವಿ.ಇಂಗ್ಲಿಷ್ ಶಾಲೆಯಲ್ಲಿ ಶನಿವಾರ ಆಯೋಜಿಸಿದ್ದ ಶಾಲಾ ವಾರ್ಷಿಕೋತ್ಸವ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವರ್ತಮಾನದಲ್ಲಿ ಸಾಮಾಜಿಕ ಜಾಲತಾಣಗಳ ಪ್ರಭಾವ ದಟ್ಟವಾಗಿದೆ.ಇದರಿಂದ ತಪ್ಪಿಸಿಕೊಳ್ಳಲಾಗದಷ್ಟು ಪ್ರಭಾವನ್ನು ಸಮಾಜದ ಮೇಲೆ ಬೀರಿವೆ.ಇದೇ ಕಾರಣವಾಗಿ ವಿದ್ಯಾರ್ಥಿಗಳು ಮೊಬೈಲ್ ಗೀಳಿಗೆ ಬಲಿಯಾಗುತ್ತಿದ್ದಾರೆ. ಇದರ ಬದಲಿಗೆ ಪುಸ್ತಕದ ಓದು, ಸಂಗೀತಾಭ್ಯಾಸ, ಆಟೋಟಗಳಲ್ಲಿ ತೊಡಗುವುದು, ನೃತ್ಯಕಲೆಗಳಲ್ಲಿ ಹೆಚ್ಚಿನ ಆಸಕ್ತಿ ತೋಡಗಿಸಿಕೊಳ್ಳುವ ಮೂಲಕ ಯುವಜನತೆ ಮೊಬೈಲ್ ಗೀಳಿನಿಂದ ಹೊರಬರಬೇಕಿದೆ ಎಂದು ಸಲಹೆ ನೀಡಿದರು.

ನವಗ್ರಹ ಚಿತ್ರ ಖ್ಯಾತಿಯ ಹಾಗೂ ಕನ್ನಡ ಬಿಗ್ ಬಾಸ್ ಸ್ಪರ್ಧಿಯಾಗಿದ್ದ ಸ್ಯಾಂಡಲ್ ವುಡ್ ನಟ ಧರ್ಮ ಕೀರ್ತಿರಾಜ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ನಂತರ ಮಾತನಾಡಿದ ಅವರು, ಮಕ್ಕಳಿಗೆ ಅನುಕೂಲವಾಗುವ ರೀತಿ ಹಾಗೂ ಅವರ ಸಾಮರ್ಥ್ಯಕ್ಕೆ ತಕ್ಕಂತೆ ಅವರ ಅಭಿವೃದ್ಧಿಗೆ ಪೂರಕವಾದ ಶಿಕ್ಷಣವನ್ನು ಸೃಷ್ಟಿಸಿ ಎಂದರು.

ಕೆ.ವಿ ಇಂಗ್ಲೀಷ್ ಶಾಲೆಯಲ್ಲಿ ನಡೆದ ವರ್ಣರಂಜಿತ ಶಾಲಾ ವಾರ್ಷಿಕೋತ್ಸವ ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನಕ್ಕೆ ಉತ್ತಮ ವೇದಿಕೆಯಾಗಿ ಬದಲಾಗಿತ್ತು. ಸಮಾರಂಭದಲ್ಲಿ ವಿದ್ಯಾರ್ಥಿಗಳು ಸೈನಿಕರಂತೆ ಶಿಸ್ತು ಪ್ರದರ್ಶನ ಮಾಡಿದ್ದು,ತರಗತಿಗಳಿಗೆ ಅನುಗುಣವಾಗಿ ತಂಡಗಳಲ್ಲಿ ಬಂದು ನುರಿತ ಕಲಾವಿದರಂತೆ ವಿವಿಧ ಸಾಂಸ್ಕೃತಿಕ ನೃತ್ಯಗಳನ್ನು ಪ್ರದರ್ಶಿಸುವ ಮೂಲಕ ನೋಡುಗರ ಕಣ್ಮನ ಸೆಳೆದರು.

ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಮೂಡಿ ನಡೆದವು.

> ಆಧುನಿಕತೆಯ ಭರಾಟೆಯಲ್ಲಿ ಚಿಕ್ಕವಯಸ್ಸಿನಲ್ಲೇ ವಿದ್ಯಾರ್ಥಿಗಳು ದುಶ್ಚಟಗಳಿಗೆ ದಾಸರಾಗುತ್ತಿದ್ದಾರೆ. ಆದ್ದರಿಂದ, ಪೋಷಕರು ತಮ್ಮ ಮಕ್ಕಳ ಶಿಸ್ತುಬದ್ಧ ಜೀವನಕ್ಕಾಗಿ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಸಕ್ತರಾಗುವ ನಿಟ್ಟಿನಲ್ಲಿ ಮುಂಜಾಗ್ರತೆ ವಹಿಸಬೇಕು.
>
> ಕೆ.ವಿ.ನವೀನ್ ಕಿರಣ್, ಪಂಚಗಿರಿ ದತ್ತಿಗಳ ಅಧ್ಯಕ್ಷ

ಶಾಲಾ ವಾರ್ಷಿಕೋತ್ಸವದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲಾ ಅತಿಥಿಗಳನ್ನು ಕೆ.ವಿ ಮತ್ತು ಪಂಚಗಿರಿ ದತ್ತಿ ಅಧ್ಯಕ್ಷ ಕೆ.ವಿ. ನವೀನ್ ಕಿರಣ್ ಅವರು ಗೌರವಿಸಿ ಸನ್ಮಾನಿಸಿದರು.

ಈ ಕಾರ್ಯಕ್ರಮದಲ್ಲಿ ಸ್ಯಾಂಡಲ್ ವುಡ್ ನಟ ಭಾರ್ಗವ್, ಗೌರಿಬಿದನೂರಿನ ವಿದ್ಯಾನಿಧಿ ಪಬ್ಲಿಕ್ ಸ್ಕೂಲ್ ಕಾರ್ಯದರ್ಶಿ ಪ್ರಾಂಶುಪಾಲರು ಹಾಗೂ ಸಂಚಾಲಕರಾಗಿರುವ ಮಧುಸೂದನ್, ಕೆ.ವಿ ಇಂಗ್ಲಿಷ್ ಸ್ಕೂಲ್ ಪ್ರಾಂಶುಪಾಲ ತ್ಯಾಗರಾಜ್, ಶ್ರೀಕೆ ವಿ ಮತ್ತು ಪಂಚಗಿರಿ ಶಿಕ್ಷಣ ದತ್ತಿ ಆಡಳಿತ ಅಧಿಕಾರಿ ಸಾಯಿ ಪ್ರಭು, ಟ್ರಸ್ಟಿಗಳಾದ ವಿ ಮುನಿಯಪ್ಪ, ನಿರ್ಮಲ ಪ್ರಭು,ಸುಜಾತ ನವೀನ್ ಕಿರಣ್, ವಿವಿಧ ಗಣ್ಯರು, ಶಾಲಾ ಆಡಳಿತ ಮಂಡಳಿ, ಸಿಬ್ಬಂದಿ ವರ್ಗ, ಪೋಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಅಗಲಗುರ್ಕಿ ಗ್ರಾಪಂ ಅಧ್ಯಕ್ಷರಾಗಿ ಗೋವಿಂದಸ್ವಾಮಿ ಅವಿರೋಧ ಆಯ್ಕೆ

ಚಿಕ್ಕಬಳ್ಳಾಪುರ: 19 ಸದಸ್ಯರಿರುವ ಅಗಲಗುರ್ಕಿ ಗ್ರಾಮ ಪಂಚಾಯಿತಿಯಲ್ಲಿ ಮುಂದಿನ ಒಂದು ವರ್ಷದ ಅವಧಿಗೆ ಬಿಜೆಪಿ ಬೆಂಬಲಿತ ಗೋವಿಂದಸ್ವಾಮಿಯನ್ನು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಅಗಲಗುರ್ಕಿ ಗ್ರಾಪಂನಲ್ಲಿ ನಡೆದ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆಯಲ್ಲಿ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದ ತಹಶೀಲ್ದಾರ್ ಅನಿಲ್ ಅವರು ಗೋವಿಂದಸ್ವಾಮಿ ಹೆಸರು ಘೋಷಣೆ ಮಾಡಿದರು. ಬಳಿಕ ಪಂಚಾಯಿತಿ ಮುಂದೆ ಜಮಾಯಿಸಿದ ನೂರಾರು ಬೆಂಬಲಿಗರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.

ಈ ವೇಳೆ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೇಶವರೆಡ್ಡಿ ನೂತನ ಅಧ್ಯಕ್ಷರಿಗೆ ಶುಭಕೋರಿ ಮಾತನಾಡಿದರು. ಅಗಲಗುರ್ಕಿ ಗ್ರಾಮ ಪಂಚಾಯಿತಿ ಸದಸ್ಯರ ಪರಸ್ಪರ ಸಹಕಾರ ಪ್ರೀತಿ ಮೆಚ್ಚುಬೇಕಾದಂತಹದ್ದು.ಎಲ್ಲಾ ಸದಸ್ಯರ ಒಮ್ಮತದ ಸಹಕಾರದಿಂದ ಅಧ್ಯಕ್ಷರಾಗಿರುವ ಗೋವಿಂದ ಸ್ವಾಮಿ ಪಂಚಾಯಿತಿಯನ್ನು ಅಭಿವೃದ್ಧಿಯತ್ತ ಸಾಗಿಸಿ ಮಾದರಿ ಪಂಚಾಯಿತಿ ಮಾಡುವ ವಿಶ್ವಾಸವಿದೆ ಎಂದರು.

ನೂತನ ಅಧ್ಯಕ್ಷ ಗೋವಿಂದಸ್ವಾಮಿ ಮಾತನಾಡಿ ತಮಗೆ ಸಂಪೂರ್ಣ ಬೆಂಬಲ ನೀಡಿ ಅಧ್ಯಕ್ಷನಾಗಲು ಸಹಕರಿಸಿದ ಪಂಚಾಯಿತಿಯ ಎಲ್ಲಾ ಸದಸ್ಯರಿಗೆ ಆಭಾರಿಯಾಗಿದ್ದೇನೆ. ಸಂಸದ ಡಾ.ಕೆ ಸುಧಾಕರ್,ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೇಶವರೆಡ್ಡಿ ಅವರ ಆಶೀರ್ವಾದಿಂದ ಇಂದು ಗ್ರಾ ಪಂ.ಅಧ್ಯಕ್ಷನಾಗಿದ್ದೇನೆ. ಒಂದು ವರ್ಷದ ಸೀಮಿತ ಅವಧಿಯಲ್ಲಿ ಪಂಚಾಯಿತಿಯ ಎಲ್ಲ ಸದಸ್ಯರ ವಿಶ್ವಾಸ ಗಿಟ್ಟಿಸಿಕೊಂಡು ಪಂಚಾಯಿತಿ ಅಭಿವೃದ್ಧಿಗೆ ಶ್ರಮಿಸಲಾಗುವುದು.

ಅಗಲಗುರ್ಕಿ ಗ್ರಾಮ ಪಂಚಾಯಿತಿಗೆ ಗೋವಿಂದ ಸ್ವಾಮಿಯನ್ನು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಅಗಲಗುರ್ಕಿ ಗ್ರಾಮ ಪಂಚಾಯಿತಿಯನ್ನು ಮಾದರಿ ಪಂಚಾಯಿತಿ ಮಾಡುವುದರಲ್ಲಿ ಯಾವುದೇ ಸಂಶಯವಿಲ್ಲ. ಭ್ರಷ್ಟಾಚಾರ ರಹಿತ ಪಾರದರ್ಶಕ ಆಡಳಿತ ನೀಡಿ ಜನರಿಗೆ ಮೂಲಸೌಕರ್ಯ ಒದಗಿಸಲು ಪ್ರಥಮ ಆದ್ಯತೆ ನೀಡಲಾಗುವುದು ಎಂದರು.

ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಕೃಷ್ಣಮೂರ್ತಿ ಮಾತನಾಡಿ ನೂತನ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ಅಭಿನಂದನೆ ಸಲ್ಲಿಸಿ ಅಗಲಗುರ್ಕಿ ಗ್ರಾಮ ಪಂಚಾಯಿತಿಯನ್ನು ಅಭಿವೃದ್ಧಿಯತ್ತ ಸಾಗಿಸಿ ಜನರಿಗೆ ತಲುಪಬೇಕಾದ ಸೌಕರ್ಯಗಳು ಕಾಲಕಾಲಕ್ಕೆ ತಲುಪಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು.ಪಾರದರ್ಶಕ ಆಡಳಿತ ನೀಡುವ ಮೂಲಕ ಜನರ ವಿಶ್ವಾಸ ಗಿಟ್ಟಿಸಿಕೊಂಡು ಪಂಚಾಯಿತಿ ಅಭಿವೃದ್ಧಿಗೆ ಒತ್ತು ನೀಡಬೇಕೆಂದರು.

ಪಿ ಡಿ ಒ ಅಶೋಕ್,ಪಂಚಾಯಿತಿ ಮಾಜಿ ಅಧ್ಯಕ್ಷರಾದ ನರಸಿಂಹಮೂರ್ತಿ,ಹಿರಿಯ ಸದಸ್ಯರಾದ ಚಂದ್ರಪ್ಪ, ಅಭಿಷೇಕ್, ಚಿಕ್ಕಕಾಡಿಗೇನಹಳ್ಳಿ ಗಿರೀಶ್,ದರ್ಶನ್, ಪಟೇಲ್ ಮಂಜುನಾಥ್, ಪ್ರಕಾಶ್,ಶಿವನಾಗು, ಸಹೋದರ ಶಂಕರ್ ಇತರರು ಹಾಜರಿದ್ದರು.

ಸ್ವಾಮಿ ವಿವೇಕಾನಂದರ ಆದರ್ಶ ಅನುಕರಣೀಯ

ಕೋಲಾರ: ಇಡೀ ಪ್ರಪಂಚಕ್ಕೆ ಭಾರತದ ಸಂಸ್ಕೃತಿ ಮತ್ತು ಹಿಂದುತ್ವವನ್ನು ಸಾರಿದ ವಿವೇಕಾನಂದರ ತತ್ವ ಹಾಗೂ ಆದರ್ಶಗಳನ್ನು ಜನತೆ ಪಾಲಿಸುವ ಮೂಲಕ ಮಾನವ ಧರ್ಮ ಸಾರಬೇಕೆಂದು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಓಂಶಕ್ತಿ ಚಲಪತಿ ಹೇಳಿದರು.

ನಗರದ ವಿವೇಕಾನಂದ ವೃತ್ತದಲ್ಲಿ ವಿವೇಕಾನಂದ ಮಿತ್ರ ಬಳಗದಿಂದ ಆಯೋಜಿಸಲಾಗಿದ್ದ ವಿವೇಕಾನಂದರ 155ನೇ ಜಯಂತಿಯಲ್ಲಿ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿ, ಕಾರ್ಯಕ್ರಮವನ್ನು ಪಕ್ಷ ಮತ್ತು ಜಾತ್ಯತೀತವಾಗಿ ನಡೆಸಲಾಗುತ್ತಿದ್ದು ಮುಂದಿನ ವರ್ಷ ವಿವೇಕಾನಂದರ ಕಂಚಿನ ಪುತ್ಥಳಿ ಅನಾವರಣ ಮಾಡುವ ಮೂಲಕ ಜಯಂತಿಗೆ ಚಾಲನೆ ನೀಡಲಾಗುತ್ತದೆಂದರು.

> ಮಾನವ ಧರ್ಮ ಶ್ರೇಷ್ಠ ಎಂದು ಸಾರಿದ ವಿವೇಕಾನಂದರ ಜಯಂತಿಯನ್ನು ಎಲ್ಲರೂ ಸೇರಿ ಆಚರಿಸುತ್ತಿದ್ದು ದಾರ್ಶನಿಕರ ಸಿದ್ಧಾಂತಗಳನ್ನು ಎಲ್ಲರೂ ಪಾಲಿಸಬೇಕಾಗಿದೆ. ವಿವೇಕಾನಂದರ ಮಾರ್ಗದರ್ಶನ ಪ್ರಪಂಚಕ್ಕೆ ಸರ್ವಕಾಲಿಕ ಆದರಣೀಯವಾಗಿದೆ.
>
> ವಕ್ಕಲೇರಿ ರಾಜಪ್ಪ, ದಲಿತ ಮುಖಂಡ

ಕೋಲಾರದ ವಿವೇಕಾನಂದ ವೃತ್ತದಲ್ಲಿ ವಿವೇಕಾನಂದರ ಜಯಂತಿ ನಡೆಯಿತು.

ವಿವೇಕಾನಂದ ವೃತ್ತದಲ್ಲಿ ಟ್ರಾಫಿಕ್ ಸಿಗ್ನಲ್ ಅಳವಡಿಸಲು ಜಿಲ್ಲಾ ಪೋಲಿಸರು ಯೋಜನೆ ರೂಪಿಸಿದ್ದು ಹೀಗಾಗಿ ಈ ಜಾಗದಲ್ಲಿ ವಿವೇಕಾನಂದರ ಬೃಹತ್ ಪ್ರತಿಮೆಯನ್ನು ಸ್ಥಾಪನೆ ಮಾಡುವ ಉದ್ದೇಶ ಹೊಂದಲಾಗಿದೆ ಎಂದು ತಿಳಿಸಿದರು. ವಿವೇಕಾನಂದರ ಜಯಂತಿಗೆ ಸಂದೀಪ್, ಸತೀಶ್, ಅನಿಲ್, ಕಿರಣ್,ಅಪ್ಪಿ, ಬಾಬು ಮುಂತಾದವರು ಶ್ರಮಿಸಿದ್ದಾರೆಂದು ಶ್ಲಾಘಿಸಿದರು.

ಸಿದ್ದರಾಮೇಶ್ವರ ಜಯಂತಿ ಜ.14ಕ್ಕೆ

ಚಿಂತಾಮಣಿ: ಬೋವಿ ಸಮುದಾಯದ ಗುರುಗಳಾದ ಶ್ರೀಶಿವಯೋಗಿ ಸಿದ್ದರಾಮೇಶ್ವರ ಜಯಂತಿಯನ್ನು ಜನವರಿ 14 ರಂದು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ವಿಜೃಂಭಣೆಯಿಂದ ಆಚರಿಸಲಾಗುತ್ತಿದ್ದು ಸಮುದಾಯದ ಎಲ್ಲರೂ ಪಕ್ಷಬೇಧ ಮರೆತು ಸಮುದಾಯದ ಪ್ರತಿಯೊಬ್ಬರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಬೋವಿ ಸಮುದಾಯದ ಮುಖಂಡರು ಹಾಗೂ ಮಾಜಿ ಜಿಲ್ಲಾ ಪಂಚಾಯತಿ ಸದಸ್ಯರಾದ ಶ್ರೀನಿವಾಸ್ ಕೋರಿದರು.

ಇಂದು ಚಿಂತಾಮಣಿ ನಗರದ ಪ್ರವಾಸಿ ಮಂದಿರದಲ್ಲಿ ಆಯೋಜಿಸಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ನಗರದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಬೆಳಗ್ಗೆ 9 ಗಂಟೆಗೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು ಕಾರ್ಯಕ್ರಮದಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಹಾಗೂ ಉನ್ನತ ಶಿಕ್ಷಣ ಸಚಿವರಾದ ಡಾ.ಎಂ.ಸಿ.ಸುಧಾಕರ್ ಭಾಗವಹಿಸಲಿದ್ದಾರೆ.

ಸಿದ್ದರಾಮೇಶ್ವರ ಜಯಂತೋತ್ಸವ ಕಾರ್ಯಕ್ರಮದಲ್ಲಿ ಭೋವಿ ಜನಾಂಗದ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸನ್ಮಾನ ಕಾರ್ಯಕ್ರಮವನ್ನು ಅಯೋ ಜಿಸಲಾಗಿದೆ. ಈ ಸಂದರ್ಭದಲ್ಲಿ ಬೋವಿ ಸಂಘದ ಜಿಲ್ಲಾಧ್ಯಕ್ಷರಾದ ಎಂ ಗುರ್ರಪ್ಪ, ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀನಿವಾಸ್, ದ್ಯಾವಪ್ಪ, ವೆಂಕಟರವಣಪ್ಪ,ಕೆಇಬಿ ಮಂಜುನಾಥ, ಮಣಿ, ಸೀತಾರಾಂಪುರ ಎಸ್ ಪಿ ಜಯರಾಮ್, ಕೆ ವಿ ರಾಮಪ್ಪ ಇದ್ದರು.

ಕೋಲಾರದಲ್ಲಿ ನಡೆದ ಕೋಲಾರ ಪತ್ರಿಕೆ ಸುವರ್ಣ ಸಂಭ್ರಮದಲ್ಲಿ ಇತಿಹಾಸ ತಜ್ಞ ಪ್ರೊ.ಕೆ.ಆರ್.ನರಸಿಂಹನ್ ಅಭಿನಂದನ ಸಂಪುಟ ನಿತ್ಯಶೋಧಕ ಬಿಡುಗಡೆ ಸಮಾರಂಭದಲ್ಲಿ ಹೈಕೋರ್ಟ್ ಹಿರಿಯ ವಕೀಲ ಬಿ.ಸಿ.ಸೀತಾರಾಮ್ ರಾವ್ ಮತ್ತು ಸಮಾಜಸೇವಕಿ ಜಾನಕಿ ಸೀತಾರಾಮ್ ಅಭಿನಂದಿಸಿದರು.

ಮೈತ್ರಿಕೂಟದ ತೆಕ್ಕೆಗೆ ಪಿಎಲ್‌ಡಿ ಬ್ಯಾಂಕ್

ಕೋಲಾರ: ನಗರದ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರ ಚುನಾವಣೆಯಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿಕೂಟ ಗೆಲುವು ಸಾಧಿಸಿದ್ದು, 8 ಕ್ಷೇತ್ರಗಳಲ್ಲಿ ವಿಜಯ ಪತಾಕೆ ಹಾರಿಸಿದೆ.

ಕೆ.ಎಂ.ವೆಂಕಟೇಶಪ್ಪ(ವೇಮಗಲ್ ಕ್ಷೇತ್ರ), ಮಂಜುನಾಥ್(ವಕ್ಕಲೇರಿ), ಅಂಬಿಕಾವೆಂಕಟೇಶ್(ದಕ್ಷಿಣ ಕಸಬಾ), ಯಲವಾರ ಸೊಣ್ಣೇಗೌಡ(ಉತ್ತರ), ವೆಂಕಟರಾಮಪ್ಪ(ವಡಗೂರು), ಹುತ್ತೂರು ಡೇರಿ ವೆಂಕಟೇಶ್(ಅವಿರೋಧ) ಮತ್ತು ತಲಗುಂದ ಶಿವಕುಮಾರ್ ಅವಿರೋಧ ಆಯ್ಕೆಯಾಗಿದ್ದಾರೆ.

ವಿಜೇತರನ್ನು ಅಭಿನಂದಿಸಿ ಮಾತನಾಡಿದ ದಳಪತಿ ಸಿಎಂಆರ್ ಶ್ರೀನಾಥ್, ಸಂಸದರ ಚುನಾವಣೆಯಿಂದ ಮೊದಲುಗೊಂಡು ಮೈತ್ರಿಕೂಟಕ್ಕೆ ವಿಜಯದ ಸರಮಾಲೆ ಸಿಕ್ಕುತ್ತಿದ್ದು ಮುಂದೆ ಬರುವ ಎಪಿಎಂಸಿ,ಗ್ರಾಮ ಪಂಚಾಯತಿ, ಜಿಲ್ಲಾ ಪಂಚಾಯತಿ ಮತ್ತು ತಾಲೂಕು ಪಂಚಾಯತಿಯಲ್ಲೂ ಒಟ್ಟಿಗೆ ಚುನಾವಣೆಯನ್ನು ಎದುರಿಸುವ ಮೂಲಕ ಗೆಲುವು ಸಾಧಿಸಲಾಗುತ್ತದೆ. ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರು-ಉಪಾಧ್ಯಕ್ಷರ ಚುನಾವಣೆಯನ್ನೂ ಸಹಾ ಯಾವುದೇ ಗೊಂದಲ ಇಲ್ಲದೆ ಮಾಡುವ ಮೂಲಕ ಮೈತ್ರಿಕೂಟಕ್ಕೆ ಅಧಿಕಾರ ಪಡೆಯುವುದಾಗಿ ತಿಳಿಸಿದರು.



ಕೋಲಾರ ಪಿಎಲ್‌ಡಿ ಬ್ಯಾಂಕ್ ಚುನಾವಣೆಯಲ್ಲಿ ವಿಜೇತರಾದ ನಿರ್ದೇಶಕರನ್ನು ದಳಪತಿ ಸಿಎಂಆರ್ ಶ್ರೀನಾಥ್-ಮಾಜಿ ಸಚಿವ ವರ್ತೂರ್ ಪ್ರಕಾಶ್ ಅಭಿನಂದಿಸಿದರು.

ಟಿಎಪಿಸಿಎಂಎಸ್ ಅಧ್ಯಕ್ಷ ವಡಗೂರು ರಾಮು, ಮುಖಂಡರಾದ ಬೆಗ್ಲಿಸೂರ್ಯಪ್ರಕಾಶ್, ನರಸಾಪುರ ಪೆಟ್ರೋಲ್ ಬಂಕ್ ಮಂಜುನಾಥ್, ಬಾಬುಮೌನಿ, ಬಣಕನಹಳ್ಳಿ ನಟರಾಜ್, ಮುನಿರಾಜು, ಸಿಎಂಆರ್ ಬಣದ ನಾಯಕ ಸುಧಾಕರ್ ಇದ್ದರು.

> ಆಡಳಿತ ಪಕ್ಷಕ್ಕೆ ಪಿಎಲ್‌ಡಿ ಬ್ಯಾಂಕ್ ನಾಮಿನಿ ದಕ್ಕುವುದರಿಂದಾಗಿ ಕಾಂಗ್ರೆಸ್ ಶಾಸಕರು ಹಾಗೂ ಎಂಎಲ್‌ಸಿ ಮೈತ್ರಿಕೂಟದಿಂದ ನಿರ್ದೇಶಕರನ್ನು ಹೊರಗೆಳೆಯಲು ಪ್ರಯತ್ನ ಮಾಡುವುದರಿಂದಾಗಿ ಯಾರೂ ಬಲೆಗೆ ಬೀಳಬಾರದು. ತಾಪಂ, ಜಿಪಂ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬೋಣಿಗೆ ಆಗದಂತೆ ಮಾಡಬೇಕು.
>
> ವರ್ತೂರ್ ಪ್ರಕಾಶ್, ಮಾಜಿ ಸಚಿವ

ಲೋಕ ಕಲ್ಯಾಣಕ್ಕಾಗಿ ಶನೈಶ್ಚರ ಮಹಾಯಾಗ

ಕುಣಿಗಲ್: ದೊಂಬರಹಟ್ಟಿ ಶ್ರೀಸತ್ಯ ಶನೇಶ್ವರ ಪುಣ್ಯ ಕ್ಷೇತ್ರದಲ್ಲಿ ಲೋಕ ಕಲ್ಯಾಣಕ್ಕಾಗಿ ಶ್ರೀಶನೀಶ್ವರ ಮಹಾಯಾಗ ಹಮ್ಮಿಕೊಳ್ಳಲಾಗಿತ್ತು ಎಂದು ಕ್ಷೇತ್ರದ ಧರ್ಮಾಧಿಕಾರಿ ಶ್ರೀಆನಂದ ಗುರೂಜಿ ತಿಳಿಸಿದರು ತಾಲೂಕು ಯಡಿಯೂರು ಹೋಬಳಿ ದೊಂಬರಹಟ್ಟಿ ಶ್ರೀಸತ್ಯ ಶನೇಶ್ವರ ಸ್ವಾಮಿ ಪುಣ್ಯ ಕ್ಷೇತ್ರದಲ್ಲಿ ನಾಡಿನ ಜನತೆಯ ಒಳಿತಿಗಾಗಿ ಭಕ್ತರು ಶ್ರೀಶನೀಶ್ವರನ ಮಹಾತ್ಮನ ದೃಷ್ಟಿ ಪರಿಹಾರಕ್ಕಾಗಿ ಲೋಕ ಕಲ್ಯಾಣದ ಅಭಿವೃದ್ಧಿಗಾಗಿ ಸಕಲ ಮಾನವ ಜೀವಿಗಳು ಈ ನಾಡಿನಲ್ಲಿ ಸಮೃದ್ಧವಾಗಿ ಬೆಳೆ ಆರೋಗ್ಯ ವೃದ್ಧಿಸುವಂತೆ ಪ್ರಾರ್ಥಿಸಿ ದೊಂಬರ ಹಟ್ಟಿ ಶ್ರೀಶನೇಶ್ವರ ಸ್ವಾಮಿ ಪುಣ್ಯ ಕ್ಷೇತ್ರದ ಧರ್ಮಾಧಿಕಾರಿಗಳು ಆದಂತಹ ಶ್ರೀಆನಂದ ಗುರೂಜಿಯವರ ನೇತೃತ್ವದಲ್ಲಿ ಶನೀಶ್ವರ ಮಹಾಯಾಗ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ನಾಡಿನ ವಿವಿಧ ಭಾಗಗಳಿಂದ ಸುಮಾರು 3500ಕ್ಕೂ ಹೆಚ್ಚು ಭಕ್ತಾದಿಗಳು ಈ ಶನೇಶ್ವರನ ಯಾಗದಲ್ಲಿ ಭಾಗವಹಿಸುವ ಮೂಲಕ ತಮ್ಮ ಭಕ್ತಿ ಸಮರ್ಪಣೆಯನ್ನ ಅಪ್ಪಿಸಿದರು. ಈ ಒಂದು ಕಾರ್ಯವನ್ನ ಗುರುಗಳಾದ ವಿದ್ಯಾ ಶಂಕರಾನಂದ ಸರಸ್ವತಿ ಸ್ವಾಮೀಜಿಗಳು ನಡೆಸಿಕೊಟ್ಟರು. ಈ ಒಂದು ಶನೀಶ್ವರನ ಮಹಾಯಾಗದಲ್ಲಿ ಸುಮಾರು 25ಕ್ಕೂ ಹೆಚ್ಚು ಆಗಮಿಕರು ಪುರೋಹಿತರು ಭಾಗವಹಿಸುವ ಮೂಲಕ ಈ ಮಹಾ ಯಾಗವನ್ನ ಲೋಕ ಕಲ್ಯಾಣಕ್ಕಾಗಿ ಸಮರ್ಪಿಸಿದರು. ಕುಲ ಕೋಟಿಗೆ ಭಕ್ತರಿಗೆ ಒಳ್ಳೆಯದು ಆಗಲೆಂದು ಈ ಯಾಗವನ್ನ ಕೈಗೊಳ್ಳಲಾಗಿದೆ ಎಂದು ಶ್ರೀಆನಂದ ಗುರೂಜಿ ರವರು ವಿವರಿಸಿದರು.

ಸಮಾಚಾರ ಸಣ್ಣದಲ್ಲ

ಹೊಂಗನೂರು ಶಾಲೆ ರಾಷ್ಟ್ರ ಮಟ್ಟಕ್ಕೆ ಆಯ್ಕೆ

ಚನ್ನಪಟ್ಟಣ: ಇತ್ತೀಚಿಗೆ ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕು ಆದಿಚುಂಚನಗಿರಿಯಲ್ಲಿ ನಡೆದ ರಾಜ್ಯ ಮಟ್ಟದ ಹ್ಯಾಂಡ್ ಬಾಲ್ ಪಂದ್ಯಾವಳಿಯಲ್ಲಿ ರಾಮನಗರ ಜಿಲ್ಲೆಯನ್ನು ಪ್ರತಿನಿಧಿಸಿದ್ದ ಹೊಂಗನೂರು ಸರಕಾರಿ ಪ್ರೌಢಶಾಲೆಯ ತಂಡವು ಪ್ರಥಮ ಸ್ಥಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದೆ. ಈ ಅಂಗವಾಗಿ ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಾದ ಕವನ, ಅರಸು, ಸ್ವಪ್ನ ಅರಸು, ಹಂಸಿತ, ಶೋಭಮ್ಮಣ್ಣಿ, ಬಿಂದು ಅರಸು, ಶರಣ್ಯ ರವರನ್ನು ಶಿಕ್ಷಣ ಇಲಾಖೆ ವತಿಯಿಂದ ಗೌರವಿಸಿ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ರಾಮಲಿಂಗಯ್ಯ, ದೈಹಿಕ ಶಿಕ್ಷಣ ಪರಿವೀಕ್ಷಕಿ ಭಾರತಿ ಬಬಲೇಶ್ವರ, ಬಿ. ಇ.ಒ ಕಚೇರಿಯ ಶಿಕ್ಷಣ ಸಂಯೋಜಕರಾದ ರಾಜಲಕ್ಷ್ಮಿ, ಹೊಂಗನೂರು ಸರಕಾರಿ ಪ್ರೌಢಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ವಿಜಯಕಾಂತ್, ಮುಖ್ಯಶಿಕ್ಷಕಿ ಬಾಲಸರಸ್ವತಿ, ತಾಲೂಕು ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಪದಾಧಿಕಾರಿಗಳಾದ ವೈ. ಕೆ.ಸುಧಾ, ನಾಗರಾಜು, ಸಂಗಯ್ಯ ಹಿರೇಮಠ, ದಿನೇಶ್, ಪ್ರಮೀಳಾ, ಆನಂದ್, ಕೃಷ್ಣಪ್ಪ, ಸಾಕಮ್ಮ, ಅಂಬೇಡ್ಕರ್ ವಸತಿ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ವೆಂಕಟೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸೇವೆಯಿಂದ ಡಾ.ಕಿರಣ್ ವಜಾಗೊಳಿಸಲು ಆಗ್ರಹ

ಚಾಮರಾಜನಗರ: ರೋಗಿಗೆ ಚಿಕಿತ್ಸೆ ನೀಡುವಲ್ಲಿ ನಿರ್ಲಕ್ಷ್ಯವಹಿಸಿರುವ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಭೋದನಾ ಆಸ್ಪತ್ರೆ ಎಚ್ ಒಡಿ ಡಾ.ಕಿರಣ್ ಟಿ ಅವರನ್ನು ಸೇವೆಯಿಂದ ಅಮಾನತು ಪಡಿಸದಿದ್ದರೆ ಹೋರಾಟ ಮಾಡುವುದಾಗಿ ಅಂಬೇಡ್ಕರ್ ಸೇನೆಯ ಜಿಲ್ಲಾಧ್ಯಕ್ಷ ಗಣೇಶ್ ಪ್ರಸಾದ್ ಎಚ್ಚರಿಸಿದರು. ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಹರದನಹಳ್ಳಿ ಗ್ರಾಮದ ಸುಬ್ರಹ್ಮಣ್ಯ ಹೊಟ್ಟೆನೋವಿನಿಂದ ಬಳಲುತ್ತಿದ್ದು, ಡಿ.20 ರಂದು ಸಿಮ್ಸ್ ಆಸ್ಪತ್ರೆಗೆ ದಾಖಲಾಗಿದ್ದು. ಡಾ.ಕಿರಣ್ ಟಿ ಅವರನ್ನು ಫೋನ್ ಮೂಲಕ ಚಿಕಿತ್ಸೆ ಕೊಟ್ಟಿದ್ದು, ನಾವು ಡೀನ್ ಅವರಿಗೆ ಫೋನ್ ಮಾಡಿ ಹೇಳಿದ ಮೇಲೆ ರೋಗಿ ಬಂದು ನೋಡಿ ಆಸ್ಪತ್ರೆಯಲ್ಲಿ ಸ್ಕ್ಯಾನ್ ಇದ್ದರೂ ಕೂಡ ಜಿಲ್ಲಾಸ್ಪತ್ರೆಗೆ ಸ್ಕ್ಯಾನ್ ಬರೆದು ಚಿಕಿತ್ಸೆ ನೀಡಲು ವಿಳಂಬ ಮಾಡಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಉಪಾಧ್ಯಕ್ಷ ಜಯಶಂಕರ ಮೂಕಳ್ಳಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನವೀನ್, ತಾಲೂಕು ಅಧ್ಯಕ್ಷ ಗೌತಮ್, ಉಪಾಧ್ಯಕ್ಷ ಅಮಿತ್, ಬಂಗಾರು, ಹಾಜರಿದ್ದರು.

ಕಸ್ತೂರು ಗ್ರಾಮದಲ್ಲಿ ಸಂಭ್ರಮದ ಬಂಡಿ ಜಾತ್ರೆ

ಚಾಮರಾಜನಗರ: ತಾಲೂಕಿನ ಕಸ್ತೂರು ಗ್ರಾಮ ದಲ್ಲಿ 16 ಹಳ್ಳಿಗಳ ದೊಡ್ಡಮ್ಮತಾಯಿ ಬಂಡಿ ಜಾತ್ರೆ ವಿಜೃಂಭಣೆಯಿಂದ ನಡೆಯಿತು. ಚಾಮರಾಜನಗರ ತಾಲೂಕಿನ ಹಾಗೂ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ 23 ಗ್ರಾಮಗಳಲ್ಲಿ ಹಬ್ಬ ಸಂಭ್ರಮ ಮನೆಮಾಡಿತು. ತಾಲೂಕಿನ ಮರಿ ಯಾಲ, ಕೆಲ್ಲಂಬಳ್ಳಿ, ಭೋಗಾಪುರ, ಬಸ ವನಪುರ, ಹೊನ್ನೇಗೌಡನಹುಂಡಿ, ಆನಹಳ್ಳಿ, ಮೂಕನಹಳ್ಳಿ, ಸಪ್ಪಯ್ಯನಪುರ, ಚಿಕ್ಕಹೊಮ್ಮ, ದೊಡ್ಡ ಹೊಮ್ಮ, ತೊರವಳ್ಳಿ, ಕಲ್ಲಹಳ್ಳಿ, ಮರಿಯಾಲದ ಹುಂಡಿ, ಹೆಗ್ಗವಾಡಿ, ಕರಡಿಮೋಳೆ, ಕಿರಗಸೂರು, ಹೆಗ್ಗವಾಡಿ ಪುರ, ಐತಾಳಪುರ, ಅಂಕಶಾಯನಪುರ, ದಾಸನೂರು ಸೇರಿದಂತೆ ಇತರೆ ಗ್ರಾಮಗಳ ಜನರು ಕಸ್ತೂರಿನ ಹೊರ ವಲಯದಲ್ಲಿ ರುವ ದೊಡ್ಡಮ್ಮತಾಯಿ ದೇವಸ್ಥಾನಕ್ಕೆ ಆಗಮಿಸಿ ಸರದಿ ಸಾಲಿನಲ್ಲಿ ನಿಂತು ದೊಡ್ಡಮ್ಮ ತಾಯಿ ಮೂರ್ತಿಗೆ ಪೂಜೆ ಸಲ್ಲಿಸಿ ಇಷ್ಟಾರ್ಥ ನೆರವೇರಿಸುವಂತೆ ಪ್ರಾರ್ಥಿಸಿದರು. ಹೊಸ ಬಟ್ಟೆ ತೊಟ್ಟ ಮಕ್ಕಳು, ಮಹಿಳೆ ಹಾಗೂ ವೃದ್ಧರು ಅಲಂಕೃತ ಎತ್ತಿನಗಾಡಿ, ದ್ವಿಚಕ್ರ ವಾಹನಗಳು, ಆಟೋ, ಕಾರುಗಳಲ್ಲಿ ಕಸ್ತೂರಿಗೆ ಆಗಮಿಸಿ ಜಾತ್ರೋತ್ಸವ ದಲ್ಲಿ ಪಾಲ್ಗೊಂಡರು. ದೊಡ್ಡಮ್ಮತಾಯಿ ಭಕ್ತರು ಪಂಜು ಹಿಡಿದು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿ ಪಂಜು ಹರಕೆ ತೀರಿಸಿದರು. ಎತ್ತುಗಳು ಹಾಗೂ ಹಸುಗಳ ಕೊಂಬುಗಳಿಗೂ ಪಂಜುಕಟ್ಟಿ ಪ್ರದಕ್ಷಿಣೆ ಹಾಕಿಸಿದರು.

ಸಂಘದ ಭವನ ನವೀಕರಣಕ್ಕೆ ಅನುದಾನ

ಕೆ.ಆರ್.ನಗರ: ಪತ್ರಕರ್ತರ ಸಂಘದ ಭವನದ ನವೀಕರಣಕ್ಕೆ ಅನುದಾನ ನೀಡುವುದರ ಜತೆಗೆ ಸಂಘದ ಕುಟುಂಬ ಸದಸ್ಯರಿಗೆ ಗುಂಪು ವಿಮೆ ಮಾಡಿಸಿ ಕೊಡುತ್ತೇನೆ ಎಂದು ಶಾಸಕ ಡಿ.ರವಿಶಂಕರ್ ಹೇಳಿದರು. ಪಟ್ಟಣದ ಪತ್ರಕರ್ತರ ಭವನದಲ್ಲಿ ನಡೆದ ಕ್ಯಾಲೆಂಡರ್, ಡೈರಿ ಬಿಡುಗಡೆ ಮತ್ತು ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು ಚುನಾಯಿತ ಸದಸ್ಯರುಗಳು ಮಾಡುವ ಸಮಾಜ ಮುಖಿ ಕೆಲಸಗಳನ್ನು ಪ್ರಕಟಿಸುವ ಮೂಲಕ ಅವರುಗಳಿಗೆ ಉತ್ತೇಜನ ನೀಡಬೇಕೆಂದರು. ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ವೆಂಕಟಪ್ಪ, ನಿರ್ದೇಶಕಿ ರೋಜಾಮಹೇಶ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಗಡ್ಡಮಹೇಶ್, ಪುರಸಭೆ ಸದಸ್ಯರಾದ ಕೋಳಿಪ್ರಕಾಶ್ ಹಾಜರಿದ್ದರು.

{ಸಿದ್ದರಾಮಯ್ಯ } ಮುಖ್ಯಮಂತ್ರಿ

ಬಸವಣ್ಣನವರು ಅಂತರ್ಜಾತಿ ವಿವಾಹ ಉತ್ತೇಜಿಸಿದ್ದರು, ಆದೇ ರೀತಿ ಈಗ ನಾವೆಲ್ಲ ಅಂತಹ ವಿವಾಹ ಉತ್ತೇಜಿಸುವ ಅಗತ್ಯ ಇದೆ. ಜಾತಿ ವ್ಯವಸ್ಥೆ ತೊಲಗಿ ಸಮ ಸಮಾಜ ನಿರ್ಮಾಣವಾಗಲು ಅಂತರ್ಜಾತಿ ವಿವಾಹ ಹೆಚ್ಚಬೇಕು. ಸಾಮೂಹಿಕ ವಿವಾಹಗಳಿಗೆ ಶ್ರೀಮಂತರು ತಮ್ಮ ಸಂಪತ್ತನ್ನು ಸ್ವಲ್ಪ ಬಳಸಬೇಕು.

ಹಳೆ ದಾಖಲೆಗಳಿಗೆ ಡಿಜಿಟಲ್ ಸ್ಪರ್ಶ, ದೇಶಕ್ಕೆ ಮಾದರಿ

ನಕ್ಷೆ ಸಹಿತ ಪಹಣಿ ವಿತರಣೆ, ಜನಸ್ಪಂದನ ಕಾರ್ಯಕ್ರಮಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಾಲನೆ

ರಾಮನಗರ: ಕನಕಪುರ ತಾಲೂಕಿನ ಉಯ್ಯಂಬಳ್ಳಿ ಹೋಬಳಿಯ ದೊಡ್ಡಆಲಹಳ್ಳಿಯಲ್ಲಿ ಮರು ಭೂಮಾಪನ ಯೋಜನೆಯಡಿ ಡಿಜಿಟಲ್ ಪಹಣಿ ವಿತರಣೆ ಹಾಗೂ ಜನಸ್ಪಂದನ ಕಾರ್ಯಕ್ರಮಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಇಡೀ ದೇಶಕ್ಕೆ ಮಾದರಿಯಾದ ಯೋಜನೆ ಇದಾಗಿದೆ, ನೂರಾರು ವರ್ಷಗಳ ಹಿಂದೆ ರೈತರ ಜಮೀನನ್ನು ಬ್ರಿಟಿಷರು ಸರ್ವೆ ಮಾಡಿದ್ದು ಬಿಟ್ಟರೆ ಮತ್ತೆ ಆ ಕಾರ್ಯ ನಡೆದಿಲ್ಲ. ಈ ಯೋಜನೆಯನ್ನು ಉಯ್ಯಂಬಳ್ಳಿ ಹೋಬಳಿಯಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರಲಾಗಿದೆ, ಮುಂದೆ ಇತರೆ ಹೋಬಳಿಗಳಲ್ಲೂ ಸಹ ಈ ರೀತಿಯ ಕಾರ್ಯಕ್ರಮ ಮಾಡಲಾಗುವುದು ಎಂದು ಹೇಳಿದರು.

ಉಯ್ಯಂಬಳ್ಳಿ ಹೋಬಳಿ ವ್ಯಾಪ್ತಿಯ 35 ಗ್ರಾಮಗಳ ಪೈಕಿ 33 ಗ್ರಾಮಗಳಲ್ಲಿ ಈ ಕಾರ್ಯ ಕೈಗೊಳ್ಳಲಾಗಿದೆ, ಉಳಿದ ಎರಡು ಗ್ರಾಮಗಳು ಕಾಡಂಚಿನ ವ್ಯಾಪ್ತಿಯಲ್ಲಿ ಬಂದಿವೆ, ಈ ಹಿಂದೆ ಅಲ್ಲಿ 5,804 ಸರ್ವೆಗಳಿದ್ದವು, ಇದೀಗ ಅಲ್ಲಿ 23,469 ಸರ್ವೆಗಳಾಗಿವೆ ಎಂದ ಅವರು, ಕನಕಪುರ ಕ್ಷೇತ್ರದಲ್ಲಿ ಶಾಸಕನಾದ ಬಳಿಕ ಎಂಟು ಸಾವಿರ ಜನಕ್ಕೆ ಬಗರ್ ಹುಕುಂನಡಿ ಜಮೀನು ಹಂಚಿಕೆ ಮಾಡಲಾಗಿದೆ ಎಂದರು.



ಕನಕಪುರ ತಾಲ್ಲೂಕಿನ ಉಯ್ಯಂಬಳ್ಳಿ ಹೋಬಳಿಯ ದೊಡ್ಡಆಲಹಳ್ಳಿಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಡಿಜಿಟಲ್ ಪಹಣಿ ವಿತರಣೆ ಮಾಡಿದರು.

ದೇಶದಾದ್ಯಂತ ನರೇಗಾದಡಿ ಅತಿ ಹೆಚ್ಚು ಮೊತ್ತ ಖರ್ಚು ಮಾಡಿದ್ದು ಕನಕಪುರ ತಾಲೂಕು. ಸಂಸದರಾಗಿದ್ದ ಸುರೇಶ್ ನೇತೃತ್ವದಲ್ಲಿ ಆ ಕಾರ್ಯ ಅಗಿತ್ತು, 120 ಕಡೆ ಶುದ್ಧ ಕುಡಿಯುವ ನೀರಿನ ಘಟಕ ಆರಂಭಿಸಿದ್ದೆವು, ಒಬ್ಬ ಅಥವಾ ಎರಡ್ಮೂರು ರೈತರಿಗೆ ಒಂದು ವಿದ್ಯುತ್ ಪರಿವರ್ತಕ ಅಳವಡಿಸಿದೆವು. ದೇಶದ ಯಾವ ಭಾಗದಲ್ಲಿ ಸಹ ಇದು ಆಗಿಲ್ಲ. ಆಸ್ತಿ ಮೌಲ್ಯವನ್ನು ಹೆಚ್ಚಿಸಿ ನಿಮ್ಮ ಬದುಕಿನಲ್ಲಿ ದೊಡ್ಡ ಬದಲಾವಣೆ ತರುವ ಕೆಲಸವನ್ನು ನಾನು ಮಾಡುತ್ತಿದ್ದೇನೆ ಎಂದರು.

ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂಬ ಹೆಸರು ಬದಲಾವಣೆ ಪ್ರಕ್ರಿಯೆ ಚುರುಕುಗೊಂಡಿದ್ದು, ಆ ಸಂಬಂಧದ ಕಡತ ಕಾರ್ಯಗಳು ದೆಹಲಿಯಲ್ಲಿ ನಡೆಯುತ್ತಿದೆ, ಅದಕ್ಕೆ ಎನ್.ಒ.ಸಿ ಆಗಿದೆ. ಸದ್ಯದಲ್ಲೇ ಜಿಲ್ಲೆಯ ಹೆಸರು ಬೆಂಗಳೂರು ದಕ್ಷಿಣ ಆಗಲಿದೆ. ಯಾರೋ ಏಜೆಂಟ್ ಬಂದ ಎಂದು ಯಾರೂ ಜಮೀನು ಮಾರಾಟ ಮಾಡಿಕೊಳ್ಳಬೇಡಿ. ನಾವು ಬೆಂಗಳೂರು ಜಿಲ್ಲೆಯವರು. ನಾನು ಬೆಂಗಳೂರು ಗ್ರಾಮಾಂತರ ಜಿ.ಪಂ. ಸದಸ್ಯನಾಗಿದ್ದು ಇಲ್ಲೇ. ರಾಮನಗರ ಜಿಲ್ಲಾ ಕೇಂದ್ರವಾಗಿಯೇ ಇರಲಿದೆ ಎಂದು ಹೇಳಿದರು.

ಈ ವಿನೂತನ ಯೋಜನೆಯನ್ನು ತಾಲ್ಲೂಕು ಜೊತೆಗೆ ಇಡೀ ರಾಜ್ಯಕ್ಕೆ ಯೋಜನೆ ವಿಸ್ತರಣೆ ಮಾಡಲಾಗುವುದು, ಕಾವೇರಿ ನದಿಯಿಂದ 108 ಕೋಟಿ ರೂಪಾಯಿಗಳ ವೆಚ್ಚದಲ್ಲಿ 21 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಡಿಪಿಆರ್ ತಯಾರಾಗಿದೆ. ತಾಲ್ಲೂಕಿನಲ್ಲಿ ರೈತರ ಜಮೀನಿನಲ್ಲಿ ಸೌರ ಫಲಕ ಅಳವಡಿಕೆ ಮಾಡಿಸಿದ್ದೇವೆ, ಕನಕಪುರದಲ್ಲಿ ಕೈಗಾರಿಕೆ ಸ್ಥಾಪಿಸಿ ಬೆಂಗಳೂರಿಗೆ ವಲಸೆ ಹೋಗುವುದನ್ನು ತಪ್ಪಿಸುವ ಕೆಲಸ ಮಾಡಲಾಗುತ್ತಿದೆ ಎಂದರು.

ಜನಸ್ಪಂದನ ಸಭೆಯಲ್ಲಿ 400 ಅರ್ಜಿ ಸ್ವೀಕಾರವಾಗಿವೆ, ಜಿಲ್ಲೆಯಲ್ಲಿ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಅವರಿಂದ ಜನೋಪಯೋಗಿ ಕೆಲಸ ಕಾರ್ಯಗಳಾಗುತ್ತಿವೆ, ಜಿಲ್ಲೆಯಲ್ಲಿ ಇಸ್ಪೀಟ್ ಆಡಿಸಲು ಅವಕಾಶ ನೀಡಬಾರದು ಎಂದು ಎಸ್ಪಿಯವರಿಗೆ ಸೂಚಿಸಿರುವೆ ಎಂದರು.

ಸಾರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿ ಅವರು ಮಾತನಾಡಿ, ರಾಜ್ಯ ಸರಕಾರ ನುಡಿದಂತೆ ನಡೆಯುತ್ತಿದೆ, ಆಧುನಿಕ ತಂತ್ರಜ್ಞಾನದ ಮೂಲಕ ಜಮೀನನ್ನು ಸರ್ವೆ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಲಾಗುತ್ತಿದೆ, ಈ ಮೂಲಕ ಅನಗತ್ಯವಾಗಿ ರೈತರು ಸರ್ಕಾರಿ ಕಚೇರಿಗಳಿಗೆ ಅಲೆಯುವುದನ್ನ ತಪ್ಪಿಸುವ ಕೆಲಸ ಮಾಡಲಾಗುತ್ತಿದೆ, ರೈತರ ಎಲ್ಲಾ ಕೆಲಸಗಳು ಸರಳೀಕರಣ ಆಗುವಂತೆ ಮಾಡಲಾಗುತ್ತಿದೆ ಎಂದರು.

ಇಂದು ಪ್ರಾಯೋಗಿಕವಾಗಿ ಉಯ್ಯಂಬಳ್ಳಿ ಹೋಬಳಿಯಲ್ಲಿ ಆಧುನಿಕ ತಂತ್ರಜ್ಞಾನದ ಸರ್ವೆ ಮಾಡಲಾಗಿದೆ, ಮುಂಬರುವ ದಿನಗಳಲ್ಲಿ ಜಿಲ್ಲೆಯ ಎಲ್ಲಾ ಜಮೀನುಗಳ ಸರ್ವೆ ಆಧುನಿಕ ತಂತ್ರಜ್ಞಾನದ ಮೂಲಕ ನಡೆಯಲಿದೆ ಎಂದರು.

ಮಾಜಿ ಸಂಸದ ಡಿ.ಕೆ.ಸುರೇಶ್ ಮಾತನಾಡಿ, ಈ ಯೋಜನೆ ರಾಜ್ಯದಲ್ಲಿಯೇ ಮೊದಲ ಪ್ರಯತ್ನ, ಇದರಿಂದ ರೈತರಿಗೆ ಬಹಳ ಅನುಕೂಲ ಆಗಲಿದೆ, ಈಗ ಕನಕಪುರದಲ್ಲಿ ಪ್ರಾರಂಭ ಆಗಿದೆ, ಮುಂದೆ ಇಡೀ ರಾಜ್ಯದಲ್ಲಿ ಪ್ರಾರಂಭವಾಗಲಿದೆ ಎಂದು ಹೇಳಿದರು.

> **ಬೆಂಗಳೂರಿನಲ್ಲಿ ಪೋಡಿ ಮಾಡಿಸಿಕೊಳ್ಳಲು ಸಾಕಷ್ಟು ಸಮಸ್ಯೆ ಇದೆ, ನಮ್ಮ ಹೋಬಳಿಯ ಜನ ಅದೃಷ್ಟವಂತರು. ಇಲ್ಲಿ ಉಚಿತವಾಗಿ ಪೋಡಿ ಕೆಲಸ ಆಗುತ್ತಿದೆ. ಯೋಜನೆಯಡಿ ಏನಾದರೂ ದೋಷವಿದ್ದರೂ ಸರಿಪಡಿಸಲು ಅವಕಾಶವಿದೆ. ಬೆಂಗಳೂರಿನಲ್ಲಿ ಸಹ ಎಲ್ಲಾ ದಾಖಲೆಗಳನ್ನು ಸ್ಕ್ಯಾನ್ ಮಾಡಿಸಿ ಅಲ್ಲಿ ಸಹ ಕ್ರಾಂತಿ ಮಾಡಲು ವೇದಿಕೆ ಸಿದ್ಧ ಮಾಡಲಾಗುತ್ತಿದೆ.**
> **ಡಿ.ಕೆ.ಶಿವಕುಮಾರ್**, ಉಪ ಮುಖ್ಯಮಂತ್ರಿ

ಕಂದಾಯ ಹಾಗೂ ಭೂ ದಾಖಲೆಗಳ ಇಲಾಖೆ ಆಯುಕ್ತ ಮಂಜುನಾಥ್, ವಿಧಾನ ಪರಿಷತ್ ಸದಸ್ಯ ಎಸ್. ರವಿ, ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ದಿಗ್ವಿಜಯ್ ಬೋಡ್ಕೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸ ಗೌಡ, ಅಪರ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ, ಉಪ ವಿಭಾಗಾಧಿಕಾರಿ ಬಿನೋಯ್ ಪಿ.ಕೆ, ತಹಶೀಲ್ದಾರ್ ಮಂಜುನಾಥ್, ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ವಿಜಯದೇವ್, ಬಮೂಲ್ ಅಧ್ಯಕ್ಷ ರಾಜಕುಮಾರ್ ವೇದಿಕೆಯಲ್ಲಿದ್ದರು.

ಸಾಹಿತ್ಯ ಸಮ್ಮೇಳನದ ಯಶಸ್ವಿಗೆ ಸಹಕರಿಸಿ

ಸರಗೂರು: ವನಜಲಸಿರಿ ನಾಡಿನಲ್ಲಿ ಇದೇ ಮೊದಲ ಬಾರಿಗೆ ನಡೆಯುತ್ತಿರುವ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅದ್ದೂರಿ ಯಶಸ್ವಿಗೆ ಎಲ್ಲರೂ ಸಹಕರಿಸಬೇಕು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ನಾಮಧಾರಿಗೌಡ ಸಮುದಾಯ ಭವನದಲ್ಲಿ ಶನಿವಾರ ನಡೆದ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ, ''ನೂತನ ತಾಲೂಕಿನಲ್ಲಿ ಜ.17ರಂದು ನಡೆಯುವ ನುಡಿಜಾತ್ರೆ ವಿಜೃಂಭಣೆಯಿಂದ ನಡೆಯಬೇಕು. ಸಾಹಿತ್ಯಾಸಕ್ತರನ್ನು ಸೇರಿಸುವ ಕೆಲಸ ಎಲ್ಲರೂ ಜವಾಬ್ದಾರಿಯಾಗಿದ್ದು, ತಾಲೂಕು ಮಟ್ಟದ ಅಧಿಕಾರಿಗಳು ಇದರ ಯಶಸ್ವಿಗೆ ಶ್ರಮಿಸಬೇಕು'' ಎಂದು ಸಲಹೆ ನೀಡಿದರು.

''ನುಡಿಜಾತ್ರೆ ನಡೆಯುವ ಸಂದರ್ಭದಲ್ಲಿ ಬುಕ್ ಸ್ಟಾಲ್ ತೆರೆಯಬೇಕು. ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಮುಂದಾಗಬೇಕು. ಸಾಹಿತ್ಯಾಸಕ್ತರನ್ನು ಕರೆತರಲು ಸಾರಿಗೆ ಬಸ್ ಸೌಲಭ್ಯ ಒದಗಿಸಬೇಕು. ಯಾವುದೇ ಅಹಿತಕರ ಘಟನೆ ಜರುಗದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಅಧಿಕಾರಿಗಳು ಸಕಲ ಸಿದ್ಧತೆ ಮಾಡಿಕೊಳ್ಳಬೇಕು. ಮಾದರಿ ಸಮ್ಮೇಳನವಾಗಿ ರೂಪುಗೊಳ್ಳುವಂತೆ ಅಧಿಕಾರಿಗಳು ಸ್ಪಂದಿಸುವ ಕೆಲಸ ಮಾಡಬೇಕು'' ಎಂದು ಅವರು ಹೇಳಿದರು.

ಜಿಪಂ ಮಾಜಿ ಸದಸ್ಯರಾದ ಪಿ.ರವಿ, ಅವರು ಮಾತನಾಡಿ ಕನ್ನಡ ಸಾಹಿತ್ಯ ಸಮ್ಮೇಳನದ ರೂಪು ರೇಷೆ ಬಗ್ಗೆ ಮಾಹಿತಿ ನೀಡಿದರು. ಕೋಟೆ ಕಸಾಪ ಅಧ್ಯಕ್ಷ ಕನ್ನಡ ಪ್ರಮೋದ್ ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ಜಿಪಂ ಮಾಜಿ ಸದಸ್ಯರಾದ ಪಿ.ರವಿ, ಭಾಗ್ಯಲಕ್ಷ್ಮಿ, ಸಿ.ಕೆ.ಗಿರೀಶ್, ಎಂ.ಪಿ.ಮನುಗನಹಳ್ಳಿ ಮಂಜು ಮಾತನಾಡಿದರು. ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ಶ್ರೀನಿವಾಸ್, ಚಲುವಕೃಷ್ಣ, ನೂರಾಳಸ್ವಾಮಿ, ಚಂದ್ರಕಲಾ ರಾಜಣ್ಣ, ಮುಖಂಡರಾದ ರಾಮು, ಸ್ವಾಮಿ, ಶಂಭುಲಿಂಗನಾಯಕ, ಭೀಮರಾಜು, ತಹಸೀಲ್ದಾರ್ ಮೋಹನಕುಮಾರಿ, ತಾಪಂ ಇಒ ಪ್ರೇಮ್ ಕುಮಾರ್, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸಂತೋಷ್, ಚೆನ್ನಿಪುರ ಚಲುವರಾಜು, ಹೋಬಳಿ ಘಟಕದ ಅಧ್ಯಕ್ಷ ಕಂದೇಗಾಲ ಶಿವರಾಜು, ಗ್ರಾಮೀಣ ಮಹೇಶ್,ವನಸಿರಿ ಉಮೇಶ್ ಸೇರಿದಂತೆ ಇಲಾಖಾಧಿಕಾರಿಗಳು ಹಾಜರಿದ್ದರು.

ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆಯಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರು ಆಹ್ವಾನ ಪತ್ರಿಕೆ ಬಿಡುಗಡೆಗೊಳಿಸಿದರು.

> **ತಾಲೂಕಿನ ನಾನಾ ಕಲಾವಿದರು ಸಮ್ಮೇಳನದಲ್ಲಿ ಭಾಗಿಯಾಗಲಿದ್ದು, ನಾನಾ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಇರಲಿದೆ. ಇದಲ್ಲದೆ ಹಾಸ್ಯ ಕಲಾವಿದರಿಂದಲೂ ಮಿಮಿಕ್ರಿ ಕಾರ್ಯಕ್ರಮ ಇರಲಿದೆ.**
> **ಎಂ.ಕೆಂಡಗಣ್ಣಸ್ವಾಮಿ**, ಕಸಾಪ ಅಧ್ಯಕ್ಷ

ಗೆಳೆಯರ ಬಳಗದಿಂದ ವಿಷ್ಣುವರ್ಧನ್ ಪುಣ್ಯ ಸ್ಮರಣೆ

ಚಾಮರಾಜನಗರ: ನಗರದ ಹಳೇ ಖಾಸಗಿ ಬಸ್ ನಿಲ್ದಾಣದಲ್ಲಿ ಡಾ. ವಿಷ್ಣು ಸೇನಾ ಗೆಳೆಯರ ಬಳಗದಿಂದ ಕರ್ನಾಟಕ ಶ್ರೇಷ್ಠ ರತ್ನ, ಸಾಹಸ ಸಿಂಹ ಡಾ. ವಿಷ್ಣುವರ್ಧನ್ ಅವರ 15 ವರ್ಷದ ಪುಣ್ಯ ಸ್ಮರಣೆ, 2025ನೇ ವರ್ಷದ ನೂತನ ಕ್ಯಾಲೆಂಡರ್ ಅನ್ನು ಬಿಡುಗಡೆ, ಅನ್ನ ಸಂತರ್ಪಣೆ, ದಿನಪೂರ್ತಿ ವಿಷ್ಣುವರ್ಧನ್ ನಟನೆಯ ಚಲನಚಿತ್ರ ಗೀತೆಗಳನ್ನು ಹಾಕಿ ನುಡಿನಮನ ಸಲ್ಲಿಸಿದರು.

ನಗರದ ಮಾರಮ್ಮನ ದೇವಸ್ಥಾನದ ಮುಂಭಾಗ ಶಾಮಿಯಾನ ಹಾಕಿ ಮಧ್ಯಾಹ್ನ ಗಂಟೆಗೆ ಡಾ.ವಿಷ್ಣುವರ್ಧನ್ ಅವರ ಪ್ಲೆಕ್ಸ್‌ಗೆ ದೊಡ್ಡಗಾತ್ರದ ಹೂವಿನ ಹಾರ ಹಾಕಿ ಅಲಂಕಾರ ಮಾಡಿ, ವಿಶೇಷ ಪೂಜೆ ಮಾಡಿದ ಅಭಿಮಾನಿಗಳ ಬಳಗದವರು ವಿಷ್ಣು ಪರ ಜಯಕಾರ ಕೂಗಿದರು. ವಿಷ್ಣು ವರ್ಧನ ಭಾವಚಿತ್ರವಿರುವ 2025ನೇ ಸಾಲಿನ ನೂತನ ಕ್ಯಾಲೆಂಡರ್ ಅನ್ನು ಬಿಡುಗಡೆ ಗೊಳಿಸಿದರು. ನಂತರ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಮಾಡಲಾಯಿತು.

ಡಾ.ವಿಷ್ಣುವರ್ಧನ್ ಅವರ 15 ವರ್ಷದ ಪುಣ್ಯ ಸ್ಮರಣೆ ಆಚರಣೆ ಮಾಡಿ ಅನ್ನ ಸಂತರ್ಪಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಬಳಗದ ರಾಜೇಂದ್ರ, ಸಾಹಸ ಸಿಂಹ, ಕನ್ನಡಿಗರ ಕಣ್ಮಣಿ ಡಾ. ವಿಷ್ಣುವರ್ಧನ್ ಮಾನವೀಯ ಮೌಲ್ಯಗಳ ಹರಿಕಾರರಾಗಿ, ಉತ್ತಮ ನಟನೆಯ ಮೂಲಕ ಜನ ಮಾನಸದಲ್ಲಿ ಇನ್ನು ಅಚ್ಚ ಹಸಿರಾಗಿದ್ದಾರೆ. ತಮ್ಮ ಸಿನಿಮಾಗಳಲ್ಲಿ ಜೀವನ ರೂಪಿಸಿಕೊಳ್ಳುವ ಸಂದೇಶಗಳನ್ನು ನೀಡುವ ಜೊತೆಗೆ ಅದರಂತೆ ನಡೆದುಕೊಂಡು ವ್ಯಕ್ತಿ ವಿಷ್ಣುದಾದ ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ವಿಷ್ಣು ಗೆಳೆಯರ ಬಳಗದ ರಾಜೆಂದ್ರ, ಸ್ವೀಟ್ ಮಹೇಶ್, ಜಗ್ಗಿ, ಗದಾ, ವಿರಾಟ್, ಮಣಿ, ಪವನ್, ಮಹೇಶ್ ಮಿಠಾಯಿ, ಸ್ವಾಮಣ್ಣ, ವೈಭವ್, ಚಂದ್ರು, ವಿನಯ್, ಜವರ ಮೊದಲಾದವರು ಇದ್ದರು.

ದೇವಾಲಯದಲ್ಲಿ ವೈಕುಂಠ ಏಕಾದಶಿ ಸಂಭ್ರಮ

ಕೆ.ಆರ್.ಪೇಟೆ: ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ಶ್ರೀಭೂದೇವಿ ಸಮೇತ ಶ್ರೀ ಚನ್ನಕೇಶವಸ್ವಾಮಿ ದೇವಾಲಯದಲ್ಲಿ ವೈಕುಂಠ ಏಕಾದಶಿ ಮಹೋತ್ಸವ ಕಾರ್ಯಕ್ರಮವು ಶ್ರದ್ಧಾ ಭಕ್ತಿಯಿಂದ ನಡೆಯಿತು. ಮುಂಜಾನೆ 5.30ಗಂಟೆಯಿಂದ ಶ್ರೀಸ್ವಾಮಿಗೆ ಪಂಚಾಮೃತ ಅಭಿಷೇಕ, ಪುಷ್ಪಾಭಿಷೇಕ, ಕ್ಷೀರಾಭಿಷೇಕ, ಮಹಾಮಂಗಳಾರತಿ ಮತ್ತಿತರ ಪೂಜೆ ಪುನಸ್ಕಾರಗಳು ನಡೆದವು. ನಂತರ ಸರ್ವಾಲಂಕಾರಗೊಂಡ ಶ್ರೀಚನ್ನಕೇಶವಸ್ವಾಮಿಯ ದರ್ಶನಕ್ಕೆ ಹಾಗೂ ಪೂಜೆ ಅವಕಾಶ ಕಲ್ಪಿಸಲಾಯಿತು. ದೇವಾಲಯದ ಹೊರ ಆವರಣದಲ್ಲಿ ಉತ್ತರಾಭಿಮುಖ ವೈಕುಂಠ ದ್ವಾರಪ್ರವೇಶದ ಮೂಲಕ ಭಕ್ತಾದಿಗಳು ದೇವಾಲಯಕ್ಕೆ ಆಗಮಿಸಿ ಪೂಜೆ ಸಲ್ಲಿಸಿದರು. ಬೆಳಿಗ್ಗೆ, ಸಂಜೆಯವರೆಗೆ ಪೂಜೆ, ದೇವರ ದರ್ಶನ, ಮಂಗಳಾರತಿ, ಪ್ರಸಾದ ವಿನಯೋಗ ಕಾರ್ಯಕ್ರಮಗಳು ನಡೆದವು. ವೈಕುಂಠ ಏಕಾದಶಿಯ ಅಂಗವಾಗಿ ಶ್ರೀಚನ್ನಕೇಶವಸ್ವಾಮಿ ದೇವಾಲಯದಲ್ಲಿ ಗ್ರಾಮದೇವತೆ ಶ್ರೀಲಕ್ಷ್ಮೀದೇವಮ್ಮ ಉತ್ಸವ ಮೂರ್ತಿಗೂ ಪೂಜೆ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಗಾಯಕ ಅಬಾರಾಶೆ ಚಂದ್ರಶೇಖರ್ ಮತ್ತು ತಂಡದವರು ಭಕ್ತಿಗೀತೆ, ಜಾನಪದ ಗೀತಗಾಯನ ನಡೆಸಿಕೊಟ್ಟರು. ಪ್ರಧಾನ ಅರ್ಚಕ ಸುಬ್ಬರಾಮು, ಗುಂಡಪ್ಪ, ಸುಬ್ಬಕೃಷ್ಣಯ್ಯ (ಪಾಪಚ್ಚಿ) ನೇತೃತ್ವದಲ್ಲಿ ಪೂಜಾ ಕಾರ್ಯಕ್ರಮಗಳು ನಡೆದವು.

ಬರವಣಿಗೆಗೆ ಅತ್ಯದ್ಭುತವಾದ ಶಕ್ತಿ ಇದೆ

ಮಡಿಕೇರಿ: ಬರವಣಿಗೆಗೆ ಮನುಷ್ಯನ ಜೀವನವನ್ನು ಬದಲಾಯಿಸುವ ಅದ್ಭುತವಾದ ಶಕ್ತಿ ಇದೆ ಎಂದು ಬ್ಲೂ ಡಾರ್ಟ್ ಸಲಹೆಗಾರ ಹಾಗೂ ಹಿರಿಯ ಕ್ರೀಡಾಪಟು ಬಾಳೆಯಡ ಕಾಳಪ್ಪ ಅಭಿಪ್ರಾಯಪಟ್ಟಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಕೊಡವ ಮಕ್ಕಡ ಕೂಟದ 108ನೇ ಮತ್ತು ಲೇಖಕಿ ಹಂಚೆಟ್ಟಿರ ಫ್ಯಾನ್ಸಿ ಮುತ್ತಣ್ಣ ರಚಿತ 10ನೇ ಪುಸ್ತಕ ''ಜೇನು ಗೂಡು'' ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಪುಸ್ತಕಗಳು ಮನುಷ್ಯನ ಜೀವನದಲ್ಲಿ ಬದಲಾವಣೆಯನ್ನು ತರಲು ಶಕ್ತವಾಗಿವೆ, ಬರಹಗಾರರು ತಮಗಾಗಿ ಅಥವಾ ಸಮಾಜದ ಕಲ್ಯಾಣಕ್ಕಾಗಿ ಪುಸ್ತಕಗಳನ್ನು ಬರೆಯಬಹುದು. ಆದರೆ ಬರವಣಿಗೆಯಲ್ಲಿರುವ ಶಕ್ತಿ ಸಾಮಾಜಿಕ ಪರಿವರ್ತನೆಗೆ ಸಹಕಾರಿಯಾಗಿದೆ ಎಂದರು.

ಪುಸ್ತಕಗಳನ್ನು ಹೆಚ್ಚು ಓದುವ ಮೂಲಕ ಉತ್ತಮ ಸಂದೇಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಬರೆಯುವುದರಿಂದ ಅಥವಾ ಓದುವ ಹವ್ಯಾಸದಿಂದ ಜೀವನದ ಕುಂದು ಕೊರತೆ ಮತ್ತು ವ್ಯತ್ಯಾಸಗಳು ದೂರವಾಗುತ್ತವೆ ಎಂದರು.

ಇಂದು ಬಿಡುಗಡೆಯಾದ ಜೇನು ಗೂಡು ಪುಸ್ತಕ ಮನುಷ್ಯನ ಜೀವನದ ವಾಸ್ತವಕ್ಕೆ ಹತ್ತಿರವಾಗಿದೆ. ಬರವಣಿಗೆಯಲ್ಲಿ ಬಲವಿದೆ, ಪ್ರಭಾವ ಬೀರುವ ಶಕ್ತಿ ಹೊಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

''ಜೇನು ಗೂಡು'' ಪುಸ್ತಕದ ಬರಹಗಾರ್ತಿ ಹಂಚೆಟ್ಟಿರ ಫ್ಯಾನ್ಸಿ ಮುತ್ತಣ್ಣ ಮಾತನಾಡಿ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಅಂಶಗಳು ಪುಸ್ತದಲ್ಲಿದ್ದು, ಓದುಗರು ಇದನ್ನು ಗಮನಿಸಿದರೆ ನನ್ನಲ್ಲಿ ಧನ್ಯತಾಭಾವ ಮೂಡಲಿದೆ. ಪ್ರತಿಯೊಬ್ಬರು ಪುಸ್ತಕ ಕೊಂಡು ಓದಿ ಎಂದು ಮನವಿ ಮಾಡಿದರು.

''ಜೇನು ಗೂಡು'' ಪುಸ್ತಕವನ್ನು ಹಿರಿಯ ಕ್ರೀಡಾಪಟು ಬಾಳೆಯಡ ಕಾಳಪ್ಪ ಅವರು ಬಿಡುಗಡೆಗೊಳಿಸಿದರು.

> **ಮಕ್ಕಳ ಜೀವನದಲ್ಲಿ ತಂದೆ ತಾಯಿಗಳ ಪಾತ್ರ ದೊಡ್ಡದಾಗಿರುತ್ತದೆ. ತಂದೆ ನಂಬಿಕೆಯಾದರೆ, ತಾಯಿ ಸತ್ಯವಾಗುತ್ತಾಳೆ, ಇವರಿಬ್ಬರು ದೇವರಿಗೆ ಸಮಾನರು. ಇಂದಿನ ಮನುಕುಲ ವಸ್ತುಗಳ ಬಗ್ಗೆ ಹೆಚ್ಚು ಆಸಕ್ತಿ ತೋರುತ್ತಿದ್ದು, ಜೀವಮಾನದ ಮೇಲಿನ ಕಾಳಜಿ ಕಡಿಮೆಯಾಗುತ್ತಿದೆ.**
> **ಬಾಳೆಯಡ ಕಾಳಪ್ಪ**, ಹಿರಿಯ ಕ್ರೀಡಾಪಟು

ಮಡಿಕೇರಿ ಕೊಡವ ಸಮಾಜದ ನಿರ್ದೇಶಕಿ ಬೊಪ್ಪಂಡ ಸರಳ ಕರುಂಬಯ್ಯ ಮಾತನಾಡಿ ಮಕ್ಕಳು ಪುಸ್ತಕಗಳನ್ನು ಹೆಚ್ಚು ಓದಬೇಕು, ಈಗಿನ ಮಕ್ಕಳು ಇಂಗ್ಲೀಷ್ ಪುಸ್ತಕಗಳನ್ನಷ್ಟೇ ಓದುವ ಹವ್ಯಾಸ ಹೊಂದಿದ್ದಾರೆ. ಇಂಗ್ಲೀಷ್ ನೊಂದಿಗೆ ಕನ್ನಡವನ್ನು ಕೂಡ ಓದಲಿ ಎಂದು ಕಿವಿಮಾತು ಹೇಳಿದರು.

ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ, ಮೂರ್ನಾಡು ಕೊಡವ ಸಮಾಜದ ಪೊಮ್ಮಕ್ಕಡ ಒಕ್ಕೂಟದ ಅಧ್ಯಕ್ಷೆ ಪಳಂಗಂಡ ರೇಖಾ ತಮ್ಮಯ್ಯ, ಕೊಡವ ಮಕ್ಕಡ ಕೂಟದ ನಿರ್ದೇಶಕಿ ಹಾಗೂ ಬರಹಗಾರ್ತಿ ಕರವಂಡ ಸೀಮಾ ಗಣಪತಿ ಉಪಸ್ಥಿತರಿದ್ದರು.

ಕುಡಿತದಿಂದ ಹೊರ ಬರಲು ಡಾ.ಲೋಹಿತ್ ಸಲಹೆ

ಮೈಸೂರು: ವ್ಯಸನಿಗಳು ಕುಡಿತದಿಂದ ಹೊರಬಂದು ಉತ್ತಮ ಸಮಾಜ ನಿರ್ಮಿಸಿ ಎಂದು ಮೈಸೂರು ವಿಶ್ವವಿದ್ಯಾನಿಲಯದ ಐ.ಕ್ಯು.ಎ.ಸಿ. ಸಂಯೋಜಕ ಡಾ.ಜೆ.ಲೋಹಿತ್ ಸಲಹೆ ನೀಡಿದರು.

ಬಸವಮಾರ್ಗ ವ್ಯಸನಮುಕ್ತ ಹಾಗೂ ಪುನರ್ವಸತಿ ಕೇಂದ್ರದ ವತಿಯಿಂದ ಆಯೋಜಿಸಿರುವ 10 ದಿನಗಳ ಉಚಿತ ಕುಡಿತ ಬಿಡಿಸುವ ಶಿಬಿರದ ಹಿನ್ನೆಲೆಯಲ್ಲಿ ಸ್ವಾಮಿ ವಿವೇಕಾನಂದರ ಜಯಂತಿ ಅಂಗವಾಗಿ ಸಂಸ್ಥೆಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸುಲಭವಾಗಿ ಯಾವುದೇ ಕೆಲಸ ಆಗುವುದಿಲ್ಲ, ಯಶಸ್ಸಿಗೆ ಶ್ರಮವಹಿಸಬೇಕು. ಜೀವನ ಕೆಡಿಸಿಕೊಳ್ಳುವುದು ಸುಲಭ, ಆದರೆ ಮತ್ತೆ ಅದನ್ನು ಸರಿಪಡಿಸಿಕೊಳ್ಳುವುದು ಬಹಳ ಕಷ್ಟ. ಹಾಗಾಗಿ ಸಿಕ್ಕಿರುವ ಈ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರತಿಯೊಬ್ಬರಿಗೂ ಒಂದಲ್ಲ ಒಂದು ರೀತಿಯ ಚಟ ಇರುತ್ತದೆ. ಆದರೆ ಚಟ ನಮ್ಮ ಮತ್ತು ನಮ್ಮ ಕುಟುಂಬ ನೆಮ್ಮದಿಯ ವ್ಯವಸ್ಥೆಯನ್ನೇ ಹಾಳು ಮಾಡಬಾರದು. ಶಕ್ತಿಯೇ ಜೀವನ, ದೌರ್ಬಲ್ಯವೇ ಮರಣ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ನಿಮ್ಮನ್ನು ಸದೃಢರನ್ನಾಗಿಸುವ ವಿಷಯ ನರಕದಲ್ಲಿ ಇದ್ದರೂ ಹೋಗಿ ತೆಗೆದುಕೊಂಡು ಬನ್ನಿ. ಆದರೆ ನಿಮ್ಮನ್ನು ದುರ್ಬಲರನ್ನಾಗಿ ಮಾಡುವ ವಿಷಯ ಸ್ವರ್ಗದಲ್ಲಿ ಇದ್ದರೂ ಅದನ್ನೂ ಕಾಲಿನ ಕಿರು ಬೆರಳಿನಲ್ಲೂ ಮುಟ್ಟಬೇಡಿ ಎಂದು ಸಲಹೆ ನೀಡಿದರು.

ಪ್ರತಿ ಹಂತದಲ್ಲೂ ಸವಾಲು, ಸೋಲು ಇದ್ದೆ ಇರುತ್ತದೆ. ಸಾಗರದಲ್ಲಿ ಒಂದು ಮೀನು ಸತ್ತರೆ ಸಮುದ್ರಕ್ಕೆ ನಷ್ಟವಿಲ್ಲ. ಹಾಗೇ ನಾವು ಸತ್ತರೆ ಜಗತ್ತಿಗೆ ಯಾವುದೇ ನಷ್ಟ ಇಲ್ಲ. ಆದರೆ ನಷ್ಟವಾಗುವುದು ನಮ್ಮನ್ನೇ ನೆಚ್ಚಿಕೊಂಡಿರುವ ಕುಟುಂಬಕ್ಕೆ ಮಾತ್ರ. ಇದರಿಂದ ವಿಚಲಿತವಾಗುವುದು ನಮ್ಮ ಕುಟುಂಬ. ಈ ಬಗ್ಗೆ ನಿಮಗೆ ಎಚ್ಚರಿಕೆ ಇರಲಿ. ಕ್ಷುಲ್ಲಕ ವಿಷಯಗಳಿಗೆ ಮನಸ್ಸುಗಳನ್ನು ಕೆಡಸಿಕೊಂಡು ಬದುಕನ್ನು ವ್ಯರ್ಥ ಮಾಡಿಕೊಳ್ಳುವುದರಲ್ಲಿ ಯಾವುದೇ ಅರ್ಥ ಇಲ್ಲ ಎಂದು ತಿಳಿಸಿದರು.

ಸ್ವಾಮಿ ವಿವೇಕಾನಂದರ ಜಯಂತಿ ಅಂಗವಾಗಿ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮೈಸೂರು ವಿಶ್ವ ವಿದ್ಯಾನಿಲಯದ ಐ.ಕ್ಯು.ಎ.ಸಿ. ಸಂಯೋಜಕ ಡಾ.ಜೆ.ಲೋಹಿತ್ ಅವರನ್ನು ಸನ್ಮಾನಿಸಲಾಯಿತು.

> **ಮನುಷ್ಯ ಇನ್ನೊಬ್ಬರ ಬಗ್ಗೆ ಬದುಕಿದಾಗ ತಪ್ಪುಗಳನ್ನು ಕಡಿಮೆ ಮಾಡುತ್ತಾನೆ. ತಾನು ಎನ್ನುವವನು ಮಾತ್ರ ಹೆಚ್ಚಾಗಿ ತಪ್ಪುಗಳನ್ನು ಮಾಡುತ್ತಾನೆ. ಮನುಷ್ಯ ಜನ್ಮ ದೊಡ್ಡದು. ಅದನ್ನು ಹಾಳು ಮಾಡಿಕೊಳ್ಳದಿರಿ ಹುಚ್ಚಪ್ಪದಿರ ಎಂದು ದೊಡ್ಡವರು ಹೇಳಿದ್ದಾರೆ. ದೊರಕಿರುವ ಈ ಮಾನವ ಜನ್ಮವನ್ನು ಉತ್ತಮ ಕೆಲಸಗಳಿಗೆ ಬಳಸಿಕೊಳ್ಳಬೇಕು. ಆ ಮೂಲಕ ಆರೋಗ್ಯ ಪೂರ್ಣ ಸಮಾಜ ನಿರ್ಮಾಣ ಮಾಡಲು ಕೈ ಜೋಡಿಸಬೇಕು.**
> **ಡಾ.ಜೆ.ಲೋಹಿತ್**,
> ಮೈಸೂರು ವಿವಿಯ ಐ.ಕ್ಯು.ಎ.ಸಿ. ಸಂಯೋಜಕ

ಬಸವಮಾರ್ಗ ಸಂಸ್ಥೆಯ ಸಂಸ್ಥಾಪಕ ಬಸವಣ್ಣ, ಸಿಬ್ಬಂದಿ ಬಾಲಸುಬ್ರಹ್ಮಣ್ಯಂ, ಆನಂದ್, ಸಂಜಯ್ ಇತರರು ಇದ್ದರು.

ಸಹಕಾರ ಸಂಘಕ್ಕೆ ಸಿಇಒ ವಂಚನೆ: ಪ್ರಕರಣ ದಾಖಲು

ಮೈಸೂರು: ಮೈಸೂರಿನ ನೇಗಿಲಯೋಗಿ ವಿವಿದೋದ್ದೇಶ ಸಹಕಾರ ಸಂಘದ 30.18 ಲಕ್ಷ ಹಣ ದುರುಪಯೋಗಪಡಿಸಿಕೊಂಡ ಆರೋಪದ ಮೇಲೆ ಸಿಇಒ ವಿರುದ್ಧ ಅಶೋಕಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಂಘದ ಅಧ್ಯಕ್ಷ ಪರಮೇಶ್ವರ ಅವರು ಸಿಇಒ ವೆಂಕಟೇಶ್ ಎಂಬುವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಪ್ರಕರಣ ದಾಖಲಿಸಿದ್ದಾರೆ. ವೆಂಕಟೇಶ್ ಸಂಸ್ಥೆಯಲ್ಲಿ ಸಿಇಓ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನೇಗಿಲಯೋಗಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಸ್ಥೆಯು ಮರುಳೇಶ್ವರ ಸೇವಾ ಟ್ರಸ್ಟ್ ಗೆ ಸೇರಿದ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಕಾರಣಾಂತರದಿಂದ 2024ರ ಫೆ.19ರಂದು ಬೀಗ ಹಾಕಲಾಗಿತ್ತು. ಈ ಹಿನ್ನಲೆ ನೇಗಿಲಯೋಗಿ ಸಂಸ್ಥೆ 2024ರ ಜೂ.27ರಂದು ಹೊಸ ಕಟ್ಟಡಕ್ಕೆ ಸ್ಥಳಾಂತರಗೊಂಡಿತು. ಈ ಅವಧಿಯಲ್ಲಿ ಷೇರುದಾರರು ಹಾಗೂ ಸಾಲಗಾರರು ಪಾವತಿಸಬೇಕಾದ ಹಣವನ್ನ ಸಿಇಒ ವೆಂಕಟೇಶ್ ರವರಿಗೆ ತಲುಪಿಸಿದ್ದಾರೆ. ಹಣಕ್ಕೆ ರಸೀತಿ ಸಹ ನೀಡಿದ್ದಾರೆ. ಆದರೆ ಹಣವನ್ನು ಸಂಸ್ಥೆಯ ಬ್ಯಾಂಕ್ ಖಾತೆಗೆ ಜಮಾ ಮಾಡದೆ ಇನ್ನಿತರ ಖಾತೆಗಳಿಗೆ ಜಮಾ ಮಾಡಿದ್ದಾರೆ. ಈ ಬಗ್ಗೆ ವೆಂಕಟೇಶ್ ಅವರನ್ನ ಪ್ರಶ್ನಿಸಿದಾಗ 3.06 ಲಕ್ಷ ಬಳಸಿಕೊಂಡಿರುವುದಾಗಿ ತಪ್ಪೊಪ್ಪಿಗೆ ಬರೆದು ಕೊಟ್ಟಿದ್ದಾರೆ. ಆದರೆ ಆಡಿಟ್ ಮಾಡಿಸಿದಾಗ 30.18 ಲಕ್ಷ ಹಣ ದುರುಪಯೋಗ ಆಗಿರುವುದು ಬೆಳಕಿಗೆ ಬಂದಿದೆ. ಈ ಬಗ್ಗೆ ವೆಂಕಟೇಶ್ ಸೂಕ್ತ ಉತ್ತರ ನೀಡಿಲ್ಲ. ವೆಂಕಟೇಶ್ ವಿರುದ್ಧ ಅಶೋಕಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ, ತನಿಖೆ ಮುಂದುವರೆದಿದೆ.

ಸಿಎಂರಿಂದ ಅಹಿಂದ ಸಮಾಜಗಳ ಅಭಿವೃದ್ಧಿ

ಕೆ.ಆರ್.ನಗರ: ಹಿಂದುಳಿದ ವರ್ಗದ ನಾಯಕರಾದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಹಿಂದ ಸಮಾಜಗಳನ್ನು ಎಲ್ಲಾ ರೀತಿಯಲ್ಲೂ ಮೇಲ್ಕೆತ್ತುವ ಕೆಲಸ ಮಾಡುತ್ತಿದ್ದಾರೆ ಎಂದು ಚಾಮರಾಜನಗರ ಕ್ಷೇತ್ರದ ಶಾಸಕರೂ ಆದ ಎಂಎಸ್ಐಎಲ್ ಅಧ್ಯಕ್ಷ ಪುಟ್ಟರಂಗಶೆಟ್ಟಿ ಹೇಳಿದರು.

ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕುಗಳ ಶ್ರೀಭಗೀರಥ ಉಪ್ಪಾರರ ಸಂಘದ ವತಿಯಿಂದ ಪಟ್ಟಣದ ಶ್ರೀಉಪ್ಪಾರ ರಾಮ ಮಂದಿರದಲ್ಲಿ ನಡೆದ ಪ್ರತಿಭಾಪುರಸ್ಕಾರ, ಕ್ಯಾಲೆಂಡರ್ ಬಿಡುಗಡೆ ಮತ್ತು ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು.

ಉಪ್ಪಾರ ಸಮಾಜವನ್ನು ಪ್ರ.ವರ್ಗ-1 ರಿಂದ ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂಬ ಸಮಾಜದ ಬೇಡಿಕೆಯಿದ್ದು ಮುಖ್ಯಮಂತ್ರಿಗಳು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿ ಕೇಂದ್ರಕ್ಕೆ ಕಳುಹಿಸಿಕೊಡಲಿದ್ದಾರೆ ಎಂದು ಭರವಸೆ ನೀಡಿದ ಪುಟ್ಟರಂಗಶೆಟ್ಟಿ ಸಮಾಜದ ಹಲವು ಮುಖಂಡರಿಗೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡುವಂತೆ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದರು. ಮೈಸೂರು ನಗರದಲ್ಲಿ ಉಪ್ಪಾರ ಸಮಾಜದ ಸಮುದಾಯ ಭವನ ನಿರ್ಮಾಣ ಮಾಡಲು ಜಿಲ್ಲಾ ಸಂಘ ಮುಂದಾಗಬೇಕೆಂದು ಸಲಹೆ ನೀಡಿದ ಅವರು ಮೂಡಾದಿಂದ ನಿವೇಶನ ಮಂಜೂರು ಮಾಡಿಸಲು ಮತ್ತು ಸರ್ಕಾರದಿಂದ ಅನುದಾನ ಕೊಡಿಸಲು ಈ ಭಾಗದ ಶಾಸಕರುಗಳೊಂದಿಗೆ ನಾನು ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿ ಶಾಸಕ ಡಿ.ರವಿಶಂಕರ್ ಮಾತನಾಡಿದರು. ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್, ಮೂಡಾ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್, ರಾಜ್ಯ ಸಂಘದ ಪ್ರಧಾನ ಕಾರ್ಯದರ್ಶಿ ಯು.ವೆಂಕೊಬ, ಜಿಲ್ಲಾ ಸಂಘದ ಅಧ್ಯಕ್ಷ ಯೋಗೇಶ್‌ಉಪ್ಪಾರ್, ತಾಲೂಕು ಅಧ್ಯಕ್ಷ ಕಾಟ್ನಾಳುಮಹದೇವ್, ನೌಕರರ ಸಂಘದ ಅಧ್ಯಕ್ಷ ಹೆಚ್.ಟಿ.ಪಾಂಡು ಮಾತನಾಡಿದರು.

ಕೆ.ಆರ್.ನಗರದಲ್ಲಿ ಭಗೀರಥ ಉಪ್ಪಾರರ ಸಂಘದ ವತಿಯಿಂದ ನಡೆದ ಪ್ರತಿಭಾಪುರಸ್ಕಾರ ಸಮಾರಂಭವನ್ನು ಶಾಸಕ ಡಿ. ರವಿಶಂಕರ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಪ್ರತಿಭಾವಂತ ಮಕ್ಕಳಿಗೆ ಪುರಸ್ಕಾರ ನೀಡಿ ಗೌರವಿಸಲಾಯಿತು. ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಡಾ.ದಿವ್ಯತಾ, ಪತ್ರಕರ್ತರಾದ ಕೆ.ಟಿ.ಮಂಜುನಾಥ್, ಎಸ್.ಯೋಗಾನಂದ್, ಪೊಲೀಸ್ ಇಲಾಖೆಯ ಗುರುಪ್ರಸಾದ್, ರವಿಕುಮಾರ್, ಗುತ್ತಿಗೆದಾರ ನಿಂಗರಾಜು, ತಿಪ್ಪೂರು ನಳಿನಿ ಅವರುಗಳನ್ನು ಸನ್ಮಾನಿಸಲಾಯಿತು. ತಾ.ಪಂ. ಮಾಜಿ ಅಧ್ಯಕ್ಷ ಹೆಚ್.ಟಿ.ಮಂಜುನಾಥ್, ಸಹಕಾರ ಯೂನಿಯನ್ ನಿರ್ದೇಶಕ ಟಿ.ರಾಮೇಗೌಡ, ಸಂಘದ ಗೌರವಾಧ್ಯಕ್ಷ ಡಿ.ತಮ್ಮಯ್ಯ, ಉಪಾಧ್ಯಕ್ಷ ರಾಮಕೃಷ್ಣ, ಕಾರ್ಯದರ್ಶಿ ಸಂದೀಪ್, ಪದಾಧಿಕಾರಿಗಳಾದ ಗೋವಿಂದೇಗೌಡ, ಎಂ.ಕುಮಾರ್, ಬಿ. ಕೆ.ನಾಗಣ್ಣ, ಕೆ.ಎಲ್.ಲೋಕೇಶ್, ಬಸವೇಗೌಡ, ರಂಗರಾಜು, ಯೋಗೇಶ್‌ಕುಮಾರ್ ಮತ್ತಿತರರು ಹಾಜರಿದ್ದರು.

ಸ್ವಾಮಿ ವಿವೇಕಾನಂದರು ಯುವ ಜನತೆಗೆ ಸ್ಫೂರ್ತಿ

ಮೈಸೂರು: ಸ್ವಾಮಿ ವಿವೇಕಾನಂದರು ಯುವ ಜನತೆಗೆ ಸ್ಫೂರ್ತಿಯಾಗಿದ್ದರು. ಆದ್ದರಿಂದ ಪ್ರತಿಯೊಬ್ಬ ಯುವಕರು ಅವರ ತತ್ವ, ಆದರ್ಶ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಗುರಿ ಸಾಧಿಸಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾದಿಕಾರದ ಸದಸ್ಯ ಕಾರ್ಯದರ್ಶಿ ದಿನೇಶ್ ಕರೆ ನೀಡಿದರು. ನಗರದ ಚಾಮುಂಡಿ ವಿಹಾರ ಕ್ರೀಡಾಂಗಣದದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪಾಧಿಕಾರ ಸಹಯೋಗದಲ್ಲಿ ರಾಷ್ಟ್ರೀಯ ಯುವದಿನ ಹಾಗೂ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಮಹಾಜ್ಞಾನಿಯಾಗಿದ್ದ ವಿವೇಕಾನಂದರು ಯುವ ಜನರಿಗೆ ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ, ಎಂದು ಸಂದೇಶ ನೀಡಿದರು. ವಿವೇಕಾನಂದರು ತತ್ವ ಜ್ಞಾನವನ್ನಲ್ಲದೆ ಎಲ್ಲಾ ವಿಚಾರಗಳನ್ನು ತಿಳಿದವರಾಗಿದ್ದರು. ನಮ್ಮ ದೇಶದ ಬಗ್ಗೆ, ನೆರೆಯ ದೇಶಗಳು ಹೆಮ್ಮೆ ಪಡುವಂತೆ ಮಾಡಿದರು. ಆದ್ದರಿಂದ ನಾವುಗಳು ನಮ್ಮ ನಮ್ಮ ಕ್ಷೇತ್ರಗಳಲ್ಲಿ ನೂರಕ್ಕೆ ನೂರರಷ್ಟು ಕೇಂದ್ರೀಕರಿಸಿ ಏಕಾಗ್ರತೆಯಿಂದ ಕೆಲಸ ಮಾಡಿದರೆ ಆಕ್ಷೇತ್ರದಲ್ಲಿ ಸಾಧನೆ ಮಾಡಬಹುದು ಎಂದರು. ಸಮಾರಂಭದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಂಯಕ ನಿರ್ದೇಶಕ ಭಾಸ್ಕರ ನಾಯಕ್, ಡಾ.ಜಯರೇವಣ್ಣ, ಯೋಗ ತರಬೇತುದಾರರಾದ ಶ್ರೀಶೈಲಕುಂಬಾರ್, ಯುವರಾಜ್, ರಾಮಣ್ಣ, ಲಾವಣ್ಯ, ಅಮ್ಮಾ ರಾಮಚಂದ್ರ, ಹಾಜರಿದ್ದರು.

ಸಮಾಚಾರ ಸಣ್ಣದಲ್ಲ

ಪೊಲೀಸರ ಮೇಲೆ ಹಲ್ಲೆ: ಇಬ್ಬರ ಬಂಧನ

ಕಾರವಾರ: ಮುಂಡಗೋಡದ ಉದ್ಯಮಿ ಅಪಹರಣ ಪ್ರಕರಣ ಸಂಬಂಧ ಬಂಧಿಸಲು ಹೋಗಿದ್ದ ಪೊಲೀಸರ ಮೇಲೆಯೇ ಹಲ್ಲೆಗೆ ಮುಂದಾಗಿದ್ದ ಇಬ್ಬರು ಆರೋಪಿಗಳ ಕಾಲಿಗೆ ಗುಂಡು ಹಾರಿಸಿ ಮತ್ತು ಇನ್ನು ಮೂವರನ್ನು ಬೆನ್ನಟ್ಟಿ ಬಂಧಿಸಲಾಗಿದೆ. ಜಮೀರ್ ಅಹ್ಮದ್ ದುರ್ಗಾವಾಲೆ ಎಂಬವರನ್ನು ಅಪಹರಿಸಿದ್ದ ಆರೋಪಿಗಳಾದ ರಹೀಮ್ ಅಲ್ಲಾಹುದ್ದೀನ್ ಹಾಗೂ ಅಜಯ್ ಮಡ್ಲಿ ಎಂಬವರಿಗೆ ಗುಂಡು ಹಾರಿಸಲಾಗಿದೆ. ಗಾಯಗೊಂಡಿರುವ ಆರೋಪಿಗಳಿಗೆ ಕಾರವಾರ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಮುಂಡಗೋಡ ಠಾಣಾ ಸಿಪಿಐ, ಪಿಎಸ್ಐ ಹಾಗೂ ಓರ್ವ ಪೊಲೀಸ್ ಕಾನ್ಸ್ಟೇಬಲ್ ಗಾಯಗಳಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ.

ಉಸಿರಾಟದ ಸಮಸ್ಯೆ ಬಾಲಕಿ ಸಾವು

ತುಮಕೂರು: ಚಿರತೆ ಬಾಲ ಹಿಡಿದು ಎಲ್ಲರಲ್ಲಿ ಅಚ್ಚರಿ ಮೂಡಿಸಿದ್ದ ಆನಂದ್ ಅವರಿಗೆ ಆಘಾತ ಎದುರಾಗಿದೆ. ಅವರ 13 ವರ್ಷದ ಪುತ್ರಿ ಸಾವನ್ನಪ್ಪಿದ್ದಾರೆ.

13 ವರ್ಷದ ಕವನ, ಉಸಿರಾಟದ ಸಮಸ್ಯೆಯಿಂದ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ. ತುಮಕೂರು ಜಿಲ್ಲೆ ತಿಪಟೂರಿನಲ್ಲಿ ಘಟನೆ ನಡೆದಿದೆ. ರಂಗಾಪುರ ಬಳಿಯ ಚಿಕ್ಕಕೊಟ್ಟಿಗೇನ ಹಳ್ಳಿ ನಿವಾಸಿ ಆನಂದ್. ಕಳೆದ ಒಂದು ವಾರದ ಹಿಂದೆ ಅರಣ್ಯ ಇಲಾಖೆ ಸಿಬ್ಬಂದಿಯಿಂದ ತಪ್ಪಿಸಿ ಕೊಂಡು ಓಡುತ್ತಿದ್ದ ಚಿರತೆಯ ಬಾಲ ಹಿಡಿದು ಬೋನಿಗೆ ಹಾಕಿದ್ದರು. ಏಕಾಏಕಿ ಮಗಳಿಗೆ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿತ್ತು. ಕೂಡಲೇ ತಿಪಟೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಆಸ್ಪತ್ರೆಯಲ್ಲಿ ಬಾಲಕಿ ಸಾವಿಗೀಡಾಗಿದ್ದಾಳೆ.

ಸಿಡಿಮದ್ದು ಸಿಡಿದು ಹಸುವಿಗೆ ಗಾಯ

ಕೊಳ್ಳೇಗಾಲ: ಶಿವನಸಮುದ್ರದ ಮುಸುಕಿನ ಜೋಳದ ಹೊಲದಲ್ಲಿ ಸಿಡಿಮದ್ದು ಸಿಡಿದು ಹಸುವಿನ ಬಾಯಿ ಛಿದ್ರವಾಗಿದೆ. ಮೇವಿನ ಒಳಗೆ ಕಿಡಿಗೇಡಿಗಳು ಸ್ಫೋಟಕ ಅಡಗಿಸಿದ್ದರು. ಹಸು ಮೇವು ತಿಂದಾಗ ಸಿಡಿದು ಬಾಯಿ ಛಿದ್ರವಾಗಿದೆ. ಶಿವು ಎಂಬುವವರಿಗೆ ಸೇರಿದ ಹಸು ಗಾಯ ಗೊಂಡಿದ್ದು, ಮೇವಿನಲ್ಲಿ ಸ್ಫೋಟಕ ತಂದಿಟ್ಟವರು ಯಾರು ಎಂಬುದನ್ನು ಪೊಲೀಸರು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಬೇಕೆಂದು ರೈತರು ಆಗ್ರಹಿಸಿದ್ದಾರೆ. ಈ ಭಾಗದಲ್ಲಿ ಹೆಚ್ಚಾಗಿ ಕಾಡುಹಂದಿಗಳು ಹಾಗೂ ಕಾಡುಪ್ರಾಣಿ ಬೇಟೆಯಾಡಲು ಕಿಡಿಗೇಡಿಗಳು ಇಂತಹ ಕೆಲಸ ಮಾಡುತ್ತಿದ್ದಾರೆ.

ಜಾಗತಿಕ ಭಗವದ್ಗೀತಾ ಕ್ವಿಜ್ ನಾಳೆಯಿಂದ

ಉಡುಪಿ: ಪುತ್ತಿಗೆ ಮಠದ ವಿಶ್ವಗೀತಾ ಪರ್ಯಾಯ ಅಂಗವಾಗಿ ಜಾಗತಿಕ ಭಗವದ್ಗೀತಾ ಕ್ವಿಜ್ ಆಯೋಜಿಸಲಾಗಿದೆ.ಭಗವದ್ಗೀತೆಯನ್ನು ಆನ್‌ಲೈನ್‌ನಲ್ಲಿ ಓದಿ, ಆನ್‌ಲೈನ್‌ನಲ್ಲೇ ಬಹು ಆಯ್ಕೆಯ ಪ್ರಶ್ನೆಗಳ ಕ್ವಿಜ್‌ಗಳಿಗೆ ಉತ್ತರಿಸಿದ ವಿಜೇತರಿಗೆ ಪ್ರಥಮ ಬಹುಮಾನ 1ಲಕ್ಷ ರು. ಸೇರಿದಂತೆ ಒಟ್ಟು 5 ಲಕ್ಷ ರು.ಗಳ ಬಹುಮಾನ ಇಡಲಾಗಿದೆ. ಸ್ಪರ್ಧೆಗಳ ಮೊದಲ ಸುತ್ತು ಜ.14ರಿಂದ 20ರ ವರೆಗೆ, ಎರಡನೇ ಸುತ್ತು ಜ.25, ಮೂರನೇ ಸುತ್ತು ಜ. 26ರಿಂದ ಫೆ.1ರ ತನಕ ನಡೆಯಲಿದೆ.ಫೆ. 6ರಂದು ಬಹುಮಾನ ವಿತರಿಸಲಾಗುವುದು. ನೋಂದಣಿಗೆ 199 ರು. ಶುಲ್ಕವಿದ್ದು, ಶಾಲೆಗಳು ಮತ್ತು ವಿದ್ಯಾಪೀಠದಿಂದ ಸಾಮೂಹಿಕ ನೋಂದಣಿ ಉಚಿತ. ಮಾಹಿತಿಗೆ 77955 36912/ 9481904283 ಅಥವಾ vishwagita forumgmail.com ಸಂಪರ್ಕಿಸಿ.

ಹೆಬ್ಬಾಳ್ಕರ್‌ರಿಂದಲೇ ಸರಕಾರ ಪತನ

ವಿಜಯಪುರ: ರಾಜ್ಯ ಕಾಂಗ್ರೆಸ್ ಸರಕಾರ ಪತನಕ್ಕೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಕಾರಣವಾಗಲಿದ್ದಾರೆ

ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಭವಿಷ್ಯ ನುಡಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸುವರ್ಣಸೌಧದಲ್ಲಿ ನಡೆದ ಸಿ.ಟಿ.ರವಿ ಪ್ರಕರಣದಲ್ಲಿ ಲಕ್ಷ್ಮೀ ಹೆಬ್ಬಾಳ್ಕರ್ ಗೂಂಡಾಗಿರಿ ಮಾಡಿಸಿದ್ದಾರೆ. ಇದರ ಹಿಂದೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇದ್ದಾರೆ ಎಂದು ಆರೋಪಿಸಿದರು. ಪಂಚಮಸಾಲಿ ಸಮುದಾಯದ ಮೇಲಿನ ಲಾಠಿ ಚಾರ್ಜ್‌ನಲ್ಲಿ ಬೆಳಗಾವಿ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಪಾತ್ರವಿಲ್ಲ. ಘಟನೆ ಬಗ್ಗೆ ಅವರಿಗೆ ಗೊತ್ತೇ ಇಲ್ಲ. ಇದಕ್ಕೆಲ್ಲ ಡಿ.ಕೆ.ಶಿವಕುಮಾರ್ ಹಸ್ತಕ್ಷೇಪವೇ ಕಾರಣ ಎಂದು ದೂರಿದರು.

{ ಎಚ್.ಡಿ.ಕುಮಾರಸ್ವಾಮಿ } ಕೇಂದ್ರ ಸಚಿವ

ಚಾಮರಾಜಪೇಟೆಯಲ್ಲಿ ಕಿಡಿಗೇಡಿಗಳು ಹಸುಗಳ ಕೆಚ್ಚಲು ಕೊಯ್ದಿರುವ ಅಮಾನವೀಯ ಕೃತ್ಯವಾಗಿದೆ. ನಾನು ಈ ಘಟನೆಯನ್ನು ತೀವ್ರವಾಗಿ ಖಂಡಿಸುತ್ತೇನೆ. ರಾಜ್ಯ ಸರಕಾರ ಕೂಡಲೇ ಆ ದುಷ್ಟರನ್ನು ಪತ್ತೆ ಹಚ್ಚಿ ಕಠಿಣವಾಗಿ ಶಿಕ್ಷಿಸಬೇಕು.

ಹಗರಿಬೊಮ್ಮನಹಳ್ಳಿ: ಸರ್ವಧರ್ಮ ಸಾಮೂಹಿಕ ವಿವಾಹದಲ್ಲಿ ಸಿದ್ದರಾಮಯ್ಯ ಭಾಗಿ | ಸಮ ಸಮಾಜ ನಿರ್ಮಾಣಕ್ಕೆ ಅಂತರ್ಜಾತಿ ಮದುವೆ ಹೆಚ್ಚಲಿ

ಅಂತರ್ಜಾತಿ ವಿವಾಹಕ್ಕೆ ಉತ್ತೇಜನ ಅಗತ್ಯ: ಸಿಎಂ

ಹೊಸಪೇಟೆ: ಬಸವಣ್ಣ ನವರು ಅಂತರ್ಜಾತಿ ಮದುವೆ ಉತ್ತೇಜಿಸಿದ್ದರು, ಆದೇ ರೀತಿ ಈಗ ನಾವೆಲ್ಲ ಅಂತಹ ವಿವಾಹ ಉತ್ತೇಜಿಸುವ ಅಗತ್ಯ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿಯಲ್ಲಿ ಭಾನುವಾರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿರಾಜ್ ಶೇಖ್ ಅವರ ಮಗನ ಮದುವೆ ಜತೆಗೆ ಹಮ್ಮಿಕೊಂಡ ಸರ್ವಧರ್ಮ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಮಾತನಾಡಿದರು, ಜಾತಿ ವ್ಯವಸ್ಥೆ ತೊಲಗಿ ಸಮ ಸಮಾಜ ನಿರ್ಮಾಣವಾಗಲು ಅಂತರ್ಜಾತಿ ವಿವಾಹ ಹೆಚ್ಚಬೇಕು ಎಂದು ಪ್ರತಿಪಾದಿಸಿದರು.

ಶ್ರೀಮಂತರು ನೆರವಾಗಲಿ: ಲಂಬಾಣಿ ಸಮುದಾಯ ತಾಂಡಾ ಬಿಟ್ಟು ಹೊರಬಂದಿದ್ದನ್ನು ಕೊಂಡಾಡಿದ ಅವರು, ಇಂತಹ ಮದುವೆಗಳು ಹೆಚ್ಚು ಹೆಚ್ಚು ನಡೆಯಬೇಕು, ಶ್ರೀಮಂತರು ತಮ್ಮ ಸಂಪತ್ತನ್ನು ಇಂತಹ ಕಾರ್ಯಗಳಿಗೆ ಸ್ವಲ್ಪ ಬಳಸಬೇಕು ಎಂದು ಹೇಳಿದರು.

ನಮ್ಮ ದೇಶದಲ್ಲಿ ಶ್ರೀಮಂತರು, ಬಡವರು ಇದ್ದಾರೆ. ಶ್ರೀಮಂತರು ಅದ್ಧೂರಿಯಾಗಿ ಮದುವೆ ಮಾಡ್ತಾರೆ. ಬಡವರಿಗೆ ಕಷ್ಟ.ಇಂತಹ ಸಾಮೂಹಿಕ ಮದುವೆಯಲ್ಲಿ ಬಡವರ ಮದುವೆ ಮಾಡುವುದು ಉತ್ತಮ ಎಂದರು.

ಸರಳ ವಿವಾಹ ಅಗತ್ಯ: ಮದುವೆ ಮಾಡಲು ಜನರು ಸಾಲ ಮಾಡ್ತಾರೆ. ಮನೆ ,ಆಸ್ತಿ , ಒಡವೆ ಮಾರಾಟ ಮಾಡ್ತಾರೆ. ದುಂದುವೆಚ್ಚ ತಪ್ಪಿಸಲು ಪ್ರತಿಯೊಬ್ಬರೂ

ಹಗರಿಬೊಮ್ಮನಹಳ್ಳಿಯಲ್ಲಿ ಭಾನುವಾರ ನಡೆದ ಸರ್ವಧರ್ಮ ವಿವಾಹ ಕಾರ್ಯಕ್ರಮದಲ್ಲಿ ಅಂತರ್ಜಾತಿ ಮದುವೆಯಾದ ವಿಜಯನಗರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿರಾಜ್ ಶೇಖ್‌ರ ಪುತ್ರನನ್ನು ಸಿಎಂ ಸಿದ್ದರಾಮಯ್ಯ ಅಭಿನಂದಿಸಿದರು. ಸಚಿವ ಜಮೀರ್ ಅಹಮದ್ ಖಾನ್ ಇದ್ದರು.

ಸರಳ ಮದುವೆ ಆಗಬೇಕು. ಪಕ್ಕದ ಮನೆಯವಳು ಓಲೆ ಹಾಕಿದರೆ ಕಿವಿ ಕಿತ್ತುಕೊಳ್ಳಲು ಸಾಧ್ಯವೇ. ಬಡವರು ಬಡವರಾಗಿಯೇ ಸಾಯಬೇಕೇ, ಬಡವರು ಶ್ರೀಮಂತರೂ ಆಗಬಹುದು. ನಾವು ಯಾವ ಜಾತಿಯಲ್ಲಿಯೇ ಇದ್ದೇವೆ.ಅದೇ ಜಾತಿಯಲ್ಲಿಯೇ ಇರಬೇಕು ಅಂತಾ ಏನಿಲ್ಲ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು. ಬಸವಣ್ಣನ ಆದರ್ಶಗಳನ್ನು ನಾವು ಪಾಲಿಸಬೇಕು. ಬಸವಣ್ಣ ಜನರಿಗೆ ಅರ್ಥವಾಗುವ ರೀತಿಯಲ್ಲಿ ಬೋಧನೆ ಮಾಡಿದ್ದಾರೆ. ಅವರನ್ನು ನಮ್ಮ ಸರಕಾರ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದೆ. ಕುವೆಂಪು ಹೇಳಿದಂತೆ ಹುಟ್ಟುವಾಗ ವಿಶ್ವಮಾನವರಾಗಿ ಇರುತ್ತಾರೆ. ಆದರೆ ಜಾತಿ ವ್ಯವಸ್ಥೆಯಿಂದಾಗಿ ನಾವು ಅಲ್ಪ ಮಾನವರಾಗುತ್ತೇವೆ ಎಂದರು.

ಸಮಾಜದ ಋಣ ತೀರಿಸಿ: ನಾವು ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ ತರುವ ಕೆಲಸ ಮಾಡುತ್ತೇವೆ. ಶ್ರೀಮಂತರು ಸಾಮಾಜಿಕ ಒಳ್ಳೆಯ ಕೆಲಸ ಮಾಡಬೇಕು. ನಾವು ಸಮಾಜದಿಂದಲೇ ಸಿಎಂ ಆಗಿದ್ದೇವೆ. ನಾವು ಸಮಾಜಕ್ಕೆ ಋಣ ತೀರಿಸುವ ಕೆಲಸ ಮಾಡಬೇಕು. ಅಂಬೇಡ್ಕರ್ ಸಮಾನ ಹಕ್ಕು ಕೊಡದಿದ್ದರೆ ನಾನು ಸಿಎಂ ಆಗುತ್ತಿರಲಿಲ್ಲ. ಸಂವಿಧಾನದ ಪೀಠಿಕೆಯನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು ಎಂದು ಮುಖ್ಯಮಂತ್ರಿ ಕಿವಿಮಾತು ಹೇಳಿದರು.

ಸಚಿವ ಜಮೀರ್ ಅಹಮದ್, ಸಂಸದ ತುಕಾರಾಂ, ಶಾಸಕ ಡಾ.ಶ್ರೀನಿವಾಸ, ಗವಿಯಪ್ಪ, ಲತಾ ಮಲ್ಲಿಕಾರ್ಜುನ, ನಾಗರಾಜ್, ಕೊಟ್ಟೂರು ಮಠದ ಶ್ರೀಬಸವಲಿಂಗ ಸ್ವಾಮೀಜಿ ಇದ್ದರು.

ಜಾತಿಗಣತಿ ವರದಿ ಜಾರಿ

ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ: ಜಾತಿಗಣತಿ ವರದಿಗೆ ವಿರೋಧ ವ್ಯಕ್ತವಾಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಜಾತಿ ಗಣತಿ ವರದಿಗಳ ಪರ, ವಿರೋಧ ಅಭಿಪ್ರಾಯಗಳು ವ್ಯಕ್ತವಾಗುವುದು ಸಹಜ. 160 ಕೋಟಿ ವೆಚ್ಚದಲ್ಲಿ ಸಿದ್ದಪಡಿಸಲಾದ ವರದಿಯನ್ನು ಸ್ವೀಕರಿಸಲಾಗಿದ್ದು, ವರದಿಯ ಜಾರಿಯ ಬಗ್ಗೆ ತೀರ್ಮಾನ ಕೈಗೊಳ್ಳಲು ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಗುವುದು ಎಂದು ಸಿಎಂ ವಿವರಿಸಿದರು.

ನಮ್ಮ ದೇಶದಲ್ಲಿ 140 ಕೋಟಿ ಜನಸಂಖ್ಯೆ ಇದೆ. ಚೀನಾ ದೇಶವನ್ನು ನಾವು ಹಿಂದಿಕ್ಕಿದ್ದೇವೆ. ಆರತಿಗೊಬ್ಬ ಕೀರ್ತಿಗೊಬ್ಬ ಮಕ್ಕಳು ಸಾಕು. ದೇಶದಲ್ಲಿ ಜನಸಂಖ್ಯೆ ನಿಯಂತ್ರಣ ಕೂಡ ಅವಶ್ಯ. ಅಧಿಕಾರ, ಸಂಪತ್ತು ಹಂಚಿಕೆಯಾಗಬೇಕು.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಅಂಧ ಯುವತಿಗೆ ವಿವಾಹ ಸ್ತುತ್ಯರ್ಹ ಕ್ರಮ

ನಾವು ಇಂತಿಂಥ ಜಾತಿಯಲ್ಲಿ ಹುಟ್ಟಬೇಕು ಅಂತಾ ಅರ್ಜಿ ಹಾಕಿದ್ದೀವಾ, ಒಂದು ಜಾತಿ ಯವರು ಇನ್ನೊಂದು ಜಾತಿಯನ್ನು ದ್ವೇಷಿಸಬಾ ರದು, ಪ್ರೀತಿಸಬೇಕು. ಆರ್ಥಿಕ ಸ್ವಾವಲಂಬನೆ ಆಗದಿದ್ದರೆ ಜಾತಿ ವ್ಯವಸ್ಥೆ ಚಲನೆ ಆಗುವುದಿಲ್ಲ ಎಂದರು. ಸರ್ವಧರ್ಮ ಸಾಮೂಹಿಕ ಮದುವೆಯಲ್ಲಿ ಅಂಧ ಯುವತಿಗೆ ಮದುವೆ ಮಾಡಿಸಿದ್ದು ಖುಷಿಯ ವಿಚಾರ, ಇಬ್ರಾಹಿಂ ಮಸ್ತಾನ್ ಅಂಧ ಮಹಿಳೆ ಯಾಸ್ಮಿನ್‌ರನ್ನು ಮದುವೆಯಾಗಿದ್ದಾರೆ. ನನ್ನ ಮೊದಲನೇ ಮಗ ಅಂತರಜಾತಿ ಮದುವೆಯಾಗಿದ್ದ ಎಂದು ಸಿದ್ದರಾಮಯ್ಯ ಸ್ಮರಿಸಿಕೊಂಡರು.

ಸಿದ್ದರಾಮಯ್ಯ ಸರಕಾರ ಸುಭದ್ರ: ವರಿಷ್ಠರ ನಿಲುವು ಸ್ಪಷ್ಟ

ಡಿನ್ನರ್ ಮೀಟಿಂಗ್: ಕಾಂಗ್ರೆಸ್‌ನಲ್ಲಿ ಗೊಂದಲ ಮೂಡಿಸಲು ಷಡ್ಯಂತ್ರ

ಗದಗ: ಔತಣಕೂಟದ ಸಭೆಗಳ ಬಗ್ಗೆ ಕಾಂಗ್ರೆಸ್ ಪಕ್ಷದಲ್ಲಿ ಗೊಂದಲ ಸೃಷ್ಟಿಸುವ ಷಡ್ಯಂತ್ರ ನಡೆದಿದೆ ಎಂದು ಕಾನೂನು, ನ್ಯಾಯ, ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ ಪಾಟೀಲ ಆರೋಪಿಸಿದ್ದಾರೆ.



ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಡಿನ್ನರ್ ಮೀಟಿಂಗ್ ಮಾಡಿದರೂ, ಮಾಡದಿದ್ದರೂ ಪಕ್ಷದಲ್ಲಿ ಏನೂ ಹೆಚ್ಚು ಕಡಿಮೆ ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಕೆಲವರ ಷಡ್ಯಂತ್ರ: ಸಿದ್ದರಾಮಯ್ಯ ಅವರ ಕಾಂಗ್ರೆಸ್ ಸರಕಾರ ಸಂಪೂರ್ಣವಾಗಿ ಸುಭದ್ರವಾಗಿದೆ. ಹೈಕಮಾಂಡ್ ನಿಲುವು ಸ್ಪಷ್ಟವಾಗಿದೆ. ಈ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ಜನರಲ್ಲಿ ನಮ್ಮ ಸರಕಾರದ ಬಗ್ಗೆ ಉತ್ತಮ ವಾತಾವರಣ ಮೂಡುತ್ತಿದೆ. ಅದನ್ನು ಕದಡಲು ಕೆಲವು ಶಕ್ತಿಗಳು, ನಮ್ಮ ಪಕ್ಷದ ಹೊರಗಿನ ಶಕ್ತಿಗಳು ಪ್ರಯತ್ನಿಸುತ್ತಿವೆ ಎಂದು ಪಾಟೀಲ್ ದೂರಿದರು.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲ್ ಗಮನಕ್ಕೆ ತಂದು ಡಿನ್ನರ್ ಪಾರ್ಟಿ ಮಾಡುವುದಾಗಿ ಪರಮೇಶ್ವರ ಬೆಂಬಲಿಗರು ಹೇಳಿದ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದ ಸಚಿವರು, ಆ ವಿಚಾರ ಪರಮೇಶ್ವರ ಅವರನ್ನೇ ಕೇಳಿ. ಊಟ ಮಾಡಿಸುವುದು, ಬಿಡುವುದು ಅವರಿಗೆ ಬಿಟ್ಟದ್ದು ಎಂದು ಮಾರ್ಮಿಕವಾಗಿ ನುಡಿದರು.

ಸಿಎಂ-ಹೈಕಮಾಂಡ್ ವಿವೇಚನೆಗೆ: ಇನ್ನು ಸಚಿವ ಸಂಪುಟ ಪುನರ್ ರಚನೆ ಅಥವಾ ವಿಸ್ತರಣೆ ಪ್ರತಿಕ್ರಿಯಿಸಿದ ಎಚ್‌ಕೆ ಪಾಟೀಲ್, ಸಿಎಂ ಅವರು 10 ದಿನದ ಹಿಂದೆಯೇ ಹೈಕಮಾಂಡ್ ಗೆ ಬಿಟ್ಟಿದ್ದು ಅಂತ ಹೇಳಿದ್ದಾರೆ. ಅದನ್ನು ನಾನು ಅರ್ಥೈಸಿಕೊಂಡ ಪ್ರಕಾರ, ಸ್ವಲ್ಪ ಮಟ್ಟಿಗೆ ಪುನರ್ ರಚನೆ ಅಥವಾ ವಿಸ್ತರಣೆ ಆಗಬಹುದು ಅಂತ ನಾನು ಭಾವಿಸಿಕೊಂಡಿದ್ದೇನೆ. ಅಂತಿಮವಾಗಿ ಸಿಎಂ ಹಾಗೂ ಹೈಕಮಾಂಡ್‌ಗೆ ಬಿಟ್ಟಿದ್ದು ಎಂದರು.

ರದ್ದುಮಾಡಿ ಎಂದು ಡಿಕೆಶಿ ಯಾರಿಗೂ ಸೂಚಿಸಿಲ್ಲ

ಔತಣಕೂಟದ ಸಭೆ ರದ್ದುಮಾಡಿ ಎಂದು ತಾವು ಯಾರಿಗೂ ಹೇಳಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸ್ಪಷ್ಟವಾಗಿ ಹೇಳಿದ್ದಾರೆ. ಡಿನ್ನರ್ ಮೀಟಿಂಗ್ ಮುಂದೂಡಿದ್ದಾರೆ ಎಂದು ಮಾಧ್ಯಮಗಳು ತಪ್ಪು ಹೇಳಿಕೆ ನೀಡುವುದು ಸೂಕ್ತವಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಲವ-ಕುಶ ಜೋಡುಕೆರೆ ಕಂಬಳೋತ್ಸವದಲ್ಲಿ ಸಿಎಂ ಸಿದ್ದರಾಮಯ್ಯ ಭರವಸೆ

ಕಂಬಳಕ್ಕೆ ರಾಜ್ಯ ಸರಕಾರದಿಂದ ನೆರವು

ಮಂಗಳೂರು: ಕಂಬಳ ಕ್ರೀಡೆ ಮತ್ತು ಕಲೆಗೆ ಜಾತಿ-ಧರ್ಮದ ಬೇಲಿ ಇಲ್ಲ. ಇದು ಸರ್ವರ ಸಂಭ್ರಮ. ನಮ್ಮದು ಬಹುತ್ವದ ದೇಶ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಉಳ್ಳಾಲ ನರಿಂಗಾನದ ಮೂರನೇ ವರ್ಷದ ಲವ-ಕುಶ ಜೋಡುಕೆರೆ ಕಂಬಳೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜನಪದ ಕ್ರೀಡೆ ಕಂಬಳ ಸರ್ವ ಜಾತಿ, ಧರ್ಮದ ಜನ ಸಮುದಾಯವನ್ನು ಬೆಸೆಯುವಂತೆ ಮಾಡುತ್ತಿದೆ. ವಿವಿಧತೆಯಲ್ಲಿ ಏಕತೆಯನ್ನು ಕಾಣುವ ಭಾರತದ ಕರಾವಳಿ ಜಿಲ್ಲೆಗಳ ಒಂದು ಸಂಸ್ಕೃತಿಯಾಗಿದೆ. ನಮ್ಮ ಸರಕಾರ ಕೂಡ ಎಲ್ಲಾ ಜಾತಿ, ಎಲ್ಲಾ ಧರ್ಮದ ಪರವಾಗಿ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ ಎಂದರು.

ಸುಪ್ರೀಂಕೋರ್ಟ್ ನಿಷೇಧಿಸಿದ್ದ ಕಂಬಳ ಕ್ರೀಡೆಗೆ ಮರು ಚಾಲನೆ ಸಿಗುವಂತೆ ಮಾಡಿದ್ದು ನಮ್ಮ ಸರಕಾರ. ಸುಪ್ರೀಂಕೋರ್ಟ್ ನಿಷೇಧವನ್ನು ತೆರವುಗೊಳಿಸಲು ಸರಕಾರ ಶ್ರಮಿಸಿತು. ಇದು ಕರಾವಳಿಯ ಜನಪದ ಸಂಸ್ಕೃತಿಗೆ ನಮ್ಮ ಸರಕಾರ ಕೊಟ್ಟ ಕೊಡುಗೆ ಎಂದು ತಿಳಿಸಿದರು. ತಮ್ಮ ಮನೆ ಮಕ್ಕಳಂತೆ ಕಂಬಳ ಕೋಣಗಳನ್ನು ಸಾಕುತ್ತಾರೆ. ಕಂಬಳ ಕ್ರೀಡೆ ಜಿಲ್ಲೆಯ ಜನಪದ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ಹೀಗಾಗಿ, ಈ ಸಾಂಪ್ರದಾಯಿಕ ಕ್ರೀಡೆಯನ್ನು ಉಳಿಸಲು ನಾನು ಮುಂದಾದೆ. 24 ಕಂಬಳಗಳನ್ನು ನಡೆಸಲು ಪ್ರತಿ ಕಂಬಳಕ್ಕೆ ತಲಾ 5 ಲಕ್ಷ ರೂಪಾಯಿ ನೆರವನ್ನು ನಮ್ಮ ಸರಕಾರ ನೀಡಿದೆ ಎಂದು ಹೇಳಿದರು.

ಉಳ್ಳಾಲದ ನರಿಂಗಾನದ ಮೂರನೇ ವರ್ಷದ ಲವ-ಕುಶ ಜೋಡುಕೆರೆ ಕಂಬಳೋತ್ಸವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ನಕ್ಸಲರು ಮುಖ್ಯ ವಾಹಿನಿಗೆ ಬರಬೇಕು

ಆರು ನಕ್ಸಲರು ಶರಣಾಗಿದ್ದು, ಅವರನ್ನು ಕಾಡಿನಿಂದ ನ್ಯಾಯಾಲಯಕ್ಕೆ ಕರೆತಂದು, ಅಲ್ಲಿಂದ ನಾಡಿಗೆ ಕರೆತರುವ ಪ್ರಯತ್ನ ಮಾಡಲಾಗಿದೆ. ನಕ್ಸಲರು ಶಸ್ತ್ರಾಸ್ತ್ರ ಹೋರಾಟ ನಿಲ್ಲಿಸಿ ಮುಖ್ಯವಾಹಿನಿಗೆ ಬರಬೇಕು. ಅವರ ಶಾಂತಿಯುತ ಹೋರಾಟಕ್ಕೆ ನಮ್ಮ ತಕರಾರೇನಿಲ್ಲ. ಸಂವಿಧಾನದಲ್ಲಿ ಶಾಂತಿಯುತ ಹೋರಾಟಕ್ಕೆ ಅವಕಾಶವಿದ್ದು, ಅದರಂತೆ ಹೋರಾಟ ಮಾಡಿದರೆ ಅದಕ್ಕೆ ಸಹಕಾರವಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಐದು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಯು.ಟಿ.ಖಾದರ್ ಅವರು ಸ್ಪೀಕರ್ ಆಗುವ ಮೂಲಕ ಪ್ರೋಟೋಕಾಲ್ ಪ್ರಕಾರ ನನಗಿಂತ ಎತ್ತರದಲ್ಲಿದ್ದಾರೆ. ಮುಂದೆ ಇದಕ್ಕಿಂತ ಒಳ್ಳೆಯ ಅವಕಾಶಗಳು ಸಿಗಬಹುದು. ರಾಜಕಾರಣದಲ್ಲಿ ಯಾವುದೂ ಶಾಶ್ವತ ಅಲ್ಲ.

ಸಿದ್ದರಾಮಯ್ಯ, ಮುಖ್ಯಮಂತ್ರಿ

ಬಂಧಿಸದಿದ್ದರೆ ಸಚಿವ ಜಮೀರ್ ವಿರುದ್ಧ ಹೋರಾಟ: ಮುತಾಲಿಕ್ ಎಚ್ಚರಿಕೆ

ಹಸುವಿನ ಕೆಚ್ಚಲು ಕೊಯ್ದ ನೀಚರ ಸೆರೆಗೆ ಆಗ್ರಹ

ಧಾರವಾಡ: ಚಾಮರಾಜಪೇಟೆಯ ಒಬ್ಬನ ಮಾಲೀಕತ್ವದಲ್ಲಿ ಇದ್ದ ನಾಲ್ಕು ಹಸುವಿನ ಕೆಚ್ಚಲು ಕೊಯ್ದಿದ್ದಾರೆ. ಇದು ನೀಚ ಕೃತ. ಇಸ್ಲಾಮಿಕ್ ಶಕ್ತಿಯ ಪ್ರದರ್ಶನ ಆಗುತ್ತಿದೆ, ರಾಕ್ಷಸ ಕೃತ್ಯಕ್ಕೆ ಇದು ಉದಾಹರಣೆ ಎಂದು ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಕಿಡಿಕಾರಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿ, ಜಮೀರ್ ಅಹ್ಮದ್ ಇದು ನಿಮ್ಮ ಕ್ಷೇತ್ರದಲ್ಲಿ ಆಗಿದೆ. ಇದನ್ನು ತಾವು ಗಂಭೀರವಾಗಿ ತೆಗೆದುಕೊಳ್ಳಬೇಕು. ಹಸು ಹಿಂದೂಗಳಿಗೆ ಅತ್ಯಂತ ಪೂಜ್ಯ ಪ್ರಾಣಿ. ಅದು ಬರೀ ಪ್ರಾಣಿ ಅಲ್ಲಾ, ಅದು ನಮಗೆ ಅನ್ನ ಹಾಕುತ್ತೆ, ಗೊಬ್ಬರ ಕೊಡುತ್ತೆ, ಔಷಧಿ ಕೊಡುತ್ತದೆ. ರೈತರ ಬೆನ್ನೆಲುಬು ಅದು. ಅದರ ಕೆಚ್ಚಲು ಕೊಯ್ದ ನೀಚರನ್ನು ಒದ್ದು ಒಳಗಡೆ ಹಾಕದಿದ್ದರೇ ಶ್ರೀರಾಮ ಸೇನೆಯಿಂದ ಜಮೀರ್ ವಿರುದ್ಧ ರಾಜ್ಯದಲ್ಲಿ ಹೋರಾಟ ಮಾಡುತ್ತೇವೆ ಎಂದು ವಾಗ್ದಾಳಿ ನಡೆಸಿದರು.

ರಾಜ್ಯದಲ್ಲಿ ನಿರಂತರ ಗೋಹತ್ಯೆ

ಕಾನೂನು ಇದ್ದರೂ ಕಾಂಗ್ರೆಸ್‌ನ ಮುಸ್ಲಿಂ ತುಷ್ಟೀಕರಣ ಹಿನ್ನೆಲೆಯಲ್ಲಿ ನಿರಂತರ ಗೋಹತ್ಯೆ ಆಗುತ್ತಿದೆ. ನಿರಂತರ ಕಸಾಯಿ ಖಾನೆಗೆ ಹಸು ಹೋಗುತ್ತಿವೆ. ಇವತ್ತು ಅದನ್ನು ತಡೆಯಬೇಕು. ಇವತ್ತು ಆದ ಘಟನೆ ನೋಡಲು ಆಗುತ್ತಿಲ್ಲ. ಅದು ನಮ್ಮ ತಾಯಿ. ಜಮೀರ್‌ಗೆ ಮಾನ ಮರ್ಯಾದೆ ಇದ್ದರೇ ರಾಕ್ಷಸಿ ಕೃತ್ಯ ಮಾಡಿದವರನ್ನು ಒದ್ದು ಒಳಗೆ ಹಾಕಿ. ಇಲ್ಲದಿದ್ದರೇ ಹೋರಾಟಕ್ಕೆ ಸಿದ್ಧ ಎಂದು ಸವಾಲು ಹಾಕುತ್ತೇನೆ ಎಂದು ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಗುಡುಗಿದರು.

ಪೈಶಾಚಿಕ ಕೃತ್ಯಕ್ಕೆ ಎನ್‌ಕೌಂಟರ್ ಮಾಡಿ: ರೇಣುಕಾಚಾರ್ಯ

ದಾವಣಗೆರೆ: ಹಸುಗಳ ಮೇಲೆ ಪೈಶಾಚಿಕ ಕೃತ್ಯ ನಡೆಸಿದವರನ್ನು ಎನ್‌ಕೌಂಟರ್ ಮಾಡುವಂತೆ ಮಾಜಿ ಸಚಿವ ಎಂ.ಪಿ ರೇಣುಕಾಚಾರ್ಯ ಆಗ್ರಹಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಚಾಮರಾಜಪೇಟೆಯಲ್ಲಿ ನಡೆದ ಕೃತ್ಯ ಅಮಾನವೀಯವಾದದ್ದು. ಪಕ್ಷಾತೀತವಾಗಿ ಈ ಪ್ರಕರಣವನ್ನು ಖಂಡಿಸಬೇಕು. ಹಸುಗಳನ್ನು ದೇವರು ಎಂದು ಸಮಾಜ ಪೂಜಿಸುತ್ತದೆ. ಮತಾಂಧರು ವಿಕೃತ ಮನಸ್ಸಿನಿಂದ ಈ ಕೃತ್ಯ ನಡೆಸಿ ಹಿಂದೂ ಧರ್ಮಕ್ಕೆ ಅಪಮಾನ ಮಾಡಿದ್ದಾರೆ ಎಂದು ಆಕ್ರೋಶ ಹೊರಹಾಕಿದ್ದಾರೆ. ಜಮೀರ್ ಅಹ್ಮದ್ ಕ್ಷೇತ್ರದಲ್ಲಿ ಇಂತಹ ದುರ್ಘಟನೆ ನಡೆದಿದೆ. ಈ ಕೃತ್ಯ ನಡೆಸಿದ್ದು ಭಯೋತ್ಪಾದಕ ಅಲ್ಪಸಂಖ್ಯಾತರು. ಈ ಘಟನೆಗೆ ಕೇವಲ ಜಮೀರ್ ಮಾತ್ರ ಅಲ್ಲ, ಇಡೀ ಕಾಂಗ್ರೆಸ್ ಕಾರಣ. ಅಲ್ಪಸಂಖ್ಯಾತ ಗೂಂಡಾಗಳು ಅಟ್ಟಹಾಸ ದಿಂದ ಮೆರೆಯುತ್ತಿದ್ದಾರೆ. ಇಂತಹ ಕೃತ್ಯ ನಡೆಸಿದವರನ್ನು ಬಂಧಿಸುವುದಷ್ಟೇ ಅಲ್ಲ, ಎನ್‌ಕೌಂಟರ್ ಮಾಡಿ ಬಿಸಾಕಬೇಕು ಎಂದು ಆಕ್ರೋಶ ಹೊರಹಾಕಿ ದ್ದಾರೆ.

ಕಾಂಗ್ರೆಸ್ ಅವಧಿಯಲ್ಲಿ, ಅಭಿವೃದ್ಧಿ ಇಲ್ಲ. ಕೇವಲ ಕುರ್ಚಿಗಾಗಿ ಕಿತ್ತಾಟ ಮಾಡುತ್ತಿದ್ದಾರೆ. ದೇವರ ಹೆಸರು ಇಟ್ಟುಕೊಂಡ ಸಿದ್ದರಾಮಯ್ಯ, ಡಿಕೆ ಶಿವಕುಮಾರ್, ಪರಮೇಶ್ವರ್ ಅವರೇ, ಜಮೀರ್ ಅವರನ್ನು ಹದ್ದುಬಸ್ತಿನಲ್ಲಿ ಇಡದಿದ್ದರೆ ನಿಮ್ಮ ಘನತೆಗೆ ಧಕ್ಕೆ ಬರುತ್ತದೆ.

ಎಂ.ಪಿ ರೇಣುಕಾಚಾರ್ಯ, ಮಾಜಿ ಸಚಿವ

ಕಾರ್ಖಾನೆ ಸ್ಥಗಿತಕ್ಕೆ ಅಪಪ್ರಚಾರ: ದಿನೇಶ ಗೂಳಿಗೌಡ

ಮೈಶುಗರ್ ಖಾಸಗೀಕರಣ ಇಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಂಡ್ಯ ಜಿಲ್ಲೆಯ ಏಕೈಕ ಸರಕಾರಿ ಸ್ವಾಮ್ಯದ ಸಕ್ಕರೆ ಕಾರ್ಖಾನೆಯಾದ ಮೈಶುಗರ್ ಖಾಸಗೀಕರಣ ಮಾಡಲಾಗುತ್ತಿದೆ ಎಂದು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಅಪಪ್ರಚಾರ ಮಾಡುತ್ತಿವೆ ಎಂದು ವಿಧಾನ ಪರಿಷತ್ ಶಾಸಕ ದಿನೇಶ ಗೂಳಿಗೌಡ ಹೇಳಿದ್ದಾರೆ.

ಈ ಬಗ್ಗೆ ಮಾತನಾಡಿರುವ ಅವರು, ಅಪ ಪ್ರಚಾರಕ್ಕೆ ಸಾರ್ವ ಜನಿಕರಾಗಲೀ, ರೈತರಾಗಲೀ ಅಪ ಪ್ರಚಾರಕ್ಕೆ ಕಿವಿಗೊ ಡಬಾರದು. ಯಾವುದೇ ಕಾರಣಕ್ಕೂ ಇದನ್ನು ಖಾಸಗೀಕರಣ ಮಾಡುವುದಿಲ್ಲ. ನಮ್ಮ ಸರಕಾರ ರೈತರ ಹಿತ ಕಾಯಲು ಬದ್ಧವಿದೆ ಎಂದು ಹೇಳಿದ್ದಾರೆ.

ಈ ಕಾರ್ಖಾನೆ ಸಂಪೂರ್ಣವಾಗಿ ನಷ್ಟದಲ್ಲಿತ್ತು. ಮುಚ್ಚಿ ಹೋಗುವ ಹಂತದಲ್ಲಿತ್ತು. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ನಂತರ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕ ರವಿಕುಮಾರ್ ಗಣಿಗ ಹಾಗೂ ನಾನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ ಅವರ ಬಳಿ ಈ ಕಾರ್ಖಾನೆಯ ಪುನಶ್ಚೇತನಕ್ಕಾಗಿ ಮನವಿ ಮಾಡಿದ್ದೆವು. ಕಳೆದ ವರ್ಷ ಕಾರ್ಖಾನೆಗೆ 50 ಕೋಟಿ ರು. ಕಾರ್ಖಾನೆಯ ಕಾರ್ಯಗಳಿಗೆ ಬಿಡುಗಡೆ ಮಾಡಿಸಲು ಯಶಸ್ವಿಯಾಗಿದ್ದೆವು. ಪರಿಣಾಮ ಕಾರ್ಖಾನೆ ಕಳೆದ ಹಂಗಾಮಿನಲ್ಲಿ 2 ಲಕ್ಷ 5 ಸಾವಿರ ಟನ್ ಕಬ್ಬನ್ನು ಅರೆದಿತ್ತು. ಮಾತ್ರವಲ್ಲ ರೈತರಿಗೆ ಕಬ್ಬಿನ ಬಿಲ್ನ ಸಂಪೂರ್ಣ ಹಣ ಪಾವತಿಸಲಾಗಿತ್ತು. ಈ ಬಾರಿ ಕಾರ್ಖಾನೆಯು ಸರಕಾರದ ಯಾವುದೇ ಸಹಾಯಧನವನ್ನು ಪಡೆಯದೆಯೇ ಕಬ್ಬನ್ನು ನುರಿಸಿದೆ ಎಂದು ಹೇಳಿದ್ದಾರೆ.

ಮೈಶುಗರ್ ಉಳಿಸಲು ರಾಜ್ಯ ಸರಕಾರ ಸಿದ್ಧ

ಕಳೆದ 20 ವರ್ಷಗಳಿಂದ ಬಾಕಿ ಇದ್ದ 52.25 ಕೋಟಿ ವಿದ್ಯುತ್ ಬಿಲ್ ಬಾಕಿಯನ್ನು ಸರಕಾರ ಮನ್ನಾ ಮಾಡಿದೆ. ಹೀಗಾಗಿ ಇದನ್ನು ಖಾಸಗೀಕರಣ ಮಾಡುವಂತಹ ಯಾವುದೇ ಪ್ರಸ್ತಾವ ಸರಕಾರದ ಮುಂದಿಲ್ಲ. ಇದು ಖಂಡಿತಾ ಅಪಪ್ರಚಾರವಾಗಿದೆ. ರಾಜ್ಯದಲ್ಲಿ ಇರುವ 72 ಸಕ್ಕರೆ ಕಾರ್ಖಾನೆಗಳಲ್ಲಿ ಮೈಶುಗರ್ ಏಕೈಕ ಸರಕಾರಿ ಸ್ವಾಮ್ಯದ ಸಕ್ಕರೆ ಕಾರ್ಖಾನೆ ಯಾಗಿದೆ. ಮೈಶುಗರ್ ಉಳಿವಿಗೆ ಸರಕಾರ ಸಿದ್ಧವಿದೆ. ಅಪಪ್ರಚಾರಕ್ಕೆ ಯಾರೂ ಕಿವಿಗೊಡಬೇಡಿ ಎಂದು ವಿಧಾನ ಪರಿಷತ್ ಶಾಸಕರಾದ ದಿನೇಶ ಗೂಳಿಗೌಡ ಮನವಿ ಮಾಡಿದ್ದಾರೆ.

ಹಸುಗಳ ಕೆಚ್ಚಲು ಕೊಯ್ದ ಪಾಪಿಗಳು!

← ಮೊದಲಪುಟದಿಂದ

ಕಾಟನ್‌ಪೇಟೆ ಠಾಣೆ ಪೊಲೀಸ್ ಸಿಬ್ಬಂದಿ, ಚಿಕ್ಕಪೇಟೆ ಉಪವಿಭಾಗದ ಎಸಿಪಿ ನೇತೃತ್ವದಲ್ಲಿ ಮುನ್ನೆಚ್ಚರಿಕೆ ವಹಿಸಲಾಗಿದೆ. ಘಟನೆಯನ್ನು ಖಂಡಿಸಿರುವ ಬಿಜೆಪಿ ನಾಯಕರು, ರಾಜ್ಯ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಸರಕಾರ, ಪೊಲೀಸ್ ಇಲಾಖೆ ಸತ್ತುಹೋಗಿದೆ. ಪುಂಡ-ಪೋಕರಿಗಳಿಗೆಲ್ಲ ಕಾಂಗ್ರೆಸ್ ಸರಕಾರ ಬೆಂಬಲ ನೀಡುತ್ತಿದೆ. ಯಾರು ಈ ಕೆಲಸ ಮಾಡಿದ್ದಾರೋ ಅವರಿಗೆ ತಕ್ಕ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದ್ದಾರೆ.

ಮಾನವೀಯತೆ ಇಲ್ಲದ ಕ್ರೂರಿಗಳು ಈ ರೀತಿಯ ಕೃತ್ಯ ಎಸಗಿದ್ದಾರೆ. ಯಾರ ಬೆಂಬಲದಲ್ಲಿ ಇದನ್ನು ಮಾಡುತ್ತಿದ್ದಾರೆ ಎಂಬುದು ಆತಂಕಕ್ಕೆ ಕಾರಣವಾಗಿದೆ. ಘಟನಾ ಸ್ಥಳದಲ್ಲಿ ಎಲ್ಲಿಯೂ ಸಿಸಿ ಟಿವಿ ಇಲ್ಲ. ಇಡೀ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಸರಕಾರ, ಪೊಲೀಸ್ ಇಲಾಖೆ ಸತ್ತುಹೋಗಿದೆ. ಪುಂಡ -ಪೋಕರಿಗಳಿಗೆಲ್ಲ ಕಾಂಗ್ರೆಸ್ ಸರಕಾರ ಬೆಂಬಲ ನೀಡುತ್ತಿದೆ. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಗೋ ಸುರಕ್ಷತೆಯ ಬಗ್ಗೆ ತಾತ್ಸಾರ ಧೋರಣೆ ಅನುಸರಿಸುತ್ತಿದೆ.

- ಪಿ.ಸಿ.ಮೋಹನ್, ಸಂಸದ

ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಗೋ ಸುರಕ್ಷತೆಯ ಬಗ್ಗೆ ತಾತ್ಸಾರ ಧೋರಣೆ ಅನುಸರಿಸುತ್ತಿದೆ. ಇದೆಲ್ಲವೂ ಗೋ ಭಕ್ಷಕ ಜನರ ಓಲೈಕೆಗಾಗಿ ಅಲ್ಲದೆ ಬೇರೇನೂ ಅಲ್ಲ. ಇರಿಯುವುದು, ಕತ್ತರಿಸುವುದನ್ನು ಕೇಳಿದ್ದೇವೆ, ಆದರೆ ಮಾತ್ರ ಕೊರತೆ ನೀಗಿಸಲು ಕ್ಷೀರಧಾರೆ ಹರಿಸುವ ಕೆಚ್ಚಲನ್ನೇ ಕತ್ತರಿಸುವಷ್ಟು ಪರಮ ನೀಚ ಕೃತ್ಯಕ್ಕೆ ಇಳಿದಿರುವ ಘಟನೆ ಕರ್ನಾಟಕದ ರಾಜಧಾನಿಯಲ್ಲೇ ನಡೆಯುತ್ತಿದೆ ಎಂದರೆ ಇದರ ಹಿಂದಿರುವ ಕುಮ್ಮಕ್ಕಿನ ಶಕ್ತಿ ಯಾವುದು ಎನ್ನುವುದು ಊಹಿಸಿಕೊಳ್ಳದಷ್ಟು ಕರುನಾಡಿನ ಜನತೆ ಮುಗ್ಧರಲ್ಲ.

- ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಜೆಡಿಎಸ್ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಚುನಾವಣೆ

← ಮೊದಲಪುಟದಿಂದ

ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿರುವ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಮುಂದಿನ ಏಪ್ರಿಲ್ ನೊಳಗೆ ಚುನಾವಣೆ ಮೂಲಕ ಜೆಡಿಎಸ್ ರಾಜ್ಯಾಧ್ಯಕ್ಷರ ಆಯ್ಕೆ ಮಾಡಲು ಜೆಡಿಎಸ್ ನಿರ್ಧಾರ ಮಾಡಿದೆ. ಆದರೆ, ಯಾರನ್ನು ಆಯ್ಕೆ ಮಾಡಬೇಕು ಎಂಬ ಬಗ್ಗೆ ಈ ಸಭೆಯಲ್ಲಿ ಚರ್ಚೆಯಾಗಿಲ್ಲ ಎಂದು ಸ್ಪಷ್ಟಪಡಿಸಿದರು.

ಪಕ್ಷದ ಸಂಘಟನೆ ಬಗ್ಗೆ ಎಲ್ಲ ನಾಯಕರಿಗೆ ಕಠಿಣವಾಗಿಯೇ ಹೇಳಿದ್ದೇನೆ. ಯಾರು ಪ್ರಾಮಾಣಿಕವಾಗಿ ಪಕ್ಷದ ಸಂಘಟನೆಗೆ ದುಡಿಯುತ್ತಾರೋ ಅಂಥವರಿಗೆ ಆದ್ಯತೆ ಕೊಡುತ್ತೇವೆ. ನಾನು ಕೂಡ ಪಕ್ಷ ಸಂಘಟನೆಯಲ್ಲಿ ನಿಯಮಿತವಾಗಿ ತೊಡಗಿಸಿಕೊಳ್ಳುತ್ತೇನೆ ಎಂದು ಸ್ಪಷ್ಟಪಡಿಸಿದರು. ವಾರದಲ್ಲಿ ನಾಲ್ಕು ದಿನ ದೆಹಲಿಯ ಸಚಿವಾಲಯದಲ್ಲಿ ಕೆಲಸ ಮಾಡುತ್ತೇನೆ. ಒಂದು ಅಥವಾ ಎರಡು ದಿನ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವಾಲಯದ ಕಾರ್ಖಾನೆಗಳಿಗೆ ಭೇಟಿ ಕೊಡುತ್ತೇನೆ. ಉಳಿದ ಸಮಯವನ್ನು ಪಕ್ಷದ ಕೆಲಸಕ್ಕೆ ಮಿಸಲಿಡುತ್ತೇನೆ. ಪಕ್ಷದ ಸಂಘಟನೆ, ಸಭೆ, ಪ್ರವಾಸ, ಮಂಡ್ಯ ಕ್ಷೇತ್ರಕ್ಕೆ ಭೇಟಿ ಇತ್ಯಾದಿಗಳ ಬಗ್ಗೆ ವೇಳಾಪಟ್ಟಿ ಸಿದ್ಧ ಮಾಡಿಕೊಂಡಿದ್ದೇನೆ. ಇನ್ನು ಮುಂದೆ ಅದರಂತೆಯೇ ಕೆಲಸ ಮಾಡುತ್ತೇನೆ ಎಂದರು.

ಜಾತಿಗಣತಿ; ಸಿಎಂ ವಿರುದ್ಧ ಕಿಡಿ

ಕಾಂತರಾಜ್ ವರದಿ ಸರಕಾರದ ಕೈ ಸೇರಿ ಎಷ್ಟು ವರ್ಷವಾಯಿತು? ಜಾತಿಗಳ ಸಮಸ್ಯೆಗಳಿಗೆ ಏನು ಪರಿಹಾರ ಕೊಟ್ಟಿದ್ದಾರೆ ಇವರು? ಏಳು ವರ್ಷ ಸಿದ್ದರಾಮಯ್ಯ ಅವರೇ ಸಿಎಂ ಆಗಿ ಇದ್ದಾರಲ್ಲವೇ? ಅಹಿಂದ ನಾಯಕರು, ಬೇರೆ ಸಮಾಜಗಳ ಮಾತಿರಲಿ, ಅಹಿಂದ ವರ್ಗಕ್ಕೆ ಅವರು ಏನು ಮಾಡಿದ್ದಾರೆ? ಇಷ್ಟು ದಿನ ಅಧಿಕಾರದಲ್ಲಿ ಇದ್ದರೂ ಇವರು ಇನ್ನೂ ಅಹಿಂದ ಅಹಿಂದ ಎಂದು ಹೇಳುತ್ತಿದ್ದಾರೆ. ಕೇವಲ ರಾಜಕೀಯಕ್ಕಾಗಿ ಸಿದ್ದರಾಮಯ್ಯ ಅವರು ಈ ಸಮುದಾಯವನ್ನು ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಕುಮಾರಸ್ವಾಮಿ ಟೀಕಿಸಿದರು.

ಜೆಡಿಎಸ್ ಕುಟುಂಬ ಆಧಾರಿತ ಪಕ್ಷ ಎಂದು ಕಾಂಗ್ರೆಸ್ ಹೇಳುತ್ತದೆ. ಯಾರಾದರೂ ಒಮ್ಮೆ ಕಾಂಗ್ರೆಸ್ ಪಕ್ಷದ ಕಚೇರಿಗೆ ಹೋಗಿ ಅಲ್ಲಿ ಗೋಡೆಗಳ ಮೇಲೆ ನೇತು ಹಾಕಿರುವ ಫೋಟೋಗಳನ್ನು ನೋಡಿ. ಕುಟುಂಬ ಆಧಾರಿತ ಪಕ್ಷ ಯಾವುದೆಂದು ಗೊತ್ತಾಗುತ್ತದೆ.

- ಎಚ್.ಡಿ.ದೇವೇಗೌಡ ಮಾಜಿ ಪ್ರಧಾನಿ

ಪಾಟೀಲ್ ಮೊದಲು ನಿಮ್ಮ ಕಥೆ ನೋಡಿಕೊಳ್ಳಿ

‘ಜೆಡಿಎಸ್ ಶಾಸಕರನ್ನು ಕಾಂಗ್ರೆಸ್ ಆಪರೇಷನ್ ಮಾಡುತ್ತಿದೆ, ಜೆಡಿಎಸ್‌ನಲ್ಲಿ ಗಡಗಡ, ಸಂಕ್ರಾಂತಿ ನಂತರ ಜೆಡಿಎಸ್ ಇರುವುದೇ ಇಲ್ಲ’ ಎನ್ನುವ ಸಚಿವ ಎಂ.ಬಿ.ಪಾಟೀಲ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ಮೊದಲು ನಿಮ್ಮ ಪಕ್ಷದ ಕಥೆ ನೋಡಿಕೊಳ್ಳಿ. ದೆಹಲಿಯಲ್ಲಿ ಆಮ್ ಆದ್ಮಿ ಪಕ್ಷ ಕಾಂಗ್ರೆಸನ್ನು ದೂರ ಇಟ್ಟು ಏಕಾಂಗಿಯಾಗಿ ಚುನಾವಣೆ ಎದುರಿಸುತ್ತಿದೆ. ಇಂಡಿ ಕೂಟವನ್ನು ವಿಸರ್ಜನೆ ಮಾಡಿ ಎಂದು ಓಮರ್ ಅಬ್ದುಲ್ಲಾ ಹೇಳುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ ನಾವು ಏಕಾಂಗಿಯಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆ ಎದುರಿಸುತ್ತೇವೆ ಎಂದು ಶಿವಸೇನೆ ಹೇಳುತ್ತಿದೆ. ಅಲ್ಲೆಲ್ಲಾ ಎಲ್ಲಿದೆ ಕಾಂಗ್ರೆಸ್? ನಿಮ್ಮ ಪಕ್ಷದ ಒಳಗೆ ಏನಾಗುತ್ತಿದೆ ಎನ್ನುವುದನ್ನು ಮೊದಲು ನೋಡಿಕೊಳ್ಳಿ. ಪಾಟೀಲರೇ.. ನಿಮ್ಮ ಪಕ್ಷದ ತಟ್ಟೆಯಲ್ಲಿಯೇ ಹೆಗ್ಗಣ ಸತ್ತು ಬಿದ್ದಿದೆ ಎಂದು ಟಾಂಗ್ ನೀಡಿದರು.

ಟ್ವೀಟೂ-ಖಾರಾ

ಕಾಂಗ್ರೆಸ್, ಕರ್ನಾಟಕ

2025ಕ್ಕೆ ಭಾರತ 5 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಲಿದೆ ಎಂಬ ದೂರದ ಬೆಟ್ಟ ತೋರಿಸಿದ ನರೇಂದ್ರ ಮೋದಿ ಸರಕಾರದ ಬಂಡವಾಳ ಬಯಲಾಗಿದೆ. ಭಾರತದ ಆರ್ಥಿಕತೆ 5 ಟ್ರಿಲಿಯನ್ ಇರಲಿ 4 ಟ್ರಿಲಿಯನ್ ಗುರಿ ಇನ್ನೂ ದೂರದಲ್ಲಿದೆ ಎಂಬ ವಾಸ್ತವ ಸತ್ಯ ಬೆಳಕಿಗೆ ಬಂದಿದೆ. ದೇಶದ ಆರ್ಥಿಕತೆ ಅನುಕೂಲಕರವಾಗಿ ಬೆಳೆಯಲು ಅಗತ್ಯವಾದ ಉದ್ಯೋಗ ಸೃಷ್ಟಿ, ಸ್ವಯಂ ಉದ್ಯೋಗ ಮತ್ತು ಉದ್ಯಮದ ಹೆಚ್ಚಳಕ್ಕೆ ಪೂರಕವಾಗಿಲ್ಲದಿರುವುದು ಆರ್ಥಿಕತೆಯ ವೇಗಕ್ಕೆ ಲಗಾಮು ಹಾಕಿದೆ.

ರಾಜಾರಾಮ ರಾವ್, ಬೆಂಗಳೂರು

ನಿಮ್ಮ ಹೇಳಿಕೆಗೆ ಪೂರಕವಾದ ಮಾಹಿತಿಗಳನ್ನು ದಯವಿಟ್ಟು ಹಂಚಿಕೊಳ್ಳುವಿರಾ..? ನಿಮ್ಮ ಸಂದೇಶ ಆಧರಿಸಿ ಹುಡುಕಾಟ ನಡೆಸಿದೆ. ಆದರೆ ನಿಮ್ಮ ಆರೋಪಕ್ಕೆ ಪುಷ್ಟಿ ನೀಡುವ ಯಾವುದೇ ಅಂಶಗಳು ಕಾಣುತ್ತಿಲ್ಲ. ಆಧಾರವಿಲ್ಲದೆ ನೀವು ಬರೀ ಹೇಳಿಕೆ ನೀಡಿದಂತೆ ಅನಿಸುತ್ತಿದೆ.

ಡಿಕೆ ಪರ ಶಿವಗಂಗಾ ಸೇರಿ ಹಲವು ನಾಯಕರ ಬ್ಯಾಟಿಂಗ್ | ಸಿಎಂ ಆಪ್ತರಿಂದಲೂ ಸಿದ್ದರಾಮಯ್ಯ ಪರ ಬ್ಯಾಟಿಂಗ್ | ಇಬ್ಬರನ್ನೂ ಹಿಡಿದಿಟ್ಟುಕೊಳ್ಳುವ ಒತ್ತಡದಲ್ಲಿ ಹೈಕಮಾಂಡ್

ಎಚ್ಚರಿಕೆಯ ನಡುವೆಯೂ ನಿಲ್ಲದ ಬ್ಯಾಟಿಂಗ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗೆ ಸಂಬಂಧಿಸಿದಂತೆ ಯಾವುದೇ ಹೇಳಿಕೆ ನೀಡಬಾರದು ಎನ್ನುವ ಸ್ಪಷ್ಟ ಎಚ್ಚರಿಕೆಯ ಹೊರತಾಗಿಯೂ, ಬಣ ಬಲಪ್ರದರ್ಶನಕ್ಕೆ ಕೊನೆಯಿಲ್ಲವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತರು ಮುಂದಿನ ಐದು ವರ್ಷ ಸಿದ್ದರಾಮಯ್ಯ ಸಿಎಂ ಎನ್ನುತ್ತಿದ್ದರೆ. ಡಿ.ಕೆ.ಶಿವಕುಮಾರ್ ಆಪ್ತರು, ಕುರ್ಚಿ ಖಾಲಿಯಾಗುತ್ತಿದ್ದಂತೆ ಡಿ.ಕೆ.ಶಿವಕುಮಾರ್ ಅವರೇ ಮುಖ್ಯಮಂತ್ರಿ ಎಂದು ಬ್ಯಾಟ್ ಬೀಸುತ್ತಿದ್ದಾರೆ. ನಾನು ಏಕಾಂಗಿಯಾಗಿಯೇ ಹೋರಾಡುವೆ ಎನ್ನುವ ಡಿಕೆ ಮಾತಿನ ಬೆನ್ನಲ್ಲೇ, ಕೆಲ ಶಾಸಕರು ಡಿ.ಕೆ.ಶಿವಕುಮಾರ್ ಪರವಾಗಿ ಮಾತನಾಡಲು ಶುರು ಮಾಡಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಹಾಗೂ ಪದಾಧಿಕಾರಿಗಳ ಸಭೆ ಸೋಮವಾರ ನಡೆಯಲಿದೆ. ಈ ಸಭೆಯವರೆಗೆ ಯಾವ ನಾಯಕರೂ ಬಹಿರಂಗ ಹೇಳಿಕೆ ನೀಡುವಂತಿಲ್ಲ ಎಂದು ಪಕ್ಷದ ಹೈಕಮಾಂಡ್ ಸಂದೇಶ ರವಾನಿಸಿತ್ತು. ಆದರೆ ಈ ಎಚ್ಚರಿಕೆಯ ಹೊರತಾಗಿಯೂ ಪರ-ವಿರೋಧ ಚರ್ಚೆಗಳು ಹೆಚ್ಚಾಗಿರುವುದು ಹೈಕಮಾಂಡ್ ತಲೆಬಿಸಿಗೆ ಕಾರಣವಾಗಿದೆ. ಸೋಮವಾರದ ಸಭೆಯಲ್ಲಿ ಯಾವ ರೀತಿಯ ಎಚ್ಚರಿಕೆ ರವಾನಿಸಲಿದ್ದಾರೆ ಎನ್ನುವುದು ಇದೀಗ ಎಲ್ಲರ ಮುಂದಿರುವ ಪ್ರಶ್ನೆಯಾಗಿದೆ.

ನಮ್ಮ ಹೈಕಮಾಂಡ್, ರಾಹುಲ್ ಗಾಂಧಿ, ಸೋನಿಯಾ ಮೇಡಂ, ಸುರ್ಜೇವಾಲ ಎಲ್ಲರೂ ಸಿದ್ದರಾಮಯ್ಯ ಪರ ಇದ್ದಾರೆ. ಯಾರೂ ಅನ್ಯಥಾ ಭಾವಿಸಬೇಡಿ. ರಾಜ್ಯದ ಜನರ ಆಶೀರ್ವಾದ ಇರೋವರೆಗೂ ಯಾರೂ ಅವರನ್ನು ಏನು ಮಾಡಲೂ ಆಗಲ್ಲ. ಬಿಜೆಪಿ, ಜೆಡಿಎಸ್‌ನವರು ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ. ಅವರ ಆರೋಪಗಳಲ್ಲಿ ಹುರುಳಿಲ್ಲ, ಯಾರೂ ತಲೆಕೆಡಿಸಿಕೊಳ್ಳಬೇಕಿಲ್ಲ.

-ಬೈರತಿ ಸುರೇಶ್, ಸಚಿವ

ಇಕ್ಕಟ್ಟಿನಲ್ಲಿ ಹೈಕಮಾಂಡ್: ರಾಜ್ಯ ಕಾಂಗ್ರೆಸ್‌ನಲ್ಲಿ ಹೆಚ್ಚಾಗುತ್ತಿರುವ ಅಧಿಕಾರ ಹಂಚಿಕೆ ಹೇಳಿಕೆಯ ವಿಷಯದಲ್ಲಿ ಪಕ್ಷದ ಹೈಕಮಾಂಡ್ ಸ್ಪಷ್ಟ ನಿಲುವು ತಾಳುವುದಕ್ಕೆ ಸಾಧ್ಯವಾಗುತ್ತಿಲ್ಲ. ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಸಮಬಲ ಹೊಂದಿದ್ದು, ವಿಧಾನಸಭಾ ಚುನಾವಣೆ, ಲೋಕಸಭೆ ಹಾಗೂ ಉಪಚುನಾವಣೆಯ ಗೆಲುವಿನಲ್ಲಿ ಈ ಇಬ್ಬರ ಪಾತ್ರ ಮಹತ್ವದ್ದಾಗಿದೆ. ಆದ್ದರಿಂದ ಇತ್ತ ಸಿದ್ದರಾಮಯ್ಯ ಅವರ ಬಣಕ್ಕೆ ಹೇಳಿದರೆ ಸಿದ್ದರಾಮಯ್ಯ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಡಿ.ಕೆ ಶಿವಕುಮಾರ್ ಅವರಿಗೆ ಹೇಳಿದರೆ, ಅವರ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಆದ್ದರಿಂದ ಈ ಇಬ್ಬರನ್ನು ನಿಭಾಯಿಸುವುದೇ ಪಕ್ಷದ ಹೈಕಮಾಂಡ್‌ಗೆ ತಲೆನೋವಾಗಿದೆ ಎನ್ನಲಾಗುತ್ತಿದೆ.

ಸಿಎಂ ಪರ ಹೈಕಮಾಂಡ್ ಇದೆ: ಬೈರತಿ ಸುರೇಶ್

ರಾಯಚೂರು: ಮುಂದಿನ ದಿನಗಳಲ್ಲಿ ಕ್ರಾಂತಿ ಆಗಬೇಕು ಎಂದರೆ ಹಿಂದುಳಿದ ವರ್ಗದವರು, ತುಳಿತಕ್ಕೊಳಪಟ್ಟವರು ಸಿಎಂ ಸಿದ್ದರಾಮಯ್ಯರನ್ನು ಬೆಂಬಲಿಸಿ. ಸಿದ್ದರಾಮಯ್ಯ ಅವರನ್ನು ಯಾರೂ ಏನು ಮಾಡಲು ಆಗುವುದಿಲ್ಲ. ನೀವು ತಲೆ ಕೆಡಿಸಿಕೊಳ್ಳಲು ಹೋಗಬೇಡಿ ಎಂದು ಸಚಿವ ಬೈರತಿ ಸುರೇಶ್ ಹೇಳಿದ್ದಾರೆ. ರಾಯಚೂರಿನ ದೇವದುರ್ಗದ ತಿಂಥಿಣಿ ಬ್ರಿಡ್ಜ್ ಕನಕಗುರು ಪೀಠದ ಹಾಲುಮತ ಸಂಸ್ಕೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಂವಿಧಾನವನ್ನು ಜೀವನ ಧ್ಯೇಯವನ್ನಾಗಿ ಇಟ್ಟುಕೊಂಡು ಸಿದ್ದರಾಮಯ್ಯ ರಾಜ್ಯವನ್ನು ಆಳುತ್ತಿದ್ದಾರೆ. ಪ್ರಸ್ತುತ ಸಿದ್ದರಾಮಯ್ಯ ಅವರು ಸಿಎಂ ಇದ್ದಾರೆ, ಮುಂದೆಯೂ ಇರುತ್ತಾರೆ. ಸಿಎಂ ಬದಲಾವಣೆ ವಿಚಾರ ಹೈಕಮಾಂಡ್ ನಿರ್ಧಾರ ಮಾಡುತ್ತದೆ. ಈಗಾಗಲೇ ಯಾವುದೇ ಬದಲಾವಣೆ ಅವಕಾಶ ಇಲ್ಲ ಎಂದು ಡಿಸಿಎಂ ಡಿಕೆ ಶಿವಕುಮಾರ್ ಹೇಳಿದ್ದಾರೆ. ಸಿದ್ದರಾಮಯ್ಯ ಅವರ ನಾಯಕತ್ವದಲ್ಲಿನ ಸರಕಾರ ಜನಗಳ ಒಳ್ಳೆದಕ್ಕೆ ಉಪಯೋಗಿಸಿಕೊಳ್ಳುತ್ತೇವೆ ಎಂದು ತಿಳಿಸಿದರು.

ಡಿಕೆಶಿ ಸಿಎಂ ಆಗುವುದು ಖಚಿತ: ಶಿವಗಂಗಾ

ದಾವಣಗೆರೆ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪಕ್ಷದ ಏಳಿಗಾಗಿ ಬಹಳ ಕಷ್ಟಪಟ್ಟಿದ್ದಾರೆ. ಅವರು ಪಟ್ಟಿರುವ ಕಷ್ಟಕ್ಕೆ ತಕ್ಕ ಪ್ರತಿಫಲ ಇದ್ದೇ ಇದೆ. ಈ ಅವಧಿಯಲ್ಲೇ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗುತ್ತಾರೆ ಎಂದು ಚನ್ನಗಿರಿ ಶಾಸಕ ಬಸವರಾಜ ವಿ. ಶಿವಗಂಗಾ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಅಧಿಕಾರ ಹಂಚಿಕೆ, ಪವರ್ ಶೇರಿಂಗ್ ಯಾವುದೂ ಇಲ್ಲ. ಹೈಕಮಾಂಡ್ ತೀರ್ಮಾನವೇ ಅಂತಿಮ. ಡಿಕೆಶಿ ಐದು ವರ್ಷದ ಅವಧಿಗೆ ಮುಖ್ಯಮಂತ್ರಿ ಯಾಗಬೇಕಿತ್ತು. ಕೆಲ ಬೆಳವಣಿಗೆ ಯಿಂದ ಸಿದ್ದರಾಮಯ್ಯ ಅವರು ಆಗಿದ್ದಾರೆ. ಒಳ್ಳೆಯ ಆಡಳಿತ ಮಾಡುತ್ತಿದ್ದಾರೆ. ಮುಖ್ಯಮಂತ್ರಿ ಕುರ್ಚಿ ಖಾಲಿಯಾದ ತಕ್ಷಣ ನಾವು ಕ್ಲೈಂ ಮಾಡುತ್ತೇವೆ ಎನ್ನುವ ಮೂಲಕ ಡಿಕೆ ಪರ ಬ್ಯಾಟ್ ಬೀಸಿದ್ದಾರೆ. ಡಿ.ಕೆ.ಶಿ ಶಾಸಕರ ಗೆಲ್ಲಿಸುವಲ್ಲಿ ಸಾಕಷ್ಟು ಕಷ್ಟಪಟ್ಟಿದ್ದಾರೆ. ಅವರು ಶಾಸಕರನ್ನು ಆದೇಶ ಮಾಡಿ ಕೇಳಬೇಕು. ನಾವೆಲ್ಲ ಒಗ್ಗಟ್ಟಾಗಿಯೇ ಇದ್ದೇವೆ ಎಂದು ತಿಳಿಸಿದರು.

ಮುಖ್ಯಮಂತ್ರಿ ಕುರ್ಚಿ ಖಾಲಿಯಿಲ್ಲ : ಸಿದ್ದರಾಮಯ್ಯ ಪರ ಮಹದೇವಪ್ಪ ಹೇಳಿಕೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬದಲಾವಣೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಸಚಿವ ಎಚ್.ಸಿ. ಮಹದೇವಪ್ಪ, ರಾಜ್ಯ ದಲ್ಲಿ ಮುಖ್ಯಮಂತ್ರಿ ಹುದ್ದೆ ಖಾಲಿ ಯಿಲ್ಲ. ಸಿಎಂ ಕುರ್ಚಿ ಖಾಲಿಯಿಲ್ಲ. ಸಿದ್ದರಾಮಯ್ಯ ಸಿಎಂ ಆಗಿ ಕೆಲಸ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಮುಖ್ಯ ಮಂತ್ರಿಯಾಗಿ ಮುಂದುವರಿಯುತ್ತಾರೆ ಎಂದು ಸ್ಪಷ್ಟಪಡಿಸಿದರು.

ಪಕ್ಷದ ಹೈಕಮಾಂಡ್ ಎಲ್ಲಾ ಕಾರ್ಯಕರ್ತರ ಪರವಾಗಿದೆ. ಡಿ.ಕೆ.ಶಿವಕುಮಾರ್ ಹೇಳಿರುವುದು ಸರಿಯಿದೆ. ಆದರೆ ಅಂತಿಮವಾಗಿ ಹೈಕಮಾಂಡ್ ತಗೆದುಕೊಳ್ಳುವ ತೀರ್ಮಾನವೇ ಅಂತಿಮ. ಒಂದು ಕಡೆ ಸೇರಿ ಊಟ ಮಾಡುವುದು ಅಪರಾಧವೇ? ಆ ರೀತಿ ಏನೂ ಇಲ್ಲ ಕಾಂಗ್ರೆಸ್‌ನಲ್ಲಿ. ಎಲ್ಲರೂ ಒಗಟ್ಟಾಗಿದ್ದೇವೆ ಎಂದರು. ಪರಮೇಶ್ವರ್ ಅವರ ಡಿನ್ನರ್ ಪಾರ್ಟಿ ತಡೆ ನೀಡಿದ ವಿಚಾರದ ಬಗ್ಗೆ ಮಾತನಾಡಿದ ಅವರು, ಡಿನ್ನರ್ ಪಾರ್ಟಿಗೆ ತಡೆಯಾಗಿಲ್ಲ. ಸುರ್ಜೇವಾಲ ಸೋಮವಾರ ಬರುತ್ತಿದ್ದಾರೆ. ಚರ್ಚೆ ಮಾಡಿ ಕಾರ್ಯಕ್ರಮ ಮಾಡುತ್ತೇವೆ. ಡಿನ್ನರ್‌ಗೆ ಯಾವ ತಡೆಯನ್ನು ಕೊಟ್ಟಿಲ್ಲ, ಡಿನ್ನರ್ ಮೀಟಿಂಗ್ ರಾಜಕೀಯ ಅರ್ಥ ಕಲ್ಪಿಸುವ ಅಗತ್ಯವಿಲ್ಲ. ರಾಜಕಾರಣದಲ್ಲಿ ಯಾರೂ ಕೂಡ ಸನ್ಯಾಸಿಗಳಲ್ಲ. ಅಧಿಕಾರಕ್ಕೆ ಬಂದವರಿಗೆ ಅಧಿಕಾರ ಬೇಕು ಎಂಬ ಆಸೆ ಎಲ್ಲರಿಗೂ ಇರುತ್ತದೆ ಎಂದರು.

ವಿಶ್ವವಾಣಿ ಕ್ಲಬ್ ಹೌಸ್ 13.01.2025 ಕಾರ್ನರ್
ಸೋಮವಾರದ ಅತಿಥಿ
ಬಿ.ಕೆ.ಸುಮತಿ
ಸಂಜೆ: 06.55 ರಿಂದ 08.05 ರವರೆಗೆ
ವಿಷಯ
" ರೇಡಿಯೋ ಎಂಬ ಮಾಯೆ"
vishwavani.news

ಆಕ್ರೋಶ ಶಮನಕ್ಕೆ ಬಿಜೆಪಿ ಆರೋಪ

ಹುಬ್ಬಳ್ಳಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆಯಿಂದ ಉಂಟಾಗಿರುವ ಅಂಬೇಡ್ಕರ್ ಅಭಿಮಾನಿಗಳ ಹಾಗೂ ಸಾರ್ವಜನಿಕರ ಆಕ್ರೋಶ ಶಮನ ಮಾಡಲು ಕಾಂಗ್ರೆಸ್ ಪಕ್ಷವೇ ಅಂಬೇಡ್ಕರ್‌ಗೆ ಅವಮಾನ ಮಾಡಿತ್ತು ಎಂದು ಬಿಜೆಪಿಯವರು ಕಾಂಗ್ರೆಸ್ ವಿರುದ್ಧ ಆರೋಪ ಮಾಡುತ್ತಿದ್ದಾರೆ ಎಂದು ಸಚಿವ ಸಂತೋಷ್ ಲಾಡ್ ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ಸಂವಿಧಾನ ಶಿಲ್ಪಿ ಬಿ.ಆರ್.ಅಂಬೇಡ್ಕರ್‌ಅವರ ಸಿದ್ಧಾಂತವನ್ನು ಬಿಜೆಪಿ, ಆರ್‌ಎಸ್‌ಎಸ್‌ನವರು ಪೂರ್ಣ ಮನಸ್ಸಿನಿಂದ ಒಪ್ಪುತ್ತಾರಾ ಎಂಬುದು ಸ್ಪಷ್ಟವಾಗಬೇಕು. ಬಿಜೆಪಿ, ಆರ್‌ಎಸ್‌ಎಸ್ ಕಚೇರಿಯಲ್ಲಿ ಅಂಬೇಡ್ಕರ್ ಭಾವಚಿತ್ರ ಇಲ್ಲ. ಮಾಜಿ ಸಂಸದ ಅನಂತಕುಮಾರ್ ಹೆಗಡೆ ಸಂವಿಧಾನ ಬದಲಾವಣೆ ಮಾಡುತ್ತೇವೆ ಎಂದಾಗ ಬಿಜೆಪಿಯವರು ಪ್ರತಿಭಟನೆ ಮಾಡಿರಲಿಲ್ಲ' ಎಂದು ಟೀಕಿಸಿದರು.

ಕಾಂಗ್ರೆಸ್ ಹಾಗೂ ಅಂಬೇಡ್ಕರ್ ನಡುವೆ ರಾಜಕೀಯ ಭಿನ್ನಾಭಿಪ್ರಾಯವಿತ್ತು. ಅಂಬೇಡ್ಕರ್ ಅವರು ತಮ್ಮ ಪಕ್ಷದಿಂದ ಸ್ಪರ್ಧೆ ಮಾಡಿದಾಗ ಅವರ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿ ಗೆಲುವು ಸಾಧಿಸಿದ್ದರು. ರಾಜಕೀಯದಲ್ಲಿ ಇದು ಸಾಮಾನ್ಯ. ಅಂಬೇಡ್ಕರ್ ಅವರನ್ನು ಬಿಜೆಪಿ, ಆರ್‌ಎಸ್‌ಎಸ್‌ನವರು ಎಂದಾದರೂ ಗೆಲ್ಲಿಸಿದ್ದಾರಾ ಎಂದು ಪ್ರಶ್ನಿಸಿದರು

ಭೋಜನಕೂಟಕ್ಕೆ ಮಹತ್ವ ಬೇಡ: ಎಂಬಿಪಿ

ಬೆಳಗಾವಿ: ಸಚಿವರು ತಮ್ಮ ಮನೆಗಳಲ್ಲಿ ಭೋಜನಕೂಟ ಆಯೋಜಿಸಿರುವುದಕ್ಕೆ ಮಹತ್ವ ಕೊಡಬೇಕಿಲ್ಲ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಸ್ಪಷ್ಟವಾಗಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವ ಸತೀಶ್ ಜಾರಕಿಹೊಳಿ ಮನೆಗೆ ಊಟಕ್ಕೆ ಹೋಗಿದ್ದಾರೆ. ನನ್ನ ಮನೆಗೂ ಮುಖ್ಯಮಂತ್ರಿಗಳು ಊಟಕ್ಕೆ ಬಂದಿದ್ದಾರೆ. ವಿರೋಧ ಪಕ್ಷದವರೂ ಬರುತ್ತಾರೆ. ನಾವೂ ಹೋಗುತ್ತೇವೆ. ಅದರಲ್ಲಿ ಏನು ತಪ್ಪು..? ಅದಕ್ಕೆ ಅಷ್ಟೊಂದು ಮಹತ್ವ ಕೊಡುವ ಅಗತ್ಯವಿಲ್ಲ ಎಂದರು.

ಸಿ.ಟಿ.ರವಿ ಕಟ್ಟುಕಥೆ: ಬಿಜೆಪಿ ವಿಧಾನ ಪರಿಷತ್ತಿನ ಸದಸ್ಯ ಸಿ.ಟಿ.ರವಿಗೆ ಬೆದರಿಕೆ ಪತ್ರ ಬಂದಿರುವ ಬಗ್ಗೆ ಉತ್ತರಿಸಿದ ಅವರು, ಸಿ.ಟಿ.ರವಿಯವರೇ ಬೆದರಿಕೆಯ ಪತ್ರವನ್ನು ಬರೆದು ಕಥೆ ಕಟ್ಟುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸೋಮವಾರ ಸಿಎಲ್‌ಪಿ ಸಭೆ ನಡೆಯುತ್ತಿದೆ. ಜ.21ರ ಬೆಳಗಾವಿ ಕಾಂಗ್ರೆಸ್ ಸಮಾವೇಶದ ಕುರಿತು ಚರ್ಚೆ ನಡೆಸಲಾಗುತ್ತಿದೆ. ಇವತ್ತಿನ ಸಭೆಯಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಆಗಮಿಸಲಿದ್ದಾರೆ. ಕಾಂಗ್ರೆಸ್ ಸಮಾವೇಶಕ್ಕೆ ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆಗಮಿಸುವ ಕುರಿತು ಸ್ಪಷ್ಟನೆ ನೀಡಲಿದ್ದಾರೆ ಎಂದು ಸಚಿವ ಪಾಟೀಲ್ ತಿಳಿಸಿದರು.

ಸಿ.ಟಿ.ರವಿಯೇ ಬೆದರಿಕೆ ಪತ್ರ ಬರೆದಿರಬೇಕು

ವಿಜಯಪುರ: ಸಿ.ಟಿ.ರವಿಗೆ ಬೆದರಿಕೆ ಪತ್ರ ಬಂದಿಲ್ಲ, ಅವರೇ ಬೆದರಿಕೆ ಪತ್ರ ಬರೆದುಕೊಂಡಿರಬಹುದೆಂದು ಕಾಂಗ್ರೆಸ್ ಶಾಸಕ ಲಕ್ಷ್ಮಣ ಸವದಿ ವ್ಯಂಗ್ಯವಾಡಿದ್ದಾರೆ.

ರವಿ ವಿದ್ಯಮಾನಗಳ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಅನಾಮಧೇಯ ಪತ್ರಗಳು ನಿಮಗೂ ಬರುತ್ತವೆ. ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತೀರಾ ಎಂದು ಪ್ರಶ್ನೆಮಾಡಿದರು. ಅಡ್ರೆಸ್ ಹಾಕಿ ಪತ್ರ ಬರೆದರೆ ಅದು ಲೆಕ್ಕಕ್ಕೆ ಬರುತ್ತದೆ. ಅನಾಮಧೇಯ ಎಂದರೆ ಅದು ಸುಳ್ಳು ಇರಬಹುದು, ನಿಜವೂ ಇರಬಹುದು. ಅದಕ್ಕೆ ಆಧಾರ ಇರಲ್ಲ. ಈ ಕುರಿತು ಚರ್ಚೆ ಮಾಡುವುದು ಅನಗತ್ಯ ಎಂದರು.

ಬಿಜೆಪಿಗೆ ವಾಪಸಿಲ್ಲ: ತಾವು ವಾಪಸ್ ಬಿಜೆಪಿ ಸೇರುವ ಮಾತುಗಳ ಬಗ್ಗೆ ಸ್ಪಷ್ಟನೆ ಕೊಟ್ಟ ಸವದಿ, ನಾನು ನನ್ನ ಮನೆಯಲ್ಲಿ ಇದ್ದೇನೆ. ಮತ್ತೆ ಯಾವ ಮನೆಗೆ ವಾಪಸಾಗಲಿ ಎಂದು ಪ್ರಶ್ನೆ ಮಾಡಿದರು. ಜಗದೀಶ್ ಶೆಟ್ಟರ್ ಅವರಂತೆ ನೀವು ವಾಪಸ್ ಬಿಜೆಪಿ ಸೇರುತ್ತೀರಾ ಎಂಬ ಪ್ರಶ್ನೆಗೆ, ಶೆಟ್ಟರ್ ಅವರದ್ದೇ ಬೇರೆ, ನನ್ನದೇ ಬೇರೆ. ಅದನ್ನು ತಳುಕು ಹಾಕಬೇಡಿ. ಬಿಜೆಪಿಗೆ ವಾಪಸ್ ಹೋಗುವ ಕಾರಣದಿಂದಲೇ ಮಹಾರಾಷ್ಟ್ರ ಚುನಾವಣಾ ಪ್ರಚಾರದಿಂದ ದೂರವಿರಲಿಲ್ಲ. ನನಗೆ ಸ್ಥಳೀಯ ಉಪಚುನಾವಣೆಯ ಜವಾಬ್ದಾರಿ ಕೊಟ್ಟಿದ್ದರು. ಅಲ್ಲಿ ಕೆಲಸ ಮಾಡಿ ಯಶಸ್ವಿಯಾಗಿದ್ದೇನೆ ಎಂದು ಸ್ಪಷ್ಟಪಡಿಸಿದರು.

ದಲಿತರ ದಾರಿ ತಪ್ಪಿಸುವ ಕೆಲಸ

ಮೈಸೂರು: ಸಂವಿಧಾನ ಮತ್ತು ಅಂಬೇಡ್ಕರ್ ಬಗ್ಗೆ ಮಾತನಾಡುವುದು ಕಾಂಗ್ರೆಸ್‌ಗೆ ಚಟವಾಗಿದೆ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಸ್ವಾಮಿ ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಅಂಬೇಡ್ಕರ್ ಬದುಕಿದ್ದಾಗ ಕಾಂಗ್ರೆಸ್ ಯಾವತ್ತಾದರೂ ಅವರನ್ನು ಗೌರವಿಸಿತ್ತಾ? ಸಂವಿಧಾನ ತಿದ್ದುಪಡಿ ಮಾಡಿ ಪೀಠಿಕೆ ಬದಲಾಯಿಸಿದ್ದು ಆ ಪಕ್ಷವೇ ಎಂದು ವಾಗ್ದಾಳಿ ನಡೆಸಿದರು.

ಅಂಬೇಡ್ಕರ್, ಅಂಬೇಡ್ಕರ್‌ಎನ್ನುವುದನ್ನು ಫ್ಯಾಷನ್ ಮಾಡಿಕೊಂಡಿದ್ದಾರೆ ಅಂತ ಅಮಿತ್ ಶಾ ಹೇಳಿದರು. ಇದಕ್ಕೆ ಕೋಪ ಬರುತ್ತೆ, ಯಾವತ್ತೂ ಇಲ್ಲದ ಅಂಬೇಡ್ಕರ್ ಫೋಟೊ, ನೀಲಿಶಾಲು ಹಾಕಿಕೊಂಡು ಓಡಾಡುತ್ತಿದ್ದಾರೆ. ಈ ಬಗ್ಗೆ ಹೋರಾಟ ಮಾಡುತ್ತಿರುವ ದಲಿತ ಸಂಘಟನೆಗಳಿಗೆ ಮನವಿ. ಮೊದಲು ಯಾರು ಅಂಬೇಡ್ಕರ್‌ಗೆ ಮೋಸ ಮಾಡಿದರು ಎಂಬುದನ್ನು ಅರ್ಥ ಮಾಡಿಕೊಳ್ಳಿ. ಕಾಂಗ್ರೆಸ್‌ನವರು ದಲಿತ ಸಂಘಟನೆಗಳ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ದೂರಿದರು. ಚಾಮರಾಜಪೇಟೆಯಲ್ಲಿ ಹಸುಗಳ ಕೆಚ್ಚಲು ಕೊಯ್ದಿರುವುದು ಅಮಾನವೀಯ ಘಟನೆ. ಈ ಕೃತ್ಯವನ್ನು ಖಂಡಿಸುತ್ತೇನೆ ಎಂದರು.

ಸಮಾಚಾರ ಸಣ್ಣದಲ್ಲ

ಹನೂರು: ಕಾಡೆಮ್ಮೆ, ಕಾಡಾನೆ ಸಾವು

ಚಾಮರಾಜನಗರ: ಹನೂರು ತಾಲೂಕಿನ ಮಲೆ ಮಹದೇಶ್ವರ ವನ್ಯಧಾಮ ವ್ಯಾಪ್ತಿಯ ಹೂಗ್ಯಂ ವಲಯದ ಅರಣ್ಯ ಪ್ರದೇಶದಲ್ಲಿ ಹೆಣ್ಣಾನೆಯೊಂದು ಮೃತಪಟ್ಟಿದೆ. ಹೂಗ್ಯಂ ವಲಯದ ಸೂಳೆಕೋಬೆ ಗಸ್ತಿನಲ್ಲಿ ಆನೆ ಮೃತಪಟ್ಟಿರುವುದು ಪತ್ತೆಯಾಗಿದೆ. ತಕ್ಷಣ ಅರಣ್ಯ ಇಲಾಖೆಯ ಸಿಬ್ಬಂದಿ ವಲಯ ಅರಣ್ಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಎಸಿಎಫ್ ಶಿವರಾಮು, ವಲಯ ಅರಣ್ಯಾಧಿಕಾರಿ ಪುಟ್ಟರಾಜು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತಪಟ್ಟಿರುವ ಆನೆಗೆ ಸುಮಾರು 40 ವರ್ಷ ವಯಸ್ಸಾಗಿದ್ದು, ಸ್ವಾಭಾವಿಕವಾಗಿ ಮೃತಪಟ್ಟಿದೆ ಎಂದು ತಿಳಿದು ಬಂದಿದೆ. ಪಶು ವೈದ್ಯಾಧಿಕಾರಿ ಡಾ.ಸಿದ್ದರಾಜು ಆನೆಯ ಕಳೇಬರದ ಮರಣೋತ್ತರ ಪರೀಕ್ಷೆ ನಡೆಸಿದ್ದಾರೆ. ಅದೇ ರೀತಿ ಮಲೆಮಹದೇಶ್ವರ ವನ್ಯಧಾಮ ವ್ಯಾಪ್ತಿಯ ಹನೂರು ತಾಲೂಕಿನ ಪಚ್ಚೆದೊಡ್ಡಿ ಅರಣ್ಯದಲ್ಲಿ, ಚಿರತೆಯೊಂದು ಕಾಡೆಮ್ಮೆಯ ಮೇಲೆ ದಾಳಿ ನಡೆಸಿದ್ದು, ಅದರಿಂದ ತಪ್ಪಿಸಿಕೊಳ್ಳಲು ಹೋಗಿ ಕಂದಕಕ್ಕೆ ಬಿದ್ದು ಅಸುನೀಗಿದೆ.

ಪತ್ನಿಯನ್ನು ಇರಿದು ಕೊಂದವನ ಬಂಧನ

ಕೊಪ್ಪಳ: ಪತ್ನಿಯನ್ನು ಪತಿಯೇ ಚಾಕುವಿನಿಂದ ಇರಿದು ಹತ್ಯೆಗೈದ ಘಟನೆ ಕೊಪ್ಪಳದಲ್ಲಿ ನಡೆದಿದೆ. ತುರುವೇಕೆರೆ ಮೂಲದ ರಾಜೇಶ್ ಎಂಬಾತ ಕೃತ್ಯ ಎಸಗಿದ್ದು, ಇರಿತದಿಂದ ಗಂಭೀರವಾಗಿ ಗಾಯಗೊಂಡಿದ್ದ ಪತ್ನಿ ಗೀತಾ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಈ ದಂಪತಿ ಕೊಪ್ಪಳ ಜಾತ್ರೆಗೆ ವ್ಯಾಪಾರಕ್ಕಾಗಿ ಬಂದಿದ್ದರು. ಅಕ್ರಮ ಸಂಬಂಧ ಶಂಕೆಯಿಂದ ರಾಜೇಶ್, ಪತ್ನಿ ಜತೆ ಜಗಳವಾಡುತ್ತಿದ್ದ. ಜಗಳ ವಿಕೋಪಕ್ಕೆ ತಿರುಗಿ ಪತ್ನಿಗೆ ಚಾಕುವಿನಿಂದ ಇರಿದಿದ್ದಾನೆ. ಆರೋಪಿ ರಾಜೇಶನನ್ನು ಕೊಪ್ಪಳ ಪೊಲೀಸರು ಬಂಧಿಸಿದ್ದು, ಅಕ್ರಮ ಸಂಬಂಧದ ಶಂಕೆಯಿಂದ ರಾಜೇಶ್ ಈ ಕೃತ್ಯ ಎಸಗಿದ್ದಾನೆ ಎಂದು ತಿಳಿಸಿದ್ದಾರೆ.

ತಮ್ಮನ ತಲೆ ಮೇಲೆ ಕಲ್ಲು ಹಾಕಿ ಕೊಲೆ

ಶಿವಮೊಗ್ಗ: ಅಣ್ಣನೇ ತಮ್ಮನ ತಲೆಯ ಮೇಲೆ ಕಲ್ಲು ಎತ್ತಿ ಹಾಕಿ ಭೀಕರವಾಗಿ ಕೊಲೆ ಮಾಡಿರುವ ಘಟನೆ ಶಿವಮೊಗ್ಗದಲ್ಲಿ ನಡೆದಿದೆ. ಶಿವಮೊಗ್ಗ ತಾಲೂಕಿನ ಪುರದಾಳು ಗ್ರಾ.ಪಂ ವ್ಯಾಪ್ತಿಯ ಅನುಪಿನಕಟ್ಟೆ ಲಂಬಾಣಿ ತಾಂಡದಲ್ಲಿ ಘಟನೆ ನಡೆದಿದೆ. ಗಿರೀಶ್ (30) ಕೊಲೆಯಾದ ವ್ಯಕ್ತಿ. ಬೆಳಗೆ ಅಣ್ಣ ಲೋಕೇಶ್ ತಮ್ಮನ ತಲೆಯ ಮೇಲೆ ಕಲ್ಲು ಎತ್ತಿ ಹಾಕಿದ್ದು, ತೀವ್ರ ರಕ್ತಸ್ರಾವದಿಂದ ತಮ್ಮ ಗಿರೀಶ್ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ವೈಯಕ್ತಿಕ ವಿಚಾರಕ್ಕೆ ಕೊಲೆ ನಡೆದಿದೆ ಎನ್ನಲಾಗುತ್ತಿದ್ದು, ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಆರೋಪಿ ಲೋಕೇಶ್‌ನನ್ನು ವಶಕ್ಕೆ ಪಡೆದಿದ್ದಾರೆ. ತುಂಗಾನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ತನಿಖೆಯನ್ನು ಮುಂದುವರಿಸಿದ್ದಾರೆ

ವಿರಾಮ
ಪ್ರತಿ ಭಾನುವಾರ

ಡಿಸಿಎಂ ಹೇಳಿಕೆಗೆ ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ತಿರುಗೇಟು

ಸಿಎಂ ಹುದ್ದೆಗಾಗಿ ಡಿಕೆಶಿ ಡ್ರಾಮಾ

ಚಿಕ್ಕಮಗಳೂರು: ಮೋಹ, ಮದ, ಮತ್ಸರಗಳಿಂದ ಹೊರಗಿದ್ದು ನೋಡಿತ್ತಾರೋ ಅವರಿಗೆ ಸತ್ಯಾಸತ್ಯತೆ ಗೊತ್ತಾಗುತ್ತದೆ. ಮೋಹ ಪರವಶರಾದವರಿಗೆ, ಅಧಿಕಾರದ ಮದದಿಂದ ಮತ್ಸರದ ರಾಜಕಾರಣ ಮಾಡುವವರಿಗೆ ಸತ್ಯ ಅರ್ಥವಾಗುವುದಿಲ್ಲವೆಂದು ಡಿ.ಕೆ.ಶಿವಕುಮಾರ್ ಹೇಳಿಕೆಗೆ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ತಿರುಗೇಟು ನೀಡಿದ್ದಾರೆ.

ಗಾಂಧಿಗಿರಿಯೇ , ಗೂಂಡಾಗಿರಿಯೇ..?: ಸಿ.ಟಿ.ರವಿ ಡ್ರಾಮಾ ಮಾಸ್ಟರ್ ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆಗೆ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಉಪ ಮುಖ್ಯಮಂತ್ರಿಯಾಗಿ ನ್ಯಾಯದ ಸ್ಥಾನದಲ್ಲಿದ್ದೀರಿ. ಆದರೆ, ಯಾರ ವಕೀಲರಾಗಿ ಬಿಟ್ಟಿದ್ದೀರಿ. ಸಭಾಪತಿ ರೂಲಿಂಗ್ ನೀಡಿದ ಮೇಲೂ ನಡೆದ ಘಟನೆ ಬಗ್ಗೆ ಗಾಂಧಿಗಿರಿ ಎನ್ನಬೇಕೇ ಅಥವಾ ಗೂಂಡಾಗಿರಿ ಎನ್ನಬೇಕೇ ಎಂದು ತೀಕ್ಷ್ಣವಾಗಿ ಪ್ರಶ್ನಿಸಿದರು.

ಬೆದರಿಕೆ ಪತ್ರದ ಬಗ್ಗೆ ಪ್ರತಿಕ್ರಿಯಿಸಿ, ಪತ್ರ ಬಂದಿದೆ. ತನಿಖೆ ನಡೆಯುತ್ತಿದೆ. ಬಿಜೆಪಿ ಕಚೇರಿಯಿಂದಲೇ ದೂರು ಕೊಡಲಾಗಿದೆ. ಹೋರಾಟದಿಂದ ಬಂದವನು ನಾನು, ಇಂತಹದಕ್ಕೆಲ್ಲ ಹೆದರುವುದಿಲ್ಲ. ನನ್ನ ಡಿಕ್ಷನರಿಯಲ್ಲಿ ಹೆದರಿಕೆಗೆ ಜಾಗವಿಲ್ಲ ಎಂದು ತಿರುಗೇಟು ನೀಡಿದರು.

ಮತಾಂಧರಿಗೆ ಈ ನೆಲದಲ್ಲಿ ಜಾಗವಿಲ್ಲ: ಬೆಂಗಳೂರಿನ ಚಾಮರಾಜಪೇಟೆಯ ಹಸುವಿನ ಕೆಚ್ಚಲು ಕೊಯ್ದು ಕ್ರೌರ್ಯ ಮೆರೆದ ಪ್ರಕರಣಕ್ಕೆ ಪ್ರತಿಕ್ರಿಯಿಸಿ, ಇದು ಮತಾಂಧರ ಕೃತ್ಯ, ಇದನ್ನು ಸಹಿಸಿಕೊಳ್ಳಬಾರದು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದರು. ಸನಾತನ ಧರ್ಮದಿಂದ ಬಂದವರು ನಾವು ಎಲ್ಲದರಲ್ಲೂ ದೇವರನ್ನು ಕಾಣುತ್ತೇವೆ. ನಮ್ಮನ್ನು ಕೆರಳಿಸುವ, ಗಲಭೆ ಸೃಷ್ಟಿಸುವ ಉದ್ದೇಶದಿಂದ ಈ ಕೃತ್ಯ ಎಸಗಿದ್ದು, ಇದನ್ನು ಸಹಿಸಿಕೊಳ್ಳಬಾರದು ಎಂದರು.

ಕಾಣದ ಕೈಗಳ ಪಾತ್ರ

ನಿಮ್ಮ ಸರಕಾರದ ಪೊಲೀಸರು ಮಾಡಿದ ದೌರ್ಜನ್ಯ ಹಿಂದೆ ಯಾರ ಕುಮ್ಮಕ್ಕಿದೆ, ಯಾರ ಕಾಣದ ಕೈಗಳ ಪಾತ್ರವಿದೆ. ಇದನ್ನು ಮೋಹ, ಮದ ಮಾತ್ಸರ್ಯಗಳಿಂದ ಹೊರಗಿದ್ದು ನೋಡಿದರೇ ಸತ್ಯದ ಅರಿವು ಆಗುತ್ತದೆ. ಯಾರು ಹೇಗಿದ್ದಾರೋ ಇತರರೂ ಹಾಗೇ ಎಂದು ಭಾವಿಸುತ್ತಾರೆ. ಡಿ.ಕೆ.ಶಿವಕುಮಾರ್ ನಾಟಕ ಮಾಡುತ್ತಿರುವುದು ಮುಖ್ಯಮಂತ್ರಿ ಹುದ್ದೆಗಾಗಿ ಎಂದು ಕೆಲ ಕಾಂಗ್ರೆಸ್ ನಾಯಕರು ಮಾತನಾಡಿಕೊಳ್ಳುತ್ತಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

ಶತ್ರುಸಂಹಾರ ಹೋಮದ ಬಗ್ಗೆ ಮಾಜಿ ಡಿಸಿಎಂ ಈಶ್ವರಪ್ಪ ವಾಗ್ದಾಳಿ

ಜಾತಿವಾದ ಬೇಡ: ಕೈಗೆ ಎಚ್ಚರಿಕೆ

ಬಾಗಲಕೋಟೆ: ಡಿಸಿಎಂ ಡಿ.ಕೆ.ಶಿವಕುಮಾರ್ ಶತ್ರುಸಂಹಾರಕ್ಕೆ ಪ್ರತ್ಯಂಗಿರಾ ಹೋಮ ಮಾಡಿರುವುದು ವ್ಯಕ್ತಿ ಎಂದು ಯೋಚಿಸಿದೆ, ಐಟಿ, ಸಿಬಿಐ ಹಾಗೂ ಇ.ಡಿ.ಗಳು ಕೆಲವರಿಗೆ ಭೂತ ಕಂಡಹಾಗೇ ಕಾಣುತ್ತಿರುತ್ತವೆ ಎಂದು ಮಾಜಿ ಡಿಸಿಎಂ ಈಶ್ವರಪ್ಪ ವ್ಯಂಗ್ಯವಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶತ್ರುಗಳ ಸಂಹಾರ ಎಂದು ಶಿವಕುಮಾರ್ ಹೊರಟಿದ್ದಾರೆ. ಅವರಿಗೆ ನ್ಯಾಯ ಸಿಗಲಿ ಎಂದರು.

ಜಾತಿವಾದ ಕಾಂಗ್ರೆಸ್‌ಗೆ ಒಳ್ಳೆಯದಲ್ಲ: ಕಾಂಗ್ರೆಸ್ ಪಕ್ಷದ ಸ್ಥಿತಿ ನೋಡಿದರೆ ಇವತ್ತು ಮಹಾತ್ಮ ಗಾಂಧೀಜಿ ಬದುಕಿದ್ದರೆ ನೇಣು ಹಾಕಿಕೊಳ್ಳುತ್ತಿದ್ದರು. ಇಷ್ಟೊಂದು ಜಾತಿವಾದ ಪಕ್ಷಕ್ಕೆ ಒಳ್ಳೆಯದಲ್ಲ. ರಾಜ್ಯದಲ್ಲಿ ರಾಜಕೀಯ ಪರಿಸ್ಥಿತಿ ಬಹಳ ಗೊಂದಲದಲ್ಲಿದೆ. ನಾನು ಯಾವ ಕಾರ್ಯಕರ್ತರ ಹತ್ತಿರವೂ ಹೋಗಲ್ಲ. ಯಾವ ಶಾಸಕರ ಬೆಂಬಲವನ್ನು ಕೇಳಲ್ಲ.ಪಕ್ಷ ತೀರ್ಮಾನ ಮಾಡಲಿ ಎಂದಿದ್ದಾರೆ.

ಇದು ಬರೀ ಗಂಟಲು ಮೇಲಿನ ಮಾತು ಆಗಿರಬಾರದು. ಒಳಗಡೆ ಇದ್ದು ಗುಂಪುಗಾರಿಕೆ ಮಾಡುವುದು ಎಂದು ಈಶ್ವರಪ್ಪ ಮಾರ್ಮಿಕವಾಗಿ ನುಡಿದರು.

ಸಿಎಂ ಹುದ್ದೆಗೆ ಪೈಪೋಟಿ: ಜಾತಿ ಜಾತಿ ಅಂತ ಜಾತಿ ಮುಖಂಡರನ್ನು ಮುಖ್ಯಮಂತ್ರಿ ಮಾಡುತ್ತೇವೆ ಅಂದರೆ ಯಾವ ನ್ಯಾಯ ಇದು? ಸಚಿವ ಎಂ.ಬಿ.ಪಾಟೀಲ, ಪರಮೇಶ್ವರ ಹಾಗೂ ಜಾರಕಿಹೊಳಿ ನಾನೇ ಮುಖ್ಯಮಂತ್ರಿ ಆಗಬೇಕು ಅಂತಾರೆ. ಯಾರಾದರೂ ಆಗಿ, 140 ಶಾಸಕರ ಬಹುಮತ ಇದೆ. ಆದರೆ, ಇಷ್ಟೊಂದು ಗುಂಪುಗಾರಿಕೆ, ಅದು ಜಾತಿ ಮುಖಾಂತರ ಮುಖ್ಯಮಂತ್ರಿ ಆಯ್ಕೆ ಮಾಡುವುದು ತುಂಬಾ ಅನ್ಯಾಯ ಮಾಜಿ ಡಿಸಿಎಂ ಎಚ್ಚರಿಕೆ ಕೊಟ್ಟರು.

ಬಿಜೆಪಿ ನನ್ನ ತಾಯಿ: ಬಿಜೆಪಿ ಬಿಟ್ಟು ಎಲ್ಲಿ ಹೋಗ್ಲಿ

ಬಿಜೆಪಿ ನನ್ನ ತಾಯಿ. ತಾಯಿಯನ್ನು ಬಿಟ್ಟು ಯಾವತ್ತಾದರೂ ಮಗ ಇರುತ್ತಾನಾ? ನಾನು ಬಿಜೆಪಿ ಬಿಟ್ಟು ಇನ್ನೆಲ್ಲಿ ಹೋಗಲಿ. ಬಿಜೆಪಿಯಲ್ಲಿ ಸಾಕಷ್ಟು ಗೊಂದಲಗಳು ಇವೆ. ಅವುಗಳಿಗೆ ಮೊದಲು ರಿಪೇರಿ , ಶುದ್ಧೀಕರಣ ಆಗಬೇಕು. ಚುನಾವಣೆ ವೇಳೆ ಯಾದವ್ ಅವರು ನನಗೆ ಫೋನ್ ಮಾಡಿದ್ದರು, ನಾನೇ ಕರೆ ಸ್ವೀಕರಿಸಲಿಲ್ಲ. ಕಾಂಗ್ರೆಸ್ ನ ನಾಯಕರೂ ಕರೆಮಾಡಿದ್ದರು. ಡಾ. ಶಾಮಪ್ರಸಾದ ಮುಖರ್ಜಿ ಅವರು ಪಕ್ಷಕ್ಕೆ ಬಲಿದಾನ ಮಾಡಿದ್ದಾರೆ. ಪಕ್ಷಕ್ಕಾಗಿ ಪಂ. ದೀನದಯಾಳ ಉಪಾಧ್ಯಾಯರು ಹುತಾತ್ಮರಾದರು.ಅವರೆಲ್ಲರ ಆದರ್ಶ ಇಟ್ಟುಕೊಂಡಿರುವ ಬಿಜೆಪಿ ಶುದ್ಧೀಕರಣ ಆಗಬೇಕು. ಇದು ನನಗೂ ಇದೆ, ಲಕ್ಷಾಂತರ ಕಾರ್ಯಕರ್ತರ ಉದ್ದೇಶ ಆಗಿದೆ ಎಂದರು.

ಅಡಿಗಾಸ್ 30ನೇ ವರ್ಷದ ಸಂಭ್ರಮಾಚರಣೆ | 500ಕ್ಕೂ ಹೆಚ್ಚು ವೈವಿಧ್ಯಮಯ ತಾಣಗಳಿಗೆ ಪ್ರವಾಸ ಆಯೋಜನೆ

ಅಡಿಗಾಸ್ ಪ್ರವಾಸಿ ದಿನ: ಭವಿಷ್ಯದ ಯೋಜನೆ ಪ್ರಕಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ಯಾಕೇಜ್ ಟೂರ್‌ಗಳ ಮೂಲಕ ಮನೆಮಾತಾಗಿರುವ ಅಡಿಗಾಸ್ ಯಾತ್ರಾ ಸಂಸ್ಥೆ 30ನೇ ವಾರ್ಷಿಕೋತ್ಸವವನ್ನು ಆಚರಿಸಿಕೊಂಡಿದೆ.

ಬೆಂಗಳೂರಿನ ವಿಜಯನಗರದಲ್ಲಿರುವ ಕಾಸಿಯಾ ಸಭಾಂಗಣದಲ್ಲಿ 30 ವರ್ಷದ ಸಂಭ್ರಮಾಚರಣೆಯನ್ನು ಸಂಸ್ಥೆ ಹಮ್ಮಿಕೊಂಡಿತ್ತು. ಇದರ ಭಾಗವಾಗಿ 'ಅಡಿಗಾಸ್ ಪ್ರವಾಸಿ ದಿನ' ಕಾರ್ಯಕ್ರಮ ನೆರವೇರಿತು. ಇಡೀ ದಿನ ನಡೆದ ಕಾರ್ಯಕ್ರಮದಲ್ಲಿ ಸಂಸ್ಥೆಯ ಸಾಧನೆಯ ಜತೆಜತೆಗೆ ಭವಿಷ್ಯದ ಯೋಜನೆಗಳನ್ನು ಪ್ರಕಟಿಸಲಾಯಿತು.

ಜನರ ವಿಶ್ವಾಸ ಉಳಿಸಿಕೊಳ್ಳುತ್ತೇವೆ: ಪ್ರವಾಸಿ ಯೋಜನೆಗಳ ಬಗ್ಗೆ ಮಾತನಾಡಿದ ಅಡಿಗಾಸ್ ಯಾತ್ರಾ ಸಂಸ್ಥಾಪಕ ಕೆ.ನಾಗರಾಜ ಅಡಿಗರು, ಸತತ ಪರಿಶ್ರಮ, ಸೇವಾ ಮನೋಭಾವ ಹಾಗೂ ದಕ್ಷತೆಯ ಮೂಲಕ ಅಡಿಗಾಸ್ ಸಂಸ್ಥೆ ಮನೆಮಾತಾಗಿದೆ. ನಂಬಿಕೆ ಹಾಗೂ ವಿಶ್ವಾಸ ನಮ್ಮ ಧ್ಯೇಯವಾಗಿದೆ. ನಿಮ್ಮೆಲ್ಲರ ಸಹಕಾರ ಹಾಗೂ ಪ್ರೋತ್ಸಾಹವನ್ನು ಸದಾ ಬಯಸುತ್ತೇನೆ ಎಂದು ಹೇಳಿದರು.

ಕಳೆದ ವಾರ ಧರ್ಮಸ್ಥಳ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರು ಅಡಿಗಾಸ್ ಯಾತ್ರಾ ಪ್ರಕಟಿಸಿರುವ 31ನೇ ವರ್ಷದ ಪ್ರಯುಕ್ತ ಯಾತ್ರಾ- 2025 ಪ್ರವಾಸಿ ಕೈಪಿಡಿಯನ್ನು ಬಿಡುಗಡೆಗೊಳಿಸಿದ್ದಾರೆ. ಈ ಕೈಪಿಡಿಯಲ್ಲಿ 500ಕ್ಕೂ ಅಧಿಕ ವೈವಿಧ್ಯಮಯ ಪ್ರವಾಸಿ ಸ್ಥಾನಗಳ ಸಂಪೂರ್ಣ ವಿಷಯಗಳನ್ನೊಳಗೊಂಡಿದೆ ಎಂದು ತಿಳಿಸಿದರು.

ಅಡಿಗಾಸ್ ಟ್ರಾವಲ್ಸ್ ಸೇವೆಗೆ ಮೆಚ್ಚುಗೆ: ಕಾಸಿಯಾ ಅಧ್ಯಕ್ಷ ಎಂ.ಜಿ ರಾಜಗೋಪಾಲ್ ಮಾತನಾಡಿ, 30 ವರ್ಷಗಳಿಂದ ಟ್ರಾವಲ್ ಸಂಸ್ಥೆ ನಡೆಸುವುದು ಸಾಮಾನ್ಯ ಕೆಲಸವಲ್ಲ. ನಿತ್ಯವೂ ಬೇರೆ ಬೇರೆ ಮನೋಧರ್ಮದ ಪ್ರವಾಸಿಗರು ಬರುತ್ತಾರೆ. ಅವರೆಲ್ಲರನ್ನು ಅಡಿಗಾಸ್ ಸಂಭಾಳಿಸಿ ಸೇವೆ ನೀಡಿರುವ ಕಾರಣ ಯಶಸ್ಸು ಪಡೆದಿದೆ ಎಂದು ಅಭಿಪ್ರಾಯಪಟ್ಟರು.

ಬೆಂಗಳೂರಿನ ಕಾಸಿಯಾ ಸಭಾಂಗಣದಲ್ಲಿ ನಡೆದ ಅಡಿಗಾಸ್ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ಪ್ರವಾಸಿ ದಿನ ಕಾರ್ಯಕ್ರಮವನ್ನು ಕಾಸಿಯಾ ಅಧ್ಯಕ್ಷ ಎಂ.ಜಿ ರಾಜಗೋಪಾಲ್, ಅಡಿಗಾಸ್ ಯಾತ್ರಾ ಸಂಸ್ಥಾಪಕ ನಾಗರಾಜ್ ಅಡಿಗ, ಹಾಸ್ಯ ಕಲಾವಿದ ಎಂ.ಎಸ್ ನರಸಿಂಮೂರ್ತಿ,ಗಾಯಕ ಶ್ರೀ ಹರ್ಷ ಉದ್ಘಾಟಿಸಿದರು.

ಅಡಿಗಾಸ್ ನಮ್ಮ ಕರ್ನಾಟಕ ಸಂಸ್ಥೆಯಾಗಿರುವುದು ನಮ್ಮ ಹೆಮ್ಮೆ, ಸಂಸ್ಥೆ ಇನ್ನಷ್ಟು ಉನ್ನತ ಮಟ್ಟಕ್ಕೇರಲಿ. ಪ್ರವಾಸೋದ್ಯಮಕ್ಕೆ ಸರಕಾರ ಹೆಚ್ಚಿನ ಆದ್ಯತೆ ನೀಡುತ್ತಿದೆ. ನಮ್ಮ ರಾಷ್ಟ್ರಕ್ಕೆ ವಿದೇಶಗಳಿಂದ ಪ್ರವಾಸಿಗರು ಬರುವಂತಾಗಲಿ ಎಂದು ಹೇಳಿದರು. ಬಳಿಕ ಅಡಿಗಾಸ್ ಯಾತ್ರಾ ಸಂಸ್ಥೆ ಸ್ಥಾಪಕ ನಾಗರಾಜ್ ಅಡಿಗ ಅವರು, ಸಂಸ್ಥೆ ಹಮ್ಮಿಕೊಂಡಿರುವ ವಿವಿಧ ಪ್ರವಾಸಿ ಪ್ಯಾಕೇಜ್‌ಗಳಿಗೆ ಸಂಬಂಧಿಸಿದ ಮಾಹಿತಿ ನೀಡಿದರು. ಇದೇ ವೇಳೆ, ಹಾಸ್ಯ ಸಾಹಿತಿ ಎಂ.ಎಸ್ ನರಸಿಂಮೂರ್ತಿಯಿಂದ ನಗೆಚಟಾಕಿ ಮತ್ತು ಗಾಯಕ ಶ್ರೀಹರ್ಷ ಹಾಗೂ ಅವರ ತಂಡದಿಂದ ಸಂಗೀತ ರಸಸಂಜೆ ಕಾರ್ಯಕ್ರಮ ನೆರವೇರಿತು.

ಮೂರು ದಶಕದ ಸಂಭ್ರಮ

ಪ್ರವಾಸೋದ್ಯಮ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಅಡಿಗಾಸ್ ಯಾತ್ರಾ ತನ್ನ 30 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದೆ. ಅದ್ಭುತ ಪ್ರವಾಸ ಅನುಭವಗಳಿಗೆ ಹೆಸರಾದ ಆಡಿಗಾಸ್ ಸಂಸ್ಥೆ ಕೇಂದ್ರ ಸರಕಾರದ ಪ್ರವಾಸೋದ್ಯಮ ಇಲಾಖೆ ಮತ್ತು ಕರ್ನಾಟಕ ಸರಕಾರದ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ ಪಡೆದ ಸಂಸ್ಥೆಯಾಗಿ ಗುರುತಿಸಲ್ಪಟ್ಟಿದೆ.

ಕಾಂಗ್ರೆಸ್ ವಿರುದ್ಧ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಕಿಡಿ

ಮತಾಂಧರ ಹಾವಳಿ ಹೆಚ್ಚಾಗಿದೆ

ಹುಬ್ಬಳ್ಳಿ: ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ವಿಚಾರದಲ್ಲಿ ವಿಧಾನ ಪರಿಷತ್ ಸಭಾಪತಿ ಕಚೇರಿ ಹಾಗೂ ಸರಕಾರ ಮಧ್ಯ ಅನಗತ್ಯವಾದ ಸಂಘರ್ಷ ಸರಿಯಲ್ಲ ಎಂದು ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ವಿಧಾನ ಪರಿಷತ್ ಸದಸ್ಯ ಸಿಟಿ ರವಿ ಪ್ರಕರಣದಲ್ಲಿ ಸಭಾಪತಿ ಹಾಗೂ ಸರಕಾರದ ನಡುವೆ ಸಂಘರ್ಷ ವಿಚಾರವಾಗಿ ಮಾತನಾಡಿ, ಸರಕಾರ ಶಾಸಕಾಂಗದ ಮೇಲೆ ಸವಾರಿ ಮಾಡುತ್ತಿದ್ದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಅನೇಕ ಸಲಹೆ ಸೂಚನೆ ನೀಡಿದ್ದಾರೆ. ಇಲ್ಲಿ ಸರಕಾರ ಅದನ್ನ ಪಾಲನೆ ಮಾಡುವುದು ಒಳ್ಳೆಯದು ಬಸವರಾಜ ಹೊರಟ್ಟಿ ಅವರು ಸರಕಾರದ ನಡೆ ವಿರೋಧಿಸಿ ವಿಸ್ತ್ರತ ಪತ್ರ ಬರೆದಿದ್ದಾರೆ. ಬುದ್ಧಿ ಭ್ರಮಣೆಯಾಗಿದ್ದ ಕಾಂಗ್ರೆಸ್ ಗೆ ಪ್ರಜಾಪ್ರಭುತ್ವದ ಮೇಲೆ ನಂಬಿಕೆ ಇಲ್ಲ. ಅಧಿಕಾರಕ್ಕೆ ಬಂದಾಗಿನಿಂದ ಮತಾಂಧರ ಹಾವಳಿ ಹೆಚ್ಚಾಗಿದೆ. ಅವರು ರಾಜ್ಯದಲ್ಲಿ ಭ್ರಷ್ಟಾಚಾರ ಎಗ್ಗಿಲ್ಲದೇ ನಡೆದಿದೆ. ಆರ್‌ಟಿ ಓ ಸೇರಿದಂತೆ ಹಲವು ಕಡೆ ಭ್ರಷ್ಟಾಚಾರ ನಡೆದಿದೆ. ಕಾಂಗ್ರೆಸ್ ಸರಕಾರ ಸಂಪೂರ್ಣ ವಾಗಿ ತನ್ನ ಹಿಡಿತ ಕಳೆದುಕೊಳ್ಳುತ್ತಿದ್ದು, ಇದಕ್ಕೆಲ್ಲ ಕಾಂಗ್ರೆಸ್ ನ ಒಳಜಗಳವೇ ಮುಖ್ಯ ಕಾರಣ. ಎಂದು ಪ್ರಲ್ಹಾದ ಜೋಶಿ ಹೇಳಿದರು.

ರಸ್ತೆ ಅಪಘಾತ: ಇಬ್ಬರ ಸಾವು

ಶಿರಾ: ಕ್ರೂಸರ್ ವಾಹನವೊಂದು ಲಾರಿಗೆ ಡಿಕ್ಕಿ ಆಗಿದ್ದು, ಕ್ರೂಸರ್‌ನ ಚಾಲಕ ಸೇರಿ ಇಬ್ಬರು ಸಾವನ್ನಪ್ಪಿದ್ದು, ನಾಲ್ವರಿಗೆ ತೀವ್ರ ಗಾಯಗಳಾಗಿರುವ ಘಟನೆ ರಾಷ್ಟ್ರೀಯ ಹೆದ್ದಾರಿ 48 ರಲ್ಲಿರುವ ಎಮ್ಮೇರಹಳ್ಳಿ ಸೇತುವೆ ಬಳಿ ನಡೆದಿದೆ.

ಚಾಲಕ ಬಸವರಾಜು (40), ಸುರೇಶ್ (28) ಮೃತ ದುರ್ದೈವಿಗಳು. ಮೃತರನ್ನು ರಾಯಚೂರು ಜಿಲ್ಲೆಯ ಮಾನ್ವಿ ಮೂಲದವರು ಎಂದು ಗುರುತಿಸಲಾಗಿದೆ.

ಅಪಘಾತದಲ್ಲಿ ಗಾಯಗೊಂಡಿರುವ ನಾಲ್ವರನ್ನು ಶಿರಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಕೂಲಿ ಕೆಲಸ ಮಾಡಲು ಬೆಂಗಳೂರಿನತ್ತ ಕ್ರೂಸರ್ ವಾಹನದಲ್ಲಿ ತೆರಳುತ್ತಿದ್ದರು. ಈ ವೇಳೆ ಚಾಲಕನ ನಿಯಂತ್ರಣ ತಪ್ಪಿ ಹಿಂಬದಿಯಿಂದ ಲಾರಿಗೆ ಕ್ರೂಸರ್ ವಾಹನ ಡಿಕ್ಕಿ ಹೊಡೆದಿದೆ.

ಡಿಕ್ಕಿಯ ರಭಸಕ್ಕೆ ಕ್ರೂಸರ್ ಸಂಪೂರ್ಣ ನಜ್ಜುಗುಜ್ಜಾಗಿದೆ. ಶಿರಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಶ್ವವಾಣಿ

ಸಂಪಾದಕೀಯ

ಪ್ರಕೃತಿಯ ಎದುರು ನಿಲ್ಲಲಾದೀತೇ?

ಪ್ರಕೃತಿಯ ರುದ್ರನರ್ತನದ ಮುಂದೆ ಹುಲುಮಾನವರ ಆಟ ನಡೆಯುವುದಿಲ್ಲ ಎಂಬುದಕ್ಕೆ ಅಮೆರಿಕದಲ್ಲಿ ಅಬ್ಬರ ಮಾಡುತ್ತಿರುವ ಕಾಡ್ಗಿಚ್ಚೇ ಸಾಕ್ಷಿ. ಲಾಸ್‌ಏಂಜಲೀಸ್ ಮತ್ತು ದಕ್ಷಿಣ ಕ್ಯಾಲಿಫೋರ್ನಿಯಾ ಭಾಗದಲ್ಲಿ ಅಮರಿಕೊಂಡ ಅಗ್ನಿಜ್ವಾಲೆಗೆ ಇದುವರೆಗೆ 11ಕ್ಕೂ ಹೆಚ್ಚು ಜೀವಗಳ ಬಲಿಯಾಗಿದೆ. ಲಾಸ್‌ಏಂಜಲೀಸ್ ರಾಜ್ಯವೊಂದರಲ್ಲೇ 12 ಸಾವಿರಕ್ಕೂ ಹೆಚ್ಚಿನ ಕಟ್ಟಡಗಳು ಸುಟ್ಟು ಕರಕಲಾಗಿರುವುದು, ಒಟ್ಟಾರೆ ಹಾನಿಯ ಪ್ರಮಾಣ 13 ಲಕ್ಷ ಕೋಟಿ ರು. ಮುಟ್ಟಿರುವುದು ಅಗ್ನಿಯ ರೌದ್ರತೆಗೆ ಸಾಕ್ಷಿ. ಸಾಕಷ್ಟು ವರ್ಷಗಳಿಂದ ಮಳೆಯಾಗದೆ ಗಿಡ-ಮರಗಳೆಲ್ಲ ಒಣಗಿದ್ದರಿಂದ ಬೆಂಕಿ ಹೊತ್ತಿಕೊಂಡು, ಬೀಸುಗಾಳಿಯಿಂದಾಗಿ ಜ್ವಾಲೆ ಕ್ಷಿಪ್ರವಾಗಿ ವ್ಯಾಪಿಸುತ್ತಿದೆ ಎನ್ನಲಾಗಿದೆ. ಈ ಬೆಂಕಿ ಹುಟ್ಟಿಕೊಂಡಿದ್ದಾದರೂ ಹೇಗೆ ಎಂಬುದರ ಕುರಿತು ತನಿಖೆಗೆ ಶುರುವಿಟ್ಟುಕೊಳ್ಳಲಾಗಿದೆ ಎಂಬುದು ಲಭ್ಯ ವರ್ತಮಾನ. ಅಮೆರಿಕ ಎಂದಾಕ್ಷಣ, ಅಭಿವೃದ್ಧಿಶೀಲ ದೇಶಗಳ ಜನರ ಮನದಲ್ಲಿ ಮೂಡುವುದು ಅದು 'ವಿಶ್ವದ ದೊಡ್ಡಣ್ಣ' ಎಂಬ ಭಾವ. ಎಲ್ಲ ತೆರನಾದ ಸಂಪನ್ಮೂಲಗಳು, ಸಾಧನ-ಸಲಕರಣೆಗಳಿಗೆ ಅಮೆರಿಕ ಮಡಿಲಾಗಿರುವುದರಿಂದ, ಎಂಥದೇ ವಿಪತ್ತನ್ನು ಅದು ಸಮರ್ಥವಾಗಿ ಎದುರಿಸಬಲ್ಲದು ಎಂಬುದು ಇಂಥ ಜನರ ಸರ್ವೇಸಾಮಾನ್ಯ ಗ್ರಹಿಕೆ. ಆದರೆ ಇದು ಎಲ್ಲ ಸಂದರ್ಭಗಳಲ್ಲೂ ಸತ್ಯವಾಗುವುದಿಲ್ಲ, ಅದರಲ್ಲೂ ಪ್ರಾಕೃತಿಕ ವಿಪತ್ತುಗಳ ರೌದ್ರತೆಯ ಮುಂದೆ ಎಂಥ ಬಲಿಷ್ಠರೂ ನಿಸ್ಸಹಾಯಕರಾಗಬೇಕಾಗುತ್ತದೆ ಎಂಬುದಕ್ಕೆ ಈ ದುರಂತ ಸಾಕ್ಷಿ. ಕಾಡ್ಗಿಚ್ಚು ನಂದಿಸುವ ಕಾರ್ಯ ಸಮರೋಪಾದಿಯಲ್ಲಿ ನಡೆಯುತ್ತಿದ್ದರೂ, ಅದಕ್ಕೆ ಅಗತ್ಯವಿರುವ ನೀರಿನ ಕೊರತೆ ಎದುರಾಗಿ ಈ ಕಾರ್ಯಾಚರಣೆಗೆ ಹಿನ್ನಡೆಯಾಗಿದ್ದು ಈ ಮಾತಿಗೆ ಪುಷ್ಟಿ ನೀಡುತ್ತದೆ. ಒಂದೆಡೆ ಜನರ ಮತ್ತು ಅವರ ಆಸ್ತಿಪಾಸ್ತಿಗಳ ಸಂರಕ್ಷಣೆಗೆ ಆಳುಗ ವ್ಯವಸ್ಥೆಯು ಹೆಣಗುತ್ತಿದ್ದರೆ, ಮತ್ತೊಂದೆಡೆ ಕಾಡ್ಗಿಚ್ಚಿನಿಂದಾಗಿ ಸ್ಥಳಾಂತರಗೊಳ್ಳಬೇಕಾದವರ ಮನೆಗೆ ಲೂಟಿಕೋರರು ನುಗ್ಗಿ ಕೈಗೆ ಸಿಕ್ಕಿದ್ದನ್ನು ದೋಚಿದ ಘಟನೆಯೂ ವರದಿಯಾಗಿದೆ. 'ಬೆಂದ ಮನೆಯಲ್ಲಿ ಗಳ ಹಿರಿಯುವವರು' ಎಂಬ ಜಾಣನುಡಿ ಹುಟ್ಟಿಕೊಂಡಿದ್ದು ಇಂಥವರನ್ನು ನೋಡಿಯೇ ಇರಬೇಕು. ಕೋವಿಡ್ ಸಮಯದಲ್ಲಿ ಏನೇನೋ ಖರೀದಿಯ ಹಣೆಪಟ್ಟಿಯಡಿ ಲೂಟಿ ನಡೆಸಿದ ಕಿಡಿಗೇಡಿಗಳಿಗೂ ಅನ್ವಯವಾಗುವ ಮಾತಿದು!

ಸೊಂಪಾದಕೀಯ

ಸಮಂತಾವಾದ

ನಮ್ಮ ದೇಶದಲ್ಲಿ ಜನ ಅತಿ ಹೆಚ್ಚು ಪ್ರೀತಿಸೋದು, ದೇವರ ಮಟ್ಟಕ್ಕೆ ಕೊಂಡೊಯ್ಯೋದು ಸಿನಿಮಾ ತಾರೆಗಳನ್ನ ಮತ್ತು ಕ್ರಿಕೆಟ್ ಆಟಗಾರರನ್ನ. ಅದರಲ್ಲೂ ದಕ್ಷಿಣ ಭಾರತದಲ್ಲಿ ಸಿನಿಮಾ ನಟ-ನಟಿಯರ ಮೇಲಿನ ಕ್ರೇಜ್ ತುಂಬಾ ದೊಡ್ಡದು. ಕರ್ನಾಟಕದಲ್ಲಿ ಡಾ. ರಾಜ್‌ಕುಮಾರ್ ಅವರ ಮೇಲೆ ಜನ ಇಟ್ಟಿರೋ ಪ್ರೀತಿ ಎಲ್ಲರಿಗೂ ಗೊತ್ತು. ಅದರಂತೆ ರಜನಿಕಾಂತ್, ಎನ್‌ಟಿಆರ್, ಎಂಜಿಆರ್‌ಗಳು ಕೂಡಾ ಜನರ ಪ್ರೀತಿಯ ಸಾಗರದಲ್ಲಿ ಮಿಂದೆದ್ದವರೇ. ಇಂಥ ಫೇಮಸ್ ಸ್ಟಾರ್‌ಗಳ ಹೆಸರಿನಲ್ಲಿ ಅನೇಕ ಒಳ್ಳೆಯ ಕೆಲಸಗಳೂ ಆಗುತ್ತವೆ. ಜತೆಗೆ ಇವರ ಹೆಸರುಗಳು ಮತ್ತು ಪ್ರತಿಮೆಗಳು ಆಯಾ ರಾಜ್ಯದ ವಿವಿಧೆಡೆ ರಾರಾಜಿಸುತ್ತವೆ. ಕರ್ನಾಟಕದಲ್ಲಿ ಅದೆಷ್ಟು ರಸ್ತೆಗಳಿಗೆ ರಾಜ್‌ಕುಮಾರ್ ಅವರ ಹೆಸರಿದೆ, ಅದೆಷ್ಟು ರಸ್ತೆ, ಸರ್ಕಲ್‌ಗಳಲ್ಲಿ ರಾಜ್ ಅವರ ಪ್ರತಿಮೆ ಇದೆ ಅಂತ ಕಂಡುಹಿಡಿಯೋಕೆ ಸೆನ್ಸಸ್ ಮಾಡಬೇಕಾಗಿ ಬರುತ್ತದೆ. ಆದರೆ ಅದ್ಯಾಕೆ ಹೀಗೆ ರಸ್ತೆಗಳಿಗೆ ಹೆಸರಿಡೋದು, ಪ್ರತಿಮೆ ಇಡೋದು ಇವೆಲ್ಲ ಪುರುಷ ನಟರಿಗೆ ಮಾತ್ರ ಆಗುತ್ತದೆ ಅನ್ನೋದು ಆಸಕ್ತಿಕರ. ಹೀರೋಯಿನ್‌ಗಳ ಹೆಸರು ರಸ್ತೆಗೆ ಇಟ್ಟಿದ್ದು, ಪ್ರತಿಮೆ ನಿರ್ಮಿಸಿರೋದು ತೀರಾ ಕಮ್ಮಿ. ಹಾಗಂತ ಸಿನಿಮಾಗಳಂತೆ ನಮ್ಮ ಸಮಾಜ ಕೂಡಾ ಪುರುಷ ಪ್ರಧಾನ ಅಂತ ತೀರ್ಮಾನ ಮಾಡೋ ಹಾಗಿಲ್ಲ. ಯಾಕಂದ್ರೆ, ಹೀರೋಯಿನ್‌ಗಳನ್ನು ನಮ್ಮ ಪ್ರೇಕ್ಷಕ ಪ್ರಭು ಆರಾಧಿಸಿದ ಎಷ್ಟೋ ಉದಾಹರಣೆಗಳಿವೆ. ಶ್ರೀದೇವಿ, ಮಾಧುರಿ ದೀಕ್ಷಿತ್, ನಮ್ಮ ಕನ್ನಡದ ಮಾಲಾಶ್ರೀ ಅವರು ಅನೇಕ ಪ್ರೇಕ್ಷಕರ ಕನಸಿನ ರಾಣಿಯರು. ಮಾಲಾಶ್ರೀ ಅವರಿಗೆ, ನಟಿ ಸೌಂದರ್ಯ ಅವರಿಗೆ ದೇವಸ್ಥಾನ ಕಟ್ಟಿಸುತ್ತೇವೆ ಅನ್ನೋ ಮಟ್ಟಕ್ಕೆ ಅವರ ಕ್ರೇಜ್ ಇತ್ತು. ಅದು ಈ ಕಾಲದ ಸನ್ನಿ ಲಿಯೋನಿವರೆಗೂ ಇದೆ. ಈಗ ಸದ್ಯಕ್ಕೆ ನಟಿ ಸಮಂತಾ ಅವರಿಗೆ ಅಭಿಮಾನಿಯೊಬ್ಬ ಆಂಧ್ರದಲ್ಲಿ ದೇವಸ್ಥಾನ ಕಟ್ಟಿಸಿದ್ದಾನಂತೆ. ಅಲ್ಲಿಗೆ ಸಿನಿ ಪ್ರೇಕ್ಷಕರ ಅಭಿಮಾನದಲ್ಲಿ ಕೊಂಚ ಮಟ್ಟಿಗಿನ ಲಿಂಗಭೇದ ಇದ್ದರೂ, ಹೀರೋಯಿನ್‌ಗಳನ್ನು ಕೊಂಚ ಕಡೆಗಣಿಸಿದರೂ, ಕೆಲವು ಅದೃಷ್ಟವಂತ ಹೀರೋಯಿನ್‌ಗಳಿಗಾದರೂ ದೇವಸ್ಥಾನ ಕಟ್ಟಿಸಿಕೊಳ್ಳುವ ಭಾಗ್ಯ ಇರುತ್ತದೆ ಅನ್ನೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಮಮಚಾರಿ ಅಂದ್ರೆ?

ಜಪಾನಿನಲ್ಲಿ 'ಮಮಚಾರಿ' ಪದವನ್ನು ಕೇಳದವರು ಯಾರೂ ಇರಲಿಕ್ಕಿಲ್ಲ. ಹಾಗಾದರೆ ಮಮಚಾರಿ ರಾಮಾಚಾರಿಗೆ ಏನಾಗಬೇಕು ಅಥವಾ ಇಬ್ಬರಿಗೂ ಏನಾದರೂ ಸಂಬಂಧ ಇದೆಯಾ ಎಂದು ಕೇಳಬೇಡಿ. ಅದು ಅತ್ಯಂತ ಸಾಮಾನ್ಯವಾದ ಮತ್ತು ಜನಪ್ರಿಯವಾದ, ಶ್ರೀಸಾಮಾನ್ಯರ ದಿನನಿತ್ಯದ ಸಾರಿಗೆ ಸಾಧನವಾದ ಸೈಕಲ್. ಹ್ಯಾಂಡಲ್‌ಗೆ ಬಾಸ್ಕೆಟ್ ಮತ್ತು ಬೆಲ್ ಇರುವ, ಸಾಮಾನ್ಯವಾಗಿ ಒಂದೇ ಗೇರ್ ಹೊಂದಿರುವ ಸರಳವಾದ ಸೈಕಲ್‌ಗೆ ಅಲ್ಲಿ ಮಮಚಾರಿ ಅಂತ ಕರೆಯುತ್ತಾರೆ. ಎರಡನೇ ಮಹಾಯುದ್ಧದ ನಂತರ ಸಾಮಾನ್ಯ ಜನರಿಗೆ ಕೈಗೆಟುಕುವ ಬೆಲೆಗೆ, ದಿನಸಿ ಸಾಮಾನುಗಳನ್ನು ತರಲು ಮತ್ತು ಮಕ್ಕಳನ್ನು ಸ್ಕೂಲಿಗೆ ಬಿಡಲು ಅಥವಾ ಸುತ್ತಾಡಿಸಲು ಕಾರ್ಯನಿರತ ತಾಯಂದಿರಿಗೆ ಅನುಕೂಲವಾಗಲಿ ಎಂದು ಈ ಬೈಸಿಕಲ್ ಅನ್ನು ತಯಾರಿಸಲಾಯಿತು. ತಗ್ಗಿದ ಹ್ಯಾಂಡಲ್ ಹಾಗೂ ಸಂತುಲಿತ ಕೇಂದ್ರ ಗುರುತ್ವಾಕರ್ಷಣೆಯು ಇದನ್ನು ಸುರಕ್ಷಿತ ಮತ್ತು ಸ್ಥಿರ ಸವಾರಿಗೆ ಹೇಳಿ ಮಾಡಿಸಿದ ಬೈಸಿಕಲ್ ಆಗಿಸಿದೆ. ಇದು ಕೇವಲ ಹತ್ತು ಸಾವಿರ ಯೆನ್‌ಗೆ ಲಭ್ಯವಿರುವುದರಿಂದ ಇದನ್ನು ಯಾರು ಬೇಕಾದರೂ ಹೊಂದಬಹುದಾಗಿದೆ. ಹಳೆ ಛತ್ರಿಯಂತೆ ಯಾರಾದರೂ ಇದನ್ನು ಎಲ್ಲಾದರೂ ಬಿಟ್ಟು ಹೋದರೂ ತಲೆಕೆಡಿಸಿಕೊಳ್ಳುವುದಿಲ್ಲ. ಮಮಚಾರಿ ಎಂಬ ಹೆಸರು ಜಪಾನಿ ಭಾಷೆಯ 'ಮಮಾ' (ತಾಯಿ) ಮತ್ತು 'ಚಾರಿ' (ಸೈಕಲ್) ಪದಗಳಿಂದ ಬಂದಿದೆ. ಇದನ್ನು ಸರಳವಾಗಿ 'ತಾಯಿಯಂದಿರ ಸೈಕಲ್' ಎಂದು ಹೇಳಬಹುದು. ಈ ಬೈಸಿಕಲ್‌ಗಳನ್ನು ವಿಶೇಷವಾಗಿ ಗೃಹಿಣಿಯರು ಮತ್ತು ತಾಯಿಯರು ತಮ್ಮ ದೈನಂದಿನ ಕೆಲಸಗಳನ್ನು ಸುಲಭವಾಗಿ ನಿರ್ವಹಿಸಲು ವಿನ್ಯಾಸಗೊಳಿಸಲಾಗಿದೆ. ಮಮಚಾರಿ ಸೈಕಲ್‌ಗಳು ಮುಂಭಾಗದಲ್ಲಿ ಸಾಮಾನ್ಯವಾಗಿ ಲೋಹದ ಅಥವಾ ಪ್ಲಾಸ್ಟಿಕ್‌ನ ಬಾಸ್ಕೆಟ್ ಹೊಂದಿರುತ್ತವೆ. ಈ ಬಾಸ್ಕೆಟ್ ದಿನನಿತ್ಯದ ಖರೀದಿ ಸಾಮಾನುಗಳು, ಪುಸ್ತಕಗಳು, ಸಣ್ಣಪುಟ್ಟ ವಸ್ತುಗಳನ್ನು ಸಾಗಿಸಲು ಸಹಾಯಕವಾಗಿದೆ. ಮಮಚಾರಿ ಬೈಸಿಕಲ್‌ಗಳು ಸಹಜ ಸೌಕರ್ಯದ ಜತೆಗೆ ಉತ್ತಮ ಸೀಟ್ ವ್ಯವಸ್ಥೆಯನ್ನು ಹೊಂದಿವೆ. ಮಗುವನ್ನು ಕುಳ್ಳಿರಿಸಲು ಅಥವಾ ಎರಡನೇ ಪ್ರಯಾಣಿಕ ಹಿಂಬದಿಯಲ್ಲಿ ಕುಳಿತುಕೊಳ್ಳಲು ಆಸನವನ್ನು ಕಲ್ಪಿಸಲಾಗಿದೆ. ಹೆಚ್ಚಿನ ಮಮಚಾರಿ ಬೈಸಿಕಲ್‌ಗಳಲ್ಲಿ ಗೇರ್ ಸಿಸ್ಟಮ್ ಇರುವುದಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಗೇರ್ ಆವೃತ್ತಿಗಳ ಬೈಸಿಕಲ್‌ಗಳು ಜನಪ್ರಿಯವಾಗಿವೆ. ಗೇರ್ ಇಲ್ಲದ ಕಾರಣದಿಂದ ಬೈಸಿಕಲ್ ಬಳಸುವವರು ಹೆಚ್ಚಿನ ನಿರ್ವಹಣೆಯ ಅಗತ್ಯವಿಲ್ಲದೇ ಸುಲಭವಾಗಿ ಚಲಿಸಬಹುದು. ದೊಡ್ಡ, ಬಲವಾದ ಚಕ್ರಗಳು ಮತ್ತು ನಿಲ್ಲಿಸಲು ಸರಳ ಲಾಕ್ ವ್ಯವಸ್ಥೆಯು ಮಮಚಾರಿ ಬೈಸಿಕಲ್‌ಗಳ ವಿಶೇಷ ಅಂಶವಾಗಿವೆ. ಇವು ಹಳೆಯ ರಸ್ತೆಗಳಲ್ಲಿಯೂ ಬಳಸಲು ಅನುಕೂಲಕರ. ಬೈಸಿಕಲ್‌ಗಳು ಸಾಮಾನ್ಯವಾಗಿ ಡೈನಾಮೋ ಲೈಟ್ ಅಥವಾ ಬ್ಯಾಟರಿ ಚಾಲಿತ ಬೆಳಕನ್ನು ಹೊಂದಿರುತ್ತವೆ. ಇದು ರಾತ್ರಿ ಪ್ರಯಾಣದ ವೇಳೆ ಸುರಕ್ಷಿತ. ತಾಯಿಯರು ತಮ್ಮ ಮಕ್ಕಳನ್ನು ಶಾಲೆಗೆ ಕರೆದೊಯ್ಯಲು ಈ ಬೈಸಿಕಲ್ ಅನ್ನು ಹೆಚ್ಚು ಬಳಸುತ್ತಾರೆ. ಹಿಂದೆ ಮತ್ತು ಮುಂದೆ ಮಕ್ಕಳನ್ನು ಸುರಕ್ಷಿತವಾಗಿ ಕುಳ್ಳಿರಿಸಿಕೊಂಡು ಹೋಗಬಹುದು. ಮೂರ್ನಾಲ್ಕು ಕಿ.ಮೀ. ದೂರ ಹೋಗಲು, ಆಫೀಸಿಗೆ ಹೋಗಲು ಮಮಚಾರಿ ಹೇಳಿಮಾಡಿಸಿದಂತಿದೆ. ಇದು ದುಬಾರಿ ಸಾರಿಗೆಗೆ ಪರ್ಯಾಯವಾಗಿದೆ. ಮಮಚಾರಿ ಬೈಸಿಕಲ್ ಪರಿಸರ ಸ್ನೇಹಿ. ಇದರಿಂದ ಮಾಲಿನ್ಯವಿಲ್ಲ. ಇಂಧನ ಬೇಕಿಲ್ಲ. ಇದು ದೇಹಾರೋಗ್ಯಕ್ಕೂ ಅನುಕೂಲ. ಇವುಗಳ ಬಳಕೆಯೂ ಮಿತವ್ಯಯಕಾರಿ. ನಿರ್ವಹಣಾ ವೆಚ್ಚ ಇಲ್ಲ. ಜಪಾನಿನಲ್ಲಿ ಪ್ರಾರಂಭವಾದ ಮಮಚಾರಿ ಈಗ ಜಗತ್ತಿನ ಅನೇಕ ಭಾಗಗಳಿಗೆ ವ್ಯಾಪಿಸಿದೆ. ತಂತ್ರಜ್ಞಾನವು ಬೆಳೆಯುವ ಜತೆಗೆ, ಮಮಚಾರಿ ಬೈಸಿಕಲ್‌ಗಳಲ್ಲಿಯೂ ಪರಿವರ್ತನೆ ಸಂಭವಿಸುತ್ತಿದೆ. ಈಗಾಗಲೇ ಇಲೆಕ್ಟ್ರಿಕ್ ಮಮಚಾರಿ ಬೈಸಿಕಲ್‌ಗಳು ಲಭ್ಯವಿದ್ದು, ಅವು ಹೆಚ್ಚಿನ ಸೌಲಭ್ಯಗಳನ್ನು ಒದಗಿಸುತ್ತಿವೆ. ನಿರ್ಗಮಿಸುತ್ತಿರುವ ಇಂಧನ ವಾಹನಗಳಿಗೆ ಪರ್ಯಾಯವಾಗಿ ಈ ಬೈಸಿಕಲ್‌ಗಳು ಭವಿಷ್ಯದಲ್ಲಿ ಪ್ರಮುಖ ಪಾತ್ರ ವಹಿಸಬಹುದು. ಈ ಬೈಸಿಕಲ್‌ಗಳು ಜಪಾನಿನ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿ ಕುಟುಂಬಕ್ಕೆ ಸರಳ, ಸುರಕ್ಷಿತ ಮತ್ತು ಪರಿಸರ ಸ್ನೇಹಿ ಸಾರಿಗೆಯನ್ನು ನೀಡುವಲ್ಲಿ ಮಹತ್ವದ ಪಾತ್ರವಹಿಸುತ್ತಿರುವುದು ಗಮನಾರ್ಹ.

ಸೋನಿಯಾ ಹೆಗಲಿಗೆ ಡಿಕೆಶಿ ಗಂಟು

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಕಳೆದ ವಾರ ರಾಜ್ಯ ಕಾಂಗ್ರೆಸ್‌ನ ಹಿರಿಯ ನಾಯಕರ ಪಡೆಯು ಸದಾಶಿವನಗರದ ನಿವಾಸದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿದೆ. ಪಕ್ಷದಲ್ಲಿ ಭುಗಿಲೆದ್ದಿರುವ ಬಣ ಸಂಘರ್ಷದ ಬಗ್ಗೆ ಈ ಸಂದರ್ಭದಲ್ಲಿ ಅದು ಆತಂಕ ವ್ಯಕ್ತಪಡಿಸಿದೆ. ಅಂದ ಹಾಗೆ, ವಿ.ಎಸ್.ಉಗ್ರಪ್ಪ, ಎಚ್.ಎಂ.ರೇವಣ್ಣ, ಡಾ.ಎಲ್. ಹನುಮಂತಯ್ಯ, ಪ್ರಕಾಶ್ ರಾಥೋಡ್, ಕೊಂಡಜ್ಜಿ ಮೋಹನ್ ಸೇರಿದಂತೆ ರಾಜ್ಯ ಕಾಂಗ್ರೆಸ್‌ನ ಹಲ ಹಿರಿಯರು ಸೇರಿ ಒಂದು 'ವಾರ್‌ಗ್ರೂಪ್' ರಚಿಸಿಕೊಂಡಿದ್ದಾರೆ. ಪಕ್ಷದಲ್ಲಿ ಯಾವುದೇ ಬಿಕ್ಕಟ್ಟು ಉದ್ಭವಿಸಿದರೂ ತಕ್ಷಣ ಅದಕ್ಕೆ ಬ್ರೇಕ್ ಹಾಕುವ ಕೆಲಸ ಮಾಡುವುದು ಈ ವಾರ್‌ಗ್ರೂಪಿನ ಉದ್ದೇಶ.

ಹೀಗೆ ಪಕ್ಷದಲ್ಲಿ ಕಾಣಿಸಿಕೊಳ್ಳುವ ಬಿಕ್ಕಟ್ಟುಗಳ ಬಗ್ಗೆ ಬೆಂಗಳೂರಿನ ಕುಮಾರಕೃಪಾ ಅತಿಥಿಗೃಹದಲ್ಲಿ ಕಾಲಕಾಲಕ್ಕೆ ಸಭೆ ಸೇರಿ ಚರ್ಚಿಸುವ ಈ ವಾರ್‌ಗ್ರೂಪು ಮೊನ್ನೆ ಕೂಡಾ ಫೀಲ್ಡಿಗಿಳಿದಿದೆ. ಸಿಎಂ ಹುದ್ದೆಯ ಅಧಿಕಾರ ಹಂಚಿಕೆಗೆ ಸಂಬಂಧಿಸಿದ ಮಾತು ಇನ್ನೂ ಬೂದಿ ಮುಚ್ಚಿದ ಕೆಂಡದಂತಿರುವಾಗಲೇ ರಾಜ್ಯ ಕಾಂಗ್ರೆಸ್‌ನಲ್ಲಿ ಶುರುವಾಗಿರುವ ಬಣ ಸಂಘರ್ಷ ಈ ವಾರ್‌ಗ್ರೂಪಿನ ಆತಂಕಕ್ಕೆ ಕಾರಣ. ಹೀಗಾಗಿಯೇ ಡಿ.ಕೆ.ಶಿವಕುಮಾರ್ ಅವರ ನಿವಾಸಕ್ಕೆ ಹೋದ ವಾರ್‌ಗ್ರೂಪಿನ ಈ ಸದಸ್ಯರು ಬಣ ಸಂಘರ್ಷದ ಬಗ್ಗೆ ಸಹಜವಾಗಿಯೇ ಆತಂಕ ವ್ಯಕ್ತಪಡಿಸಿದ್ದಾರೆ.

ಅದಕ್ಕೆ ಪ್ರತಿಕ್ರಿಯಿಸಿದ ಶಿವಕುಮಾರ್, 40 ನಿಮಿಷಕ್ಕೂ ಹೆಚ್ಚು ಕಾಲ ತಮ್ಮ ಮನದಿಂಗಿತವನ್ನು ತೋಡಿಕೊಂಡರಂತೆ. ''ನೋಡ್ರೀ, ಪಕ್ಷದ ರಾಜ್ಯಾಧ್ಯಕ್ಷನಾಗಿ ಬಣ ರಾಜಕೀಯದ ಬಗ್ಗೆ ನಾನೇ ಮಾತನಾಡಿದರೆ ಏನು ಮೆಸೇಜು ಹೋಗುತ್ತದೆ? ಹೀಗಾಗಿ ಯಾರ್ಯಾರು ಡಿನ್ನರ್ ಮೀಟಿಂಗು ಮಾಡುತ್ತಾರೆ? ಏನು ಚರ್ಚಿಸುತ್ತಾರೆ? ಅನ್ನುವುದರ ಬಗ್ಗೆ ನಾನು ಮಾತನಾಡುವುದೇನಿಲ್ಲ, ಅದನ್ನು ವರಿಷ್ಠರು ನೋಡಿಕೊಳ್ಳುತ್ತಾರೆ. ಆದರೆ ನನ್ನ ಕೆಲಸ ಏನು, ಪಕ್ಷಕಟ್ಟುವುದು ತಾನೇ? ಈ ಹಿಂದೆ ನಾನು ತಿಹಾರ್ ಜೈಲು ಸೇರಿದೆ. ಯಾವ ಕಾರಣಕ್ಕಾಗಿ ನಾನು ಜೈಲು ಸೇರಬೇಕಾಯಿತು ಅನ್ನುವುದು ಮೇಡಂ ಸೋನಿಯಾ ಗಾಂಧಿಯವರಿಗೆ, ರಾಹುಲ್ ಗಾಂಧಿ ಅವರಿಗೆ ಗೊತ್ತು. ಹೀಗಾಗಿ ಅವತ್ತು ನನ್ನನ್ನು ನೋಡಲು ತಿಹಾರ್ ಜೈಲಿಗೆ ಬಂದ ಸೋನಿಯಾ ಗಾಂಧಿಯವರು, 'ಇರಲಿ ಇವೆಲ್ಲ ನಡೆಯುತ್ತದೆ. ನೀವು ಕರ್ನಾಟಕಕ್ಕೆ ಹೋಗಿ ಪಕ್ಷ ಕಟ್ಟಿ. 2023ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತನ್ನಿ. ಮುಂದಿನದನ್ನು ನಮಗೆ ಬಿಡಿ' ಅಂತ ಸೂಚನೆ ಕೊಟ್ಟರು. ಅದನ್ನೇ ನಾನು ಪಾಲಿಸಿದ್ದೇನೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲು ನಾನೇನು ಮಾಡಿದ್ದೇನೆ ಅಂತ ವರಿಷ್ಠರಿಗೆ ಗೊತ್ತು. ಚುನಾವಣೆಯಲ್ಲಿ ಪಕ್ಷವನ್ನು ಗೆಲ್ಲಿಸುವುದು ಎಂದರೆ ಸಣ್ಣ ಮಾತಲ್ಲ, ಅದಕ್ಕೆ ತಂತ್ರಗಾರಿಕೆ ಬೇಕು. ಚುನಾವಣಾ ರಣಾಂಗಣದಲ್ಲಿ ಹೋರಾಡುವ ಯೋಧರಿಗೆ ದೊಡ್ಡ ಮಟ್ಟದಲ್ಲಿ ಶಸ್ತ್ರಾಸ್ತ್ರ ಪೂರೈಸಬೇಕು. ಇದನ್ನೆಲ್ಲ ಮಾಡದೆ ಯುದ್ಧ ಗೆಲ್ಲಲು ಸಾಧ್ಯವಿಲ್ಲವಲ್ಲ? ಮೇಡಂ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಯವರಿಗೆ ಇದೆಲ್ಲ ಗೊತ್ತು. ಆದ್ದರಿಂದ, ಮುಂದೇನು ಮಾಡಬೇಕು ಅಂತ ಅವರೇ ತೀರ್ಮಾನ ತೆಗೆದುಕೊಳ್ಳುತ್ತಾರೆ. ಹೀಗಾಗಿ ರಾಜ್ಯದಲ್ಲಿ ಬಣ ರಾಜಕೀಯ ಶುರುವಾದರೆ ನಾನೇನು ಹೇಳಲಿ. ವರಿಷ್ಠರು ನನಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಕೊಟ್ಟು ಪಕ್ಷ ಕಟ್ಟಲು ಹೇಳಿದ್ದಾರೆ. ಅದರ ಪ್ರಕಾರ ಪಕ್ಷ ಕಟ್ಟುವುದು ನನ್ನ ಕೆಲಸ. ಕೆಪಿಸಿಸಿ ಅಧ್ಯಕ್ಷನಾದ ಮೇಲೆ ರಾಜ್ಯದ 75 ಕಡೆ ಪಕ್ಷಕ್ಕೆ ಸ್ವಂತ ಕಚೇರಿಗಳು ತಲೆ ಎತ್ತಿವೆ. ಮುಂದಿನ ದಿನಗಳಲ್ಲಿ ಇದು ನೂರರ ಗಡಿ ದಾಟುವಂತೆ ಮಾಡುವುದು ನನ್ನಾಸೆ. 'ಬೇಡ, ಇನ್ನು ನಿಮ್ಮ ಕೆಲಸ ಸಾಕು' ಅಂತ ಪಕ್ಷದ ವರಿಷ್ಠರು ಹೇಳಿದರೆ ಅದನ್ನು ಗೌರವಿಸುತ್ತೇನೆ. ಅದೇ ರೀತಿ ನನಗೆ ಕೊಟ್ಟಿರುವ ಡಿಸಿಎಂ ಹುದ್ದೆಯಿಂದ ಕೆಳಗಿಳಿಯಲು ಹೇಳಿದರೆ ಇಳಿಯುತ್ತೇನೆ. ಫೈನಲಿ ನನ್ನ ಕೆಲಸ ಏನು? ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ದುಡಿಯುವುದಷ್ಟೇ. ಹೀಗಾಗಿ ನಾನು ಮುಂದೇನಾಗಬೇಕೋ ಅದನ್ನು ಪಕ್ಷ ನಿರ್ಧರಿಸುತ್ತದೆ. ಅಂದ ಹಾಗೆ, ಈ ಕ್ಷಣಕ್ಕೂ ಹೇಳುತ್ತೇನೆ. ನನಗೆ ಯಾವ ಶಾಸಕರ ಬೆಂಬಲವೂ ಬೇಕಿಲ್ಲ. ಗುಂಪುಗಾರಿಕೆಯ ಅಗತ್ಯವೂ ಇಲ್ಲ, ಪಕ್ಷವೇ ಎಲ್ಲ ಅಂದ ಮೇಲೆ ಈ ಬಣ ರಾಜಕಾರಣದ ಬಗ್ಗೆ ಹೇಳಲು ನನಗೇನೂ ಇಲ್ಲ'' ಅಂತ ಡಿಕೆಶಿ ವಿವರಿಸಿದ್ದಾರೆ. ಹೀಗೆ ತಮ್ಮನ್ನು ಭೇಟಿ ಮಾಡಿದ ವಾರ್‌ಗ್ರೂಪಿಗೆ ಹೇಳಿದ್ದನ್ನೇ ಮರುದಿನ ಶೃಂಗೇರಿ ಪ್ರವಾಸದ ಸಂದರ್ಭದಲ್ಲಿ ಸೂಚ್ಯವಾಗಿ ಹೇಳಿದ ಶಿವಕುಮಾರ್, ಅಧಿಕಾರ ಹಸ್ತಾಂತರ ಪ್ರಕ್ರಿಯೆಯ ಜವಾಬ್ದಾರಿಯನ್ನು ಹೈಕಮಾಂಡ್ ಹೆಗಲ ಮೇಲೆ ಹೊರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅರ್ಥಾತ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ನಿರ್ದಿಷ್ಟ ಕಾಲದ ನಂತರ ಕೆಳಗಿಳಿಸಿ, ತಮಗೆ ಪಟ್ಟ ಕಟ್ಟುವ ರಿಸ್ಕನ್ನು ವರಿಷ್ಠರಿಗೆ ಬಿಟ್ಟಿದ್ದಾರೆ. ಸದ್ಯದ ಸ್ಥಿತಿಯಲ್ಲಿ ಶಿವಕುಮಾರ್ ಅವರ ಈ ನಡೆ ಕುಶಲ ತಂತ್ರಗಾರಿಕೆ ಎಂದರೆ ಅಸಹಜವೇನಲ್ಲ.

ಇತಿಹಾಸ ಮರುಕಳಿಸಿದರೆ ಡಿಕೆಶಿಗೆ ಪಟ್ಟ

ಅಂದ ಹಾಗೆ, ಅಧಿಕಾರ ಹಂಚಿಕೆಯ ಜವಾಬ್ದಾರಿಯನ್ನು ವರಿಷ್ಠರ ಹೆಗಲಿಗೆ ಹಾಕಿರುವ ಡಿಕೆಶಿ ನಡೆ, ಇತಿಹಾಸದ ಆ ಎರಡು ಘಟನೆಗಳನ್ನು ನೆನಪಿಸುತ್ತಿದೆ. ಮೊದಲನೆಯ ಘಟನೆ ನಡೆದಿದ್ದು 1990ರಲ್ಲಿ. ಆ ಸಂದರ್ಭದಲ್ಲಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲರನ್ನು ಪದಚ್ಯುತಗೊಳಿಸಿದ ಕಾಂಗ್ರೆಸ್ ಹೈಕಮಾಂಡ್ ಪರ್ಯಾಯ ನಾಯಕನ ಆಯ್ಕೆಗೆ ಮುಂದಾಗಿತ್ತು. ಈ ಸಂದರ್ಭದಲ್ಲಿ ನಾಯಕನ ಆಯ್ಕೆಗೆ ಶಾಸಕಾಂಗ ಸಭೆಯಲ್ಲಿ ಚುನಾವಣೆ ನಡೆದಿದ್ದರೆ ನಿಸ್ಸಂಶಯವಾಗಿ ಹಿರಿಯ ನಾಯಕ, 'ಹುಲಕೋಟಿಯ ಹುಲಿ' ಕೆ.ಎಚ್.ಪಾಟೀಲರು ಆಯ್ಕೆಯಾಗುತ್ತಿದ್ದರು. ಯಾವಾಗ ಈ ವಿಷಯ ಸ್ಪಷ್ಟವಾಯಿತೋ, ಆಗ ದಿಲ್ಲಿಯ ಕಾಂಗ್ರೆಸ್ ಥಿಂಕ್‌ಟ್ಯಾಂಕಿನ ಪ್ರಮುಖರು ಚಿಂತೆಗೊಳಗಾದರು. ಕಾರಣ? ಕೇಂದ್ರದಲ್ಲಿ ಅಧಿಕಾರ ಕಳೆದುಕೊಂಡಿದ್ದ ಕಾಂಗ್ರೆಸ್ ಪಕ್ಷಕ್ಕೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪಾರ್ಟಿಫಂಡು ತರಬಲ್ಲವರು ಬೇಕಾಗಿದ್ದರು. ಹೀಗಾಗಿ ಕರ್ನಾಟಕದಲ್ಲಿ ಕೆ.ಎಚ್.ಪಾಟೀಲರ ಬದಲು ಎಸ್.ಬಂಗಾರಪ್ಪ ಅವರು ಮುಖ್ಯಮಂತ್ರಿಯಾಗಬೇಕು ಎಂಬುದು ಅವರ ಲೆಕ್ಕಾಚಾರವಾಗಿತ್ತು. ಆದ್ದರಿಂದಲೇ ರಾಜೀವ್ ಗಾಂಧಿಯವರಿಗೆ ಈ ವಿಷಯ ತಿಳಿಸಿದ ಥಿಂಕ್‌ಟ್ಯಾಂಕ್ ಪ್ರಮುಖರು, ಈ ವಿಷಯದಲ್ಲಿ ಪಾಟೀಲರ ಮನವೊಲಿಸುವ ಜವಾಬ್ದಾರಿಯನ್ನು ಅವರಿಗೇ ಬಿಟ್ಟರು.

ಹೀಗಾಗಿ, ಖುದ್ದಾಗಿ ಕೆ.ಎಚ್.ಪಾಟೀಲರಿಗೆ ಫೋನು ಮಾಡಿದ ರಾಜೀವ್ ಗಾಂಧಿ ಅವರು, ''ಪಾಟೀಲ್ ಜೀ, ನಿಮ್ಮಿಂದ ನನಗೊಂದು ಸಹಾಯವಾಗಬೇಕು. ನೀವು ನಮ್ಮ ತಾಯಿಯವರ ಕಾಲದಿಂದಲೂ ಪಕ್ಷದ ನಿಷ್ಠಾವಂತರು. ನಮ್ಮ ತಾಯಿಯವರೂ ಇದನ್ನು ಜ್ಞಾಪಿಸಿಕೊಳ್ಳುತ್ತಿದ್ದರು. ಹೀಗಾಗಿ ಈ ಸಂದರ್ಭದಲ್ಲಿ ನಿಮ್ಮಿಂದ ಒಂದು ಸಹಕಾರ ಕೋರುತ್ತಿದ್ದೇನೆ' ಎಂದರು. ಈ ಮಾತಿಗೆ ಪಾಟೀಲರು, ''ಸರ್, ನೀವು ನಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು. ನೀವು ನನ್ನ ಬಳಿ ಕೋರಿಕೊಳ್ಳಬೇಕಿಲ್ಲ, ಆದೇಶ ನೀಡಿ ಸಾಕು. ನಾನದನ್ನು ಪಾಲಿಸುತ್ತೇನೆ'' ಎಂದರು. ಅದಕ್ಕುತ್ತರಿಸಿದ ರಾಜೀವ್ ಗಾಂಧಿಯವರು, ''ಕೆಲ ಉದ್ದೇಶಗಳಿಂದಾಗಿ ನಾವು ಕರ್ನಾಟಕದಲ್ಲಿ ಎಸ್.ಬಂಗಾರಪ್ಪ ಅವರನ್ನು ಮುಖ್ಯಮಂತ್ರಿ ಮಾಡಲು ನಿರ್ಧರಿಸಿದ್ದೇವೆ. ನೀವು ಸಹಕರಿಸಬೇಕು'' ಎಂದರು. ಈ ಮಾತಿಗೆ ಪಾಟೀಲರು ತಲೆಬಾಗಿದ್ದಷ್ಟೇ ಅಲ್ಲ, ಶಾಸಕಾಂಗ ಸಭೆಯಲ್ಲಿ ತಾವೇ ಮುಂದಾಗಿ ನಿಂತು ಬಂಗಾರಪ್ಪ ಅವರ ಆಯ್ಕೆಗೆ ದಾರಿ ಮಾಡಿಕೊಟ್ಟರು.

ಇದಾದ ನಂತರದ ಮತ್ತೊಂದು ಘಟನೆ 1992ರಲ್ಲಿ ನಡೆಯಿತು. ಆ ಸಂದರ್ಭದಲ್ಲಿ ಮುಖ್ಯಮಂತ್ರಿ ಹುದ್ದೆಯಿಂದ ಬಂಗಾರಪ್ಪ ಪದಚ್ಯುತರಾಗಿ ಪರ್ಯಾಯ ನಾಯಕನ ಆಯ್ಕೆಗೆ ಕಸರತ್ತು ಆರಂಭವಾಗಿತ್ತು. ಅವತ್ತು ಈ ಆಯ್ಕೆಗೆ ಶಾಸಕಾಂಗ ಸಭೆಯಲ್ಲಿ ಚುನಾವಣೆ ನಡೆದಿದ್ದರೆ ಒಕ್ಕಲಿಗ ಸಮುದಾಯದ ನಾಯಕ ಎಸ್.ಎಂ.ಕೃಷ್ಣ ಆಯ್ಕೆಯಾಗುವುದು ನಿಶ್ಚಿತವಾಗಿತ್ತು. ಆದರೆ ಯಾವಾಗ ಇದು ಸ್ಪಷ್ಟವಾಯಿತೋ, ಕೇರಳದ ಕಾಂಗ್ರೆಸ್ ನಾಯಕ ಕೆ. ಕರುಣಾಕರನ್ ಮತ್ತು ತಮಿಳುನಾಡಿನ ಮರಗತಂ ಚಂದ್ರಶೇಖರ್ ಅವರು ವೀರಪ್ಪ ಮೊಯ್ಲಿ ಅವರ ಪರವಾಗಿ ಫೀಲ್ಡಿಗಿಳಿದರು ಮತ್ತು ದೇವಮಾನವ ಚಂದ್ರಾಸ್ವಾಮಿಯವರ ನೆರವು ಪಡೆದು ಪ್ರಧಾನಿ ಪಿ.ವಿ.ನರಸಿಂಹರಾಯರ ಮೇಲೆ ಒತ್ತಡ ಹೇರಿದರು. 'ಎಷ್ಟೇ ಆದರೂ ಈಗ ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿದ ಬಂಗಾರಪ್ಪ ಅವರು ಹಿಂದುಳಿದ ವರ್ಗದಿಂದ ಬಂದವರು. ಹೀಗಾಗಿ ಅವರ ಜಾಗಕ್ಕೆ ಹಿಂದುಳಿದ ವರ್ಗದವರೇ ಆದ ವೀರಪ್ಪ ಮೊಯ್ಲಿಯವರನ್ನು ತಂದು ಕೂರಿಸುವುದು ಬೆಟರ್ರು' ಎಂಬ ಮಾತು ಯಾವಾಗ ನರಸಿಂಹರಾಯರ ಕಿವಿಗೆ ಬಿತ್ತೋ, ಆಗ ಅವರೂ ಹೆಚ್ಚು ಮಾತನಾಡದೆ ಮೊಯ್ಲಿ ಹೆಸರಿಗೆ ಗ್ರೀನ್ ಸಿಗ್ನಲ್ ಕೊಟ್ಟರು. ಇವತ್ತೂ ಅಷ್ಟೇ. ಇತಿಹಾಸದ ಈ ಘಟನೆಗಳು ಮರುಕಳಿಸಿದರೆ ಡಿಕೆಶಿ ಪಟ್ಟಾಭಿಷೇಕ ಅಸಂಭವವೇನಲ್ಲ.

ಕೆಳಗಿಳಿಯಲು ಸಿದ್ದು ಒಪ್ಪುತ್ತಾರಾ?

ಒಂದು ವೇಳೆ, ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಒಪ್ಪಂದವಾಗಿದ್ದರೆ ಕಾಂಗ್ರೆಸ್ ವರಿಷ್ಠರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇದೇ ರೀತಿ ಸೂಚನೆ ಕೊಡಬೇಕು. ಒಂದೊಮ್ಮೆ ಒಪ್ಪಂದ ಆಗದೆ ಇದ್ದರೂ ಪರ್ಯಾಯ ನಾಯಕನ ಆಯ್ಕೆಗೆ ಅದು ಮನಸ್ಸು ಮಾಡಿದರೆ ಹೀಗೆಯೇ ಸೂಚನೆ ನೀಡಿ ''ಸಹಕಾರ ಕೊಡಿ'' ಅನ್ನಬೇಕು. ಆದರೆ ಸದ್ಯದ ಸ್ಥಿತಿಯಲ್ಲಿ ಕಾಂಗ್ರೆಸ್ ವರಿಷ್ಠರು ಅಧಿಕಾರ ತ್ಯಾಗಕ್ಕೆ ಸೂಚನೆ ನೀಡಿದರೆ ಅದನ್ನು ಸಿದ್ದರಾಮಯ್ಯ ಒಪ್ಪುವುದು ಅನುಮಾನ.

ಇದೇ ರೀತಿ, ಅಧಿಕಾರ ಹಂಚಿಕೆ ಒಪ್ಪಂದದ ಹೆಸರಿನಲ್ಲಿ ಇಲ್ಲವೇ ತಮ್ಮ ತೀರ್ಮಾನದ ಹಿನ್ನೆಲೆಯಲ್ಲಿ ಅಧಿಕಾರ ತ್ಯಾಗ ಮಾಡುವಂತೆ ವರಿಷ್ಠರು ಸಿದ್ದರಾಮಯ್ಯ ಅವರಿಗೆ ಸೂಚನೆ ನೀಡಲು ತುಂಬ ಯೋಚಿಸುತ್ತಾರೆ ಎಂಬುದೂ ಅಸಹಜವಲ್ಲ, ಯಾಕೆಂದರೆ ಜನನಾಯಕರಾಗಿ ಬೆಳೆದು ನಿಂತಿರುವ ಸಿದ್ದರಾಮಯ್ಯ ಅವರಿಗೆ ಅಹಿಂದ ವರ್ಗಗಳ ಸಾಲಿಡ್ಡು ಬೆಂಬಲವಿದೆ. ಹೀಗಾಗಿ ಒಬ್ಬ ಜನನಾಯಕನನ್ನು ಕೆಳಗಿಳಿಸುವ ನಿರ್ಧಾರ ತೆಗೆದುಕೊಳ್ಳುವುದು ಎಷ್ಟು ಕಷ್ಟ ಅಂತ ವರಿಷ್ಠರಿಗೂ ಗೊತ್ತು.

1980ರಲ್ಲಿ ದೇವರಾಜ ಅರಸರನ್ನು ಮುಖ್ಯಮಂತ್ರಿ ಹುದ್ದೆಯಿಂದ ಬಲವಂತವಾಗಿ ಕೆಳಗಿಳಿಸಿದ ಕಾಂಗ್ರೆಸ್ 1983ರಲ್ಲಿ ಮೊದಲ ಬಾರಿ ಅಧಿಕಾರ ಕಳೆದುಕೊಂಡಿತು. 1992ರಲ್ಲಿ ಬಂಗಾರಪ್ಪ ಅವರನ್ನು ಬಲವಂತವಾಗಿ ಕೆಳಗಿಳಿಸಿದ ಕಾರಣಕ್ಕಾಗಿ 1994ರ ಚುನಾವಣೆಯಲ್ಲಿ ಹೀನಾಯ ಸೋಲು ಅನುಭವಿಸಿತು. ಈಗ ಸಿದ್ದರಾಮಯ್ಯ ಅವರ ವಿಷಯದಲ್ಲೂ ಅಷ್ಟೇ. ಅವರನ್ನು ಬಲವಂತವಾಗಿ ಇಳಿಸಲು ಪ್ರಯತ್ನಿಸಿದರೆ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಬೋರಲು ಮಲಗುವುದು ಗ್ಯಾರಂಟಿ. ಅದಕ್ಕಿಂತ ದೊಡ್ಡ ಸಮಸ್ಯೆ ಎಂದರೆ ಅಸ್ತಿತ್ವದಲ್ಲಿರುವ ಹಾಲಿ ಸರಕಾರವೇ ಉರುಳುವಂಥ ಸನ್ನಿವೇಶ ಸೃಷ್ಟಿಯಾಗಬಹುದು. 'ಇಲ್ಲ, ಶಾಸಕಾಂಗ ಪಕ್ಷದ ಬಲವನ್ನು ಬಳಸಿ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸೋಣ' ಎಂದರೆ ಅದು ಕೂಡಾ 'ಬೂಮರಾಂಗ್' ಆಗುವ ಸಾಧ್ಯತೆ ಜಾಸ್ತಿ. ಯಾಕೆಂದರೆ ರಾಜ್ಯದ 130ರಿಂದ 150 ಕ್ಷೇತ್ರಗಳಲ್ಲಿ ಕುರುಬ ಮತದಾರರ ಸಂಖ್ಯೆ ಗಣನೀಯವಾಗಿದೆ. ಈ ಕ್ಷೇತ್ರಗಳಲ್ಲಿ ಹತ್ತು ಸಾವಿರದಿಂದ ನಲವತ್ತು ಸಾವಿರದಷ್ಟಿರುವ ಕುರುಬ ಮತದಾರರನ್ನು ನಿರ್ಲಕ್ಷಿಸಿ ಕಾಂಗ್ರೆಸ್ ಶಾಸಕರು ಬಹಿರಂಗವಾಗಿ ಡಿಕೆಶಿ ಬೆಂಬಲಕ್ಕೆ ನಿಲ್ಲುವ ಸಾಧ್ಯತೆ ಕಡಿಮೆ. ಹೀಗಾಗಿ ಸನ್ನಿವೇಶವನ್ನು ಆಳವಾಗಿ ಗಮನಿಸಿರುವ ಡಿಕೆಶಿ, ಬಣ ರಾಜಕೀಯದ ಗೊಡವೆಗೆ ಹೋಗದೆ ಅಧಿಕಾರ ಹಸ್ತಾಂತರದ ಜವಾಬ್ದಾರಿಯನ್ನು ಸೋನಿಯಾ ಗಾಂಧಿಯವರ ಹೆಗಲಿಗೆ ವರ್ಗಾಯಿಸಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಅದು ಜಾಣ ನಡೆಯೂ ಹೌದು.

ಕೃತಕ ಬುದ್ಧಿಮತ್ತೆ ಬಳಕೆ ಅಗತ್ಯ

ಗ್ರಾಮೀಣ ಪ್ರದೇಶಗಳಲ್ಲಿ, ಕೃತಕ ಬುದ್ಧಿಮತ್ತೆಯ ಉಪಕರಣಗಳಿಂದ ವಿದ್ಯಾರ್ಥಿಗಳಿಗೆ, ಅವರ ಗ್ರಹಣ ಸಾಮರ್ಥ್ಯವನ್ನು ಅನುಸರಿಸಿ, ಕಲಿಕೆಗೆ ಅನೇಕ ಅವಕಾಶಗಳನ್ನು ಕಲ್ಪಿಸಬಹುದಾಗಿದೆ. ಇದು ಅವರಿಗೆ ವೈಯಕ್ತಿಕ ಕಲಿಕೆಯ ಪರಿಣಾಮಕಾರಿ ಅನುಭವಗಳನ್ನು ಖಂಡಿತ ಒದಗಿಸಬಲ್ಲದು.

ಅನಿಸಿಕೆ

ಡಾ. ಪ್ರಭು ಬಸರಕೋಡ
vveditoped@gmail.com

ನಮ್ಮ ರಾಜ್ಯ ಸೇರಿದಂತೆ, ಭಾರತದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಶೈಕ್ಷಣಿಕ ವ್ಯವಸ್ಥೆಗಳ ನಡುವೆ ಅಗಾಧ ಅಂತರವಿರುವುದು ನಾವೆಲ್ಲರೂ ಒಪ್ಪಿಕೊಳ್ಳಬೇಕಾದ ಸಂಗತಿಯಾಗಿದೆ. ಗ್ರಾಮೀಣರ ಶಿಕ್ಷಣ ಪ್ರಗತಿಗೆ ಸರಕಾರವು ನಿರಂತರವಾಗಿ ಹತ್ತು ಹಲವು ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಿದೆಯಾದರೂ, ನಿರೀಕ್ಷಿತ ಪ್ರಮಾಣದಲ್ಲಿ ಸಾಧನೆಯಾಗದೆ ಯಶಸ್ಸು ಮರೀಚಿಕೆಯೇ ಆಗಿಬಿಟ್ಟಿದೆ. ಭೌತಿಕ ಸೌಲಭ್ಯಗಳ ಕೊರತೆಯ ಜತೆಜತೆಗೆ ಪಾಲಕರ ಆರ್ಥಿಕ ಪರಿಸ್ಥಿತಿ ಮತ್ತು ಅವರ ಶೈಕ್ಷಣಿಕ ಸ್ಥಿತಿಗತಿ ನಿರೀಕ್ಷಿತ ಮಟ್ಟದಲ್ಲಿ ಇಲ್ಲದಿರುವುದು, ಪ್ರಸಕ್ತ ಕಾಲಘಟ್ಟದ ಸ್ಪರ್ಧಾತ್ಮಕತೆ ಹಾಗೂ ಶೈಕ್ಷಣಿಕ ಮಹತ್ವದ ಕುರಿತಾದ ಜಾಗೃತಿ ಇಲ್ಲದಿರುವುದು, ವಿದ್ಯಾರ್ಥಿಗಳು ಮತ್ತು ಶಿಕ್ಷಕರ ನಡುವಿನ ಅನುಪಾತದಲ್ಲಿನ ಅಗಾಧ ಅಂತರ, ಆಕರ್ಷಕ ಶೈಕ್ಷಣಿಕ ವಾತಾವರಣವಿಲ್ಲದಿರುವುದು, ತಂತ್ರಜ್ಞಾನದ ಬಳಕೆಯಲ್ಲಿ ಶಿಕ್ಷಕರಿಗೆ ಅಗತ್ಯ ಜ್ಞಾನದ ಕೊರತೆ- ಇವು ಗ್ರಾಮೀಣ ಪ್ರದೇಶದ ಶಿಕ್ಷಣ ಸಂಸ್ಥೆಗಳಲ್ಲಿ ನಿರಂತರವಾಗಿ ಕಾಣಬರುತ್ತಿರುವ ವಾಸ್ತವಿಕ ಸ್ಥಿತಿಗತಿಗಳಾಗಿವೆ.

ಕರ್ನಾಟಕ ರಾಜ್ಯದ ಶಿಕ್ಷಣ ಇಲಾಖೆಯ ಅಂಕಿ-ಅಂಶಗಳ ಆಧಾರದ ಮೇಲೆ ಹೇಳುವುದಾದರೆ, ರಾಜ್ಯದ ಶೇ.60ಕ್ಕಿಂತಲೂ ಹೆಚ್ಚು ಜನರು ಗ್ರಾಮೀಣ ಪ್ರದೇಶಗಳಲ್ಲಿಯೇ ವಾಸಿಸುತ್ತಿದ್ದಾರೆ. ಇದರಿಂದಾಗಿ, ಶೈಕ್ಷಣಿಕ ನೆಲೆಯಲ್ಲಿ ಗ್ರಾಮೀಣ ಪ್ರದೇಶದ ಸುಧಾರಣೆಯು ನಿಜಕ್ಕೂ ಒಂದು ಸವಾಲಿನ ಸಂಗತಿಯೇ ಆಗಿದೆ. ಇಂಥ ಸಂಕ್ರಮಣ ಸ್ಥಿತಿಯಲ್ಲಿ, ಕೃತಕ ಬುದ್ಧಿಮತ್ತೆಯ ಬಳಕೆಯು ಒಂದಷ್ಟು ಸಮಸ್ಯೆಗಳಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಒಂದು ಆಶಾದಾಯಕ ಬೆಳವಣಿಗೆಯಾಗಿದೆ ಎನ್ನಲಡ್ಡಿಯಿಲ್ಲ.

ಗ್ರಾಮೀಣ ಪ್ರದೇಶಗಳಲ್ಲಿ, ಕೃತಕ ಬುದ್ಧಿಮತ್ತೆಯ ಉಪಕರಣಗಳಿಂದ ವಿದ್ಯಾರ್ಥಿಗಳಿಗೆ, ಅವರ ಗ್ರಹಣ ಸಾಮರ್ಥ್ಯವನ್ನು ಅನುಸರಿಸಿ, ಕಲಿಕೆಗೆ ಅನೇಕ ಅವಕಾಶಗಳನ್ನು ಕಲ್ಪಿಸಬಹುದಾಗಿದೆ. ಇದು ಅವರಿಗೆ ವೈಯಕ್ತಿಕ ಕಲಿಕೆಯ ಪರಿಣಾಮಕಾರಿ ಅನುಭವಗಳನ್ನು ಖಂಡಿತ ಒದಗಿಸಬಲ್ಲದು. 2023ರ ಎಡುಟೆಕ್ ವಿಮರ್ಶೆಯ ವರದಿಯ ಅನುಸಾರ, ಕೃತಕ ಬುದ್ಧಿಮತ್ತೆಯ ವೇದಿಕೆಗಳು ವಿದ್ಯಾರ್ಥಿಗಳಿಗೆ ಶೇ.30ರಷ್ಟು ಅಧಿಕ ತೀವ್ರತೆಯೊಂದಿಗೆ, ಕಲೆ-ವಿಜ್ಞಾನ-ಗಣಿತ ಸೇರಿದಂತೆ ಇತರ ವಿಷಯಗಳಲ್ಲೂ ಉತ್ತಮ ಜ್ಞಾನವನ್ನು ನೀಡಬಲ್ಲವು ಹಾಗೂ ಪರಿಕಲ್ಪನೆಗಳನ್ನು ದೃಢೀಕರಿಸುವುದರೊಂದಿಗೆ ಕಲಿಕಾ ಸಾಮರ್ಥ್ಯಗಳನ್ನು ಗಟ್ಟಿಗೊಳಿಸಬಲ್ಲವು. ವಿದ್ಯಾರ್ಥಿಯ ಸಬಲತೆ ಮತ್ತು ದುರ್ಬಲತೆಗಳ ಆಧಾರದ ಮೇಲೆ ಕಲಿಕಾಂಶಗಳನ್ನು ಸ್ಥಿರೀಕರಿಸಿ, ಕಲಿಕೆಗೆ ಪೂರಕವಾದ ಮಾರ್ಗದರ್ಶನಗಳನ್ನು ನೀಡಲು ಸಾಧ್ಯವಿದೆ.

ಈಗಾಗಲೇ ಒಂದಷ್ಟು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳ ಕಾರ್ಯಕ್ರಮಗಳು ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಂಡು ಆನ್‌ಲೈನ್ ತರಗತಿಗಳನ್ನು ಆಯೋಜಿಸಿ ಸಫಲತೆಯನ್ನು ಕಂಡಿರುವುದನ್ನು ಅಲ್ಲಗಳೆಯಲಾಗದು. ಮಾತ್ರವಲ್ಲದೆ, ಸಾಕಷ್ಟು ಗ್ರಾಮೀಣ ಪ್ರದೇಶಗಳಲ್ಲೂ ಇತ್ತೀಚೆಗೆ ಕೃತಕ ಬುದ್ಧಿಮತ್ತೆ ಆಧರಿತ ಸ್ಮಾರ್ಟ್‌ಬೋರ್ಡ್ ಒದಗಿಸಿ, ಶೈಕ್ಷಣಿಕ ಪ್ರಗತಿಗೆ ಶ್ರಮಿಸುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ ಮತ್ತು ಈ ಉಪಕ್ರಮವು ಒಂದಷ್ಟು ಸೂಕ್ತವಾದ ಪರಿಹಾರಗಳನ್ನು ನೀಡುತ್ತಿದೆ. ಸಾಮಾನ್ಯ ಬೋಧನಾ ವಿಧಾನಗಳಿಂದ ಕಲಿಯುವ ವಿದ್ಯಾರ್ಥಿಗಳಿಗಿಂತ, ಕೃತಕ ಬುದ್ಧಿಮತ್ತೆಯ ನೆರವು ದಕ್ಕಿರುವ ವಿದ್ಯಾರ್ಥಿಗಳ ಕಲಿಕೆಯಲ್ಲಿ ಶೇ.18ರಷ್ಟು ಪ್ರಗತಿ ಕಂಡುಬಂದಿರುವುದನ್ನು ಕೆಲವು ಸಮೀಕ್ಷೆಗಳು ದೃಢಪಡಿಸಿವೆ.

ಕಲಿಕೆಯ ಪ್ರಕ್ರಿಯೆಯಲ್ಲಿ ಶಿಕ್ಷಕರ ಪಾತ್ರ ಗುರುತರವಾದದ್ದು. ಅವರ ಪರಿಣಾಮಕಾರಿ ಬೋಧನೆಯು ಶಿಕ್ಷಣ ರಂಗದಲ್ಲಿ ಕ್ರಾಂತಿಗೆ ಕಾರಣವಾಗಬಲ್ಲದು. ಬದಲಾಗುತ್ತಿರುವ ಕಾಲಘಟ್ಟಕ್ಕೆ ಸರಿಸಮನಾಗಿ ಶಿಕ್ಷಕ ಬಳಗದವರು ನವೀನ ಕೌಶಲಗಳು ಮತ್ತು ತಂತ್ರಜ್ಞಾನದೊಂದಿಗೆ ನಿತ್ಯವೂ ತಮ್ಮನ್ನು ಪಳಗಿಸಿಕೊಳ್ಳಬೇಕಾದ್ದು, ಸಮೀಕರಿಸಿಕೊಳ್ಳಬೇಕಾದ್ದು ತೀರಾ ಅಗತ್ಯವಾಗಿದೆ. ಇಂಥದೊಂದು ಹಿನ್ನೆಲೆಯಲ್ಲಿ, ಶಿಕ್ಷಕ ಬಳಗಕ್ಕೆ ಅಗತ್ಯವಿರುವ ಸಂಪನ್ಮೂಲವನ್ನು ಒದಗಿಸುವುದು ಕೂಡ ಅತ್ಯವಶ್ಯಕ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಕೃತಕ ಬುದ್ಧಿಮತ್ತೆಯು ಶಿಕ್ಷಕ ಬಳಗವನ್ನು ಒಬ್ಬ ಒಳ್ಳೆಯ ಸ್ನೇಹಿತನಂತೆ ಕೈಹಿಡಿದು ನಡೆಸುವುದರ ಜತೆಗೆ, ಅನುಭವಿ ಶಿಕ್ಷಕನಂತೆ ಮಾರ್ಗದರ್ಶನವನ್ನೂ ನೀಡಬಲ್ಲದು. ಡೇಟಾ ವಿಶ್ಲೇಷಣೆ, ಬೋಧನೆಯ ನವೀನ ತಂತ್ರಗಳ ಪರಿಚಯ, ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಅಳೆಯುವ ವಿನೂತನ ಮಾನದಂಡಗಳು, ವೃತ್ತಿಪರ ತರಬೇತಿಗಳನ್ನು ನೀಡಲು ಇದು ಪೂರಕವಾಗಿದೆ.



ವಿದ್ಯಾರ್ಥಿಗಳ ಕಲಿಕೆಯಲ್ಲಿ ಮಾತೃಭಾಷೆಯ ಬಳಕೆ ತುಂಬಾ ಮಹತ್ತರವಾದುದು. ಅದರಲ್ಲೂ ನಿರ್ದಿಷ್ಟವಾಗಿ, ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಮಾತೃಭಾಷೆಯ ಮೂಲಕದ ಬೋಧನೆಯು ಅತಿಹೆಚ್ಚು ಪರಿಣಾಮ ಬೀರಬಲ್ಲದು ಹಾಗೂ ವಿಷಯದ ಸಮರ್ಥ ಗ್ರಹಿಕೆಗೆ, ಉತ್ತಮ ಕಲಿಕೆಗೆ ರಹದಾರಿಯನ್ನೂ ಒದಗಿಸಬಲ್ಲದು. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಮಾತೃಭಾಷೆಯೇ ಕಲಿಕಾ/ಬೋಧನಾ ಮಾಧ್ಯಮವಾದಾಗ, ಅವರು ವಿಷಯವನ್ನು ಸುಲಭವಾಗಿ ಅರ್ಥೈಸಿಕೊಳ್ಳಬಲ್ಲರು ಮತ್ತು ಹೆಚ್ಚುಕಾಲ ನೆನಪಿನಲ್ಲಿ ಇಟ್ಟುಕೊಳ್ಳಬಲ್ಲರು ಎಂಬುದನ್ನು ತಜ್ಞರ ವರದಿಗಳು ಸಾಕ್ಷೀಕರಿಸುತ್ತವೆ. ಹೀಗಾಗಿ, ಕೃತಕ ಬುದ್ಧಿಮತ್ತೆಯ ಉಪಕರಣಗಳ ಮೂಲಕ ವಿದ್ಯಾರ್ಥಿಗಳ ಮಾತೃಭಾಷೆಯಲ್ಲೇ ಬೋಧನೆ ಮಾಡಬಹುದಾದ ಸೌಕರ್ಯವು ಒಂದು ವರದಾನವಾಗಿದೆ ಎಂದರೆ ಅತಿಶಯೋಕ್ತಿಯಲ್ಲ. 'ನೋಡಿ ಕಲಿ, ಮಾಡಿ ತಿಳಿ, ಕೇಳಿ ಕಲಿ' ಎನ್ನುವ ಸಿದ್ಧಾಂತಗಳಿಗೆ ಪೂರಕವಾಗಿರುವಂತೆ, ಸ್ಮಾರ್ಟ್ ತರಗತಿಗಳ ಮೂಲಕ ದೃಶ್ಯ ಆಧರಿತ ಕಲಿಕೆ ಮತ್ತು ಧ್ವನಿ ಆಧರಿತ ಕಲಿಕೆಗೆ ಅನುವು ಮಾಡಿಕೊಡಬಹುದಾಗಿದೆ. ಇದು ವಿದ್ಯಾರ್ಥಿಗಳ ಸ್ಮೃತಿಕೋಶಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ತಲುಪಬಲ್ಲದು. ಸರಕಾರಗಳು ಕೂಡ ಈ ನಿಟ್ಟಿನಲ್ಲಿ ನಿರಂತರವಾಗಿ ಪ್ರಯತ್ನಿಸುತ್ತಿರುವುದು ನಿಜಕ್ಕೂ ಸ್ವಾಗತಾರ್ಹ ಸಂಗತಿ.

ಕೃತಕ ಬುದ್ಧಿಮತ್ತೆಯ ಉಪಯೋಗವು ಶೈಕ್ಷಣಿಕ ರಂಗದಲ್ಲಿ ಮಹತ್ತರ ಬದಲಾವಣೆಯನ್ನು ತರಬಲ್ಲದಾದರೂ, ಅದಕ್ಕೂ ಒಂದಷ್ಟು ಇತಿಮಿತಿಗಳಿವೆ ಎಂಬುದನ್ನು ನಾವು ಅಲ್ಲಗಳೆಯಲಾಗದು. ಈ ಉಪಕ್ರಮಕ್ಕೆ ಅತ್ಯುತ್ತಮವಾದ, ವಿಶ್ವಾಸಾರ್ಹವಾದ ಇಂಟರ್‌ನೆಟ್ ವ್ಯವಸ್ಥೆ ತುಂಬಾ ಅಗತ್ಯವಾಗಿದೆ. ಕೃತಕ ಬುದ್ಧಿಮತ್ತೆಯ ಕಲಿಕಾ ಸಾಧನಗಳ ಸಮರ್ಪಕ ಬಳಕೆಯಲ್ಲಿ ಜ್ಞಾನ ಮತ್ತು ಕೌಶಲ ಕೂಡ ಮಹತ್ತರ ಪಾತ್ರವನ್ನು ವಹಿಸಬಲ್ಲವು. ಶಿಕ್ಷಕ ಬಳಗ ಸೇರಿದಂತೆ ವಿದ್ಯಾರ್ಥಿಗಳು ಈ ಕಲಿಕಾ ಸಾಧನಗಳನ್ನು ಸಮರ್ಥವಾಗಿ ಬಳಸುವಲ್ಲಿ ಇಚ್ಛಾಶಕ್ತಿಯ ಕೊರತೆ ಹೊಮ್ಮಿದರೆ ಅದೊಂದು ಸಮಸ್ಯೆಯಾಗಬಲ್ಲದು. ಆದ್ದರಿಂದ, ಇಂಥ ಕೊರತೆಗಳನ್ನು ನೀಗಿಸಲು ಶಾಲಾಡಳಿತ ವ್ಯವಸ್ಥೆಗಳು, ಸರಕಾರಗಳು ಹೆಚ್ಚೆಚ್ಚು ಹೂಡಿಕೆಯನ್ನು ಮಾಡುವುದರ ಜತೆಗೆ, ಒಂದಷ್ಟು ದಿಗ್ಗಜ ಕಂಪನಿಗಳ ಜತೆಗೂ ಕೈಜೋಡಿಸಬೇಕಿದೆ. ಕೃತಕ ಬುದ್ಧಿಮತ್ತೆಯ ಬಳಕೆಯಿಂದಾಗುವ ಉಪಯೋಗ ಮತ್ತು ಅದರ ಅನಿವಾರ್ಯತೆಯ ಕುರಿತಾಗಿ ಹೆಚ್ಚೆಚ್ಚು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಿದೆ, ಕಾರ್ಯಾಗಾರಗಳನ್ನು ನಡೆಸಬೇಕಿದೆ. ಶಿಕ್ಷಕ ಬಳಗದವರ ವಾಡಿಕೆಯ ಕಾರ್ಯಭಾರಗಳಿಗೆ ತೊಂದರೆಯಾಗದಂತೆ ಮತ್ತು ಹೊರೆಯಾಗದಂತೆ ತರಬೇತಿಗಳನ್ನು ನೀಡುವ ಮೂಲಕ ಅವರನ್ನು ಕೌಶಲಪೂರ್ಣರನ್ನಾಗಿಸಬೇಕಿದೆ. ಈ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನಗಳಾದಲ್ಲಿ, ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವೆ ಕಾಣಬರುವ ಶೈಕ್ಷಣಿಕ ಪ್ರಗತಿಯ ತಾರತಮ್ಯಗಳಿಗೆ ಇತಿಶ್ರೀ ಹಾಡಬಹುದು, ಪರಿಣಾಮಕಾರಿಯಾದ ಬದಲಾವಣೆಗಳನ್ನು ಕಾಣಬಹುದು.

(ಲೇಖಕರು ಪ್ರಾಧ್ಯಾಪಕರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಈ ಪರಿಪಾಠ ತಪ್ಪಲಿ

ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಕಾಣಬರುತ್ತಿರುವ ವಿಲಕ್ಷಣ ಪರಿಸ್ಥಿತಿ ಎಲ್ಲರಿಗೂ ಗೊತ್ತಿರುವಂಥದ್ದೇ. ಅದೆಂದರೆ, ಪ್ರತಿಯೊಬ್ಬ ಜನಪ್ರತಿನಿಧಿಗೂ ಸಚಿವನಾಗುವ ದಾಹ. ಮಂತ್ರಿಗಿರಿ ಸಿಕ್ಕಿಬಿಟ್ಟರೆ ತಾನು ಕುಬೇರನಾಗಬಹುದು ಎಂಬ ಎಣಿಕೆ ಇಂಥವರದ್ದು. ಈಚಿನ ಕೆಲ ವರ್ಷಗಳ ಬೆಳವಣಿಗೆಗಳು ಇದಕ್ಕೆ ಸಾಕ್ಷಿ. ಒಂದಷ್ಟು ಜನಪ್ರತಿನಿಧಿಗಳು ಪಕ್ಷವು ಸಾಗುವುದು ತಮ್ಮಿಂದಲೇ ಎಂದು ಬೀಗುವುದು ಸಾಮಾನ್ಯವಾಗಿದೆ. ಬಹುಮತ ಗಳಿಸಿದ ಪಕ್ಷದ ಸರಕಾರವೂ, 'ಯಾವ ಹೊತ್ತಿನಲ್ಲಿ ಏನಾಗುವುದೋ?' ಎಂಬ ಅಸ್ಥಿರತೆಯ ಭಯಕ್ಕೆ ಒಡ್ಡಿಕೊಂಡಿರುವುದನ್ನು ಸಾಕಷ್ಟು ರಾಜ್ಯಗಳಲ್ಲಿ ಕಾಣುತ್ತಿದ್ದೇವೆ. ಕೆಲವೇ ಶಾಸಕರಿರುವ ಮಿತ್ರಪಕ್ಷದ ಮುಖಂಡನೂ, 'ನನಗೆ ಮುಖ್ಯಮಂತ್ರಿ ಪದವಿ ಕೊಡಿ, ಇಲ್ಲದಿದ್ದರೆ ವಿರೋಧ ಪಕ್ಷದ ಜತೆ ಕೈಜೋಡಿಸುವೆ' ಎನ್ನುವ ಧೋರಣೆಯಲ್ಲಿರುವುದನ್ನು ನಾವೀಗ ಕಾಣಬಹುದು.

ಇನ್ನು, ಬಹುಮತ ಗಳಿಸಿದ ಪಕ್ಷದಲ್ಲೂ ಶಾಸಕನೊಬ್ಬ 'ನಾನೂ ಮುಖ್ಯಮಂತ್ರಿ ಪದವಿಗೆ ಅರ್ಹ' ಎಂದು ಗುಟುರುಹಾಕಿದರೆ, ಸಚಿವ ಪದವಿ ಸಿಗದ ಅತೃಪ್ತ ಶಾಸಕರ ದಂಡೇ ಅವನ ಬೆನ್ನಿಗೆ ನಿಲ್ಲುತ್ತದೆ; ಹೀಗಾಗಿ, ಸರಕಾರಗಳು ತಮ್ಮ ಉಳಿವಿಗಾಗಿ ಯತ್ನಿಸುವ ಭರದಲ್ಲಿ ಉತ್ತಮ ಆಡಳಿತ ನೀಡಲು ಅಸಮರ್ಥವಾಗುತ್ತಿವೆ. ಮಹಾರಾಷ್ಟ್ರದಲ್ಲಿ ಶಿವಸೇನೆಯ ಉದ್ಧವ್ ಠಾಕ್ರೆ ಇದನ್ನೇ ಮಾಡಿದರು; ಅವರು ಸಿದ್ಧಾಂತ ಮರೆತು ಬದ್ಧ ವಿರೋಧಿಗಳೊಡನೆ ಕೈಜೋಡಿಸಿ ಕೆಲವು ಕಾಲ ಮುಖ್ಯಮಂತ್ರಿಯಾದರೂ, ತಮ್ಮ ಪಕ್ಷದವರಿಂದಲೇ ಮೂಲೆಗುಂಪಾದರು. ಪ್ರತಿಯೊಂದು ಪಕ್ಷದಲ್ಲೂ ಇಂಥ ಗುಂಪುಗಾರಿಕೆಯಿದ್ದು, ಪ್ರತಿ ಬಣದ ನಾಯಕ ತಾನೇ ಮುಖ್ಯಮಂತ್ರಿಯಾಗಬೇಕೆಂಬ ಹವಣಿಕೆಯಲ್ಲಿ ಇದೇ ತಂತ್ರವನ್ನು ಬಳಸುತ್ತಿದ್ದಾನೆ. ಪಕ್ಷದ ಹೈಕಮಾಂಡ್‌ಗಳು ಕೂಡ ಇಂಥವರನ್ನು ನಿಯಂತ್ರಿಸಲಾಗದೆ ಅಸಹಾಯಕರಾಗುವ ಪರಿಸ್ಥಿತಿಯಿದೆ. ಇದರಿಂದಾಗಿ ಪ್ರಜಾಪ್ರಭುತ್ವವು ಐಸಿಯುಗೆ ದಾಖಲಾಗುವಂತಾಗಿದೆ.

ಹಿಂದೆ ಇಂಥ 'ರಾಜಕೀಯ ಜಿಗಿದಾಟ'ವನ್ನು ತಪ್ಪಿಸಲು ಪಕ್ಷಾಂತರ ನಿಷೇಧ ಕಾಯಿದೆಯನ್ನು ತರಲಾಗಿತ್ತು. ಆದರೀಗ, ಪಕ್ಷಕ್ಕೆ ರಾಜೀನಾಮೆ ನೀಡಿ ಮತ್ತೆ ಸ್ಪರ್ಧಿಸಬಹುದಾದುದರಿಂದ ಇದು 'ಆಪರೇಷನ್'ಗೆ ದಾರಿಮಾಡಿಕೊಟ್ಟು ಮತ್ತೆ ಪಕ್ಷಾಂತರಿಗಳೇ ಸಚಿವರಾಗಿ ವಿಜೃಂಭಿಸುವುದಕ್ಕೆ ಅನುವುಮಾಡಿಕೊಟ್ಟಿದೆ. ಇಂಥ ಅನೈತಿಕ ಆಪರೇಷನ್‌ಗೆ ಎಲ್ಲ ಪಕ್ಷಗಳು ಬಲಿಯಾಗಿದ್ದರೂ, ಇದನ್ನು ತಡೆಗಟ್ಟಲು ಯಾರೂ ಯತ್ನಿಸುತ್ತಿಲ್ಲ. ಮತ್ತೊಂದು ವಿಸ್ಮಯವೆಂದರೆ, ನೈತಿಕತೆಗೆ ಎಳ್ಳು-ನೀರು ಬಿಟ್ಟು ಇಂದು ಇಂಥ ಆಪರೇಷನ್‌ಗೆ ಬಹಿರಂಗವಾಗಿ ಕರೆಕೊಡಲಾಗುತ್ತಿದೆ ಮತ್ತು ಅಂಥವರೇ 'ರಾಜಕೀಯ ತಂತ್ರಗಾರ' ಎಂಬ ಮೆಚ್ಚುಗೆಗೆ ಪಾತ್ರರಾಗುತ್ತಿದ್ದಾರೆ. ಈ ಪಿಡುಗಿಗೆ ಪರಿಹಾರವೆಂದರೆ- ಒಂದು ಪಕ್ಷದಿಂದ ಇನ್ನೊಂದಕ್ಕೆ ಹಾರುವ 'ಅಧಿಕಾರದಾಹಿ'ಗಳಿಗೆ ಐದು ವರ್ಷಗಳ ಕಾಲ ಸರಕಾರದಲ್ಲಿ ಮಂತ್ರಿಗಿರಿಯನ್ನು ನಿಷೇಧಿಸಬೇಕು. ಪಕ್ಷಾತೀತ ಚಿಂತಕರು, ನಿಸ್ಪೃಹ ಸಾಹಿತಿಗಳು ಇದರ ಬಗ್ಗೆ ಗಂಭೀರವಾಗಿ ಚರ್ಚಿಸಬೇಕು. ಮಾತ್ರವಲ್ಲದೆ, ಚುನಾವಣಾ ಆಯೋಗ ಮತ್ತು ನ್ಯಾಯಾಲಯಗಳು ಕೂಡ ಈ ನಿಟ್ಟಿನಲ್ಲಿ ಗಮನಹರಿಸಿ, ಪ್ರಜಾಪ್ರಭುತ್ವದ ಉಳಿವಿಗೆ ಪೂರಕವಾದ ನಿಲುವು ತಳೆಯಬೇಕು.

- ಸತ್ಯಬೋಧ, ಬೆಂಗಳೂರು

ಭ್ರಷ್ಟರನ್ನು ಬಲಿಹಾಕಿ

ಸರಕಾರಿ ಅಧಿಕಾರಿಗಳು ಮತ್ತು ಹಲವು ಸ್ತರದ ಸಿಬ್ಬಂದಿಗಳು ನೇಮಕಗೊಳ್ಳುವುದು ಜನರ ಸೇವೆಗಾಗಿ. ಆದರೆ ಇವರಲ್ಲಿ ಕೆಲವರು ಇಂಥ ಆಶಯವನ್ನು ಗಾಳಿಗೆ ತೂರಿ 'ಬೇಲಿಯೇ ಎದ್ದು ಹೊಲ ಮೇಯ್ದಿತು' ಎನ್ನುವಂತೆ ಲೂಟಿಗೆ ಇಳಿಯುತ್ತಿರುವುದು ವಿಷಾದನೀಯ. ಇಂಥ ಭ್ರಷ್ಟ ಪರಿಪಾಠದ ಕಾರಣದಿಂದಾಗಿ ವ್ಯವಸ್ಥೆ ಕುಸಿಯುತ್ತಿದೆ. ಆಗೊಮ್ಮೆ ಈಗೊಮ್ಮೆ ನಡೆಯುವ ಲೋಕಾಯುಕ್ತರ ದಾಳಿಗಳು ಇಂಥ ಭ್ರಷ್ಟರ ಮುಖವಾಡವನ್ನು ಕಳಚುತ್ತವೆಯಾದರೂ, ನೋಡನೋಡುತ್ತಿದ್ದಂತೆಯೇ ಅಂಥ ಮತ್ತಷ್ಟು ಮಂದಿ ಹುಟ್ಟಿಕೊಳ್ಳುತ್ತಾರೆ ಎಂಬುದು ಕಹಿವಾಸ್ತವ. ರಸ್ತೆ, ಆಸ್ಪತ್ರೆ, ಶಾಲೆ ಇತ್ಯಾದಿ ಸಾರ್ವಜನಿಕ ಸೇವಾಯೋಜನೆಗಳಲ್ಲಿ ನಿಧಿಗಳ ದುರುಪಯೋಗವು ಸಾಮಾನ್ಯವಾಗಿದ್ದು, ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸಬೇಕಿದ್ದ ಅಧಿಕಾರಿಗಳು ತಮ್ಮ ಸ್ವಾರ್ಥಕ್ಕಾಗಿ ಅವರನ್ನು ನಿರ್ಲಕ್ಷಿಸುತ್ತಿದ್ದಾರೆ. ಹೀಗಾಗಿ ಕಾನೂನು ಮತ್ತು ಆಡಳಿತ ವ್ಯವಸ್ಥೆಯ ಮೇಲೆ ಜನರ ನಂಬಿಕೆ ಕುಸಿಯುತ್ತಿದೆ. ಆದ್ದರಿಂದ, ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ಷಿಪ್ರವಾಗಿ ಕಠಿಣ ಕಾನೂನು ಕ್ರಮಗಳನ್ನು ಜರುಗಿಸಬೇಕಾದ್ದು ಈ ಕ್ಷಣದ ಅನಿವಾರ್ಯತೆ.

- ಶಿವಲೀಲಾ ಶಿವಾನಂದ ಸೋಮನಿ, ಬೆಳಗಾವಿ

ಸರಕಾರ ಯೋಚಿಸಲಿ

384 ಹುದ್ದೆಗಳ ಭರ್ತಿಗಾಗಿ ಕೆಪಿಎಸ್‌ಸಿ ನಡೆಸಿದ ಮರುಪರೀಕ್ಷೆಯ ಎಡವಟ್ಟುಗಳ ಬಗ್ಗೆ ಕಳೆದ ಡಿಸೆಂಬರ್ 30ರ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಸದರಿ ಮರುಪರೀಕ್ಷೆಯಲ್ಲಿನ ಕನ್ನಡದ ಪ್ರಶ್ನೆಪತ್ರಿಕೆಯು ಶೇ.50ರಷ್ಟು ದೋಷಪೂರಿತವೆಂದು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದ ನಿರ್ದೇಶಕರು ಹೇಳಿದ್ದಾರೆ. ಮತ್ತೊಂದೆಡೆ, ಪ್ರಶ್ನೆಪತ್ರಿಕೆಯಲ್ಲಿ 23 ಗುರುತರ ದೋಷಗಳು ಮತ್ತು 9 ಕಡೆ ಲಘುದೋಷಗಳು ಸೇರಿ ಒಟ್ಟು 32 ದೋಷಪೂರಿತ ಪ್ರಶ್ನೆಗಳಿದ್ದುದನ್ನು ಬೋಧಕರು ಗುರುತಿಸಿದ್ದಾರೆ.

ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದ ಹುದ್ದೆಗಳಿಗೆ ಪ್ರಶ್ನೆಪತ್ರಿಕೆಗಳನ್ನು ಮೊದಲು ಇಂಗ್ಲಿಷ್‌ನಲ್ಲಿ ಸಿದ್ಧಪಡಿಸಿ ತರುವಾಯದಲ್ಲಿ ಕನ್ನಡಕ್ಕೆ ಅನುವಾದಿಸುವುದೇಕೆ? ಇದೊಂದು ಅಸಮರ್ಪಕ ವಿಧಾನ ಎಂದು ಯಾರಿಗೂ ಅನಿಸುವುದೇ ಇಲ್ಲವೇ? ಜತೆಗೆ, ಕನ್ನಡ ಭಾಷಾಜ್ಞಾನವು ಸಮರ್ಥವಾಗಿ ಇಲ್ಲದವರಿಗೆ ಅನುವಾದದ ಹೊಣೆ ಹೊರಿಸುವುದು ವಿವೇಕದ ನಡೆಯಲ್ಲ. ಪರೀಕ್ಷೆಗಳನ್ನು ನಡೆಸುವ ಮಂಡಳಿಯ ನಿಯಂತ್ರಣವು ಕನ್ನಡಿಗರಲ್ಲದ ಮತ್ತು ಕನ್ನಡ ಬಾರದ ಅಧಿಕಾರಿಗಳ ಕೈಯಲ್ಲಿರುವುದೇ ಇಂಥ ಅಧ್ವಾನಗಳಿಗೆ ಕಾರಣವೇ? ಅದೇನೇ ಇರಲಿ, ನಮ್ಮಲ್ಲಿ ವಿಪುಲವಾಗಿ ಲಭ್ಯರಿರುವ ಕನ್ನಡ ಪ್ರಾಧ್ಯಾಪಕರುಗಳ ಸೇವೆಯನ್ನು ಕೆಪಿಎಸ್‌ಸಿಯವರು ಬಳಸಿಕೊಳ್ಳುವುದು ಒಳ್ಳೆಯದು. 'ಐಎಎಸ್ ಪ್ರಭೃತಿಗಳು' ಎಲ್ಲ ವಿಷಯಗಳಲ್ಲೂ ಪರಿಣತರು ಎಂಬ ಕುರುಡು ನಂಬಿಕೆ/ಭರವಸೆಯನ್ನು ಸರಕಾರ ಹೊಂದಬಾರದು. ಈಗಾಗಲೇ ಮೊದಲ ಪರೀಕ್ಷೆ ಮತ್ತು ಮರುಪರೀಕ್ಷೆ ನಡೆಸಿದ್ದಕ್ಕೆ ಸಾರ್ವಜನಿಕರ 30 ಕೋಟಿ ರುಪಾಯಿ ತೆರಿಗೆ ಹಣವು ಅಪವ್ಯಯವಾಗಿದ್ದು ಸಾಕು. 'ಕೆಪಿಎಸ್‌ಸಿ ಒಂದು ಅದಕ್ಷ ಸಂಸ್ಥೆ' ಎಂಬ ಅಪಕೀರ್ತಿಯನ್ನು ಪಡೆಯಬೇಕೇ? ಸರಕಾರ ಈ ಕುರಿತು ಒಂದಿಷ್ಟು ಆಲೋಚನೆ ಮಾಡಲಿ. ಈ ಹುದ್ದೆಗಳಿಗೆ ಮತ್ತೊಮ್ಮೆ ಪರೀಕ್ಷೆಗಳನ್ನು ವ್ಯವಸ್ಥಿತವಾಗಿ ನಡೆಸುವುದೊಂದೇ ಈಗ ಉಳಿದಿರುವ ಮಾರ್ಗ.

- ಸಾಮಗ ದತ್ತಾತ್ರಿ, ಬೆಂಗಳೂರು

ಆತ್ಮಾವಲೋಕನಕ್ಕೆ ದಾರಿ

ಋತುಮತಿಯಿಂದ ಋಷಿಪಂಚಮಿಯವರೆಗೆ..!' ಅಂಕಣಬರಹವು (ವಿಶ್ವವಾಣಿ ಜ.12) ಸಂಬಂಧಗಳ ಮಹತ್ವವರಿಯದ ಕೆಲ ಗಂಡಸರು ಆತ್ಮಾವಲೋಕನ ಮಾಡಿಕೊಳ್ಳುವುದಕ್ಕೆ ದಾರಿಮಾಡಿಕೊಟ್ಟಿತು. ಆರಂಭದಿಂದ ಅಂತ್ಯದವರೆಗೂ ಒಂದೇ ಉಸಿರಿನಲ್ಲಿ ಓದಿಸಿಕೊಂಡುಹೋದ ಲೇಖನ ಮನೋಜ್ಞವಾಗಿ ಮೂಡಿಬಂದಿದ್ದು, ಹೆಣ್ಣಿನ ಸಂಕಷ್ಟಗಳ ಸರಮಾಲೆಯನ್ನು ಓದುಗರ ಮುಂದೆ ತೆರೆದಿಟ್ಟಿದೆ. ಅನವಶ್ಯಕ ಪೀಠಿಕೆಯಿಲ್ಲದೆ, ವಾಟ್ಸಾಪ್ ಮೂಲಕದ ಪರಸ್ಪರ ಸಂಭಾಷಣೆಯ ರೂಪ ಹೊತ್ತ ಲೇಖನ, ಪ್ರೀತಿಗಾಗಿ ಸ್ಪಂದಿಸುವ ಮತ್ತು ಕಾತರಿಸುವ ಹೃದಯಗಳ ಸಂವೇದನೆಯನ್ನು ಎತ್ತಿಹಿಡಿಯುವಲ್ಲಿ ಯಶಸ್ವಿಯಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

- ವಿ.ಆರ್. ಮುರಳೀಧರ್, ಬೆಂಗಳೂರು

ಭಟ್ಟರ್ ಸ್ಕಾಚ್

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಅಣ್ಣಾ ಅಂದ್ರೆ ಸಾಕು ಅಟ್ಯಾಕ್ ಅಂತ ಭಾವಿಸ್ತಾರಲ್ಲ?
- **ನೀನು ಸಚಿವ ರಾಜಣ್ಣನ ಬಗ್ಗೆ ಹೀಗೆ ಭಾವಿಸಬಾರದಿತ್ತು!**

- **ಗಿಡ್ಡ ಗೋಪಾಲ, ಶ್ರೀರಂಗಪಟ್ಟಣ**
ಭಟ್ರೇ, ಕುಡುಕನೊಬ್ಬ ಹಾದಿರಂಪ-ಬೀದಿರಂಪ ಮಾಡಿ ಕೋರ್ಟಿನಲ್ಲಿ ಏನೆಂದು ಸಮರ್ಥಿಸಿಕೊಳ್ಳಬಹುದು?
- **ಯುವರ್ ಆನರ್, ಅದು ನಾನು ಅಂದು ಮಾಡಿದ ಬೀದಿನಾಟಕ ಏನಪ್ಪಾ ಅಂದ್ರೆ, ಎನ್ನಬಹುದು!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಏಳು ಬೆಟ್ಟಗಳ ಒಡೆಯ ಶ್ರೀನಿವಾಸ, ತಿರುಪತಿಯಲ್ಲಿ ಏಳು ಮಂದಿಗೆ ವೈಕುಂಠ ಪ್ರವೇಶ ಕರುಣಿಸಿರಬಹುದೇ?
- **ಈ ವಿಷಯದಲ್ಲಿ ಆತ ಚೌಕಾಶಿ ಮಾಡುವುದಿಲ್ಲ ಬಿಡು!**

- **ಸಂದೇಶ ಹೆಗಡೆ, ಯಲ್ಲಾಪುರ**
ಭಟ್ರೇ, ಹೆಂಡತಿ ಹೇಳಿದಂತೆ ಕೇಳಿದರೆ ಸಮಸ್ಯೆ ಇಲ್ಲ ಅಂತಾರಲ್ಲ?
- **ಬೇರೆಯವರ ಹೆಂಡತಿ ಹೇಳಿದಂತೆ ಕೇಳಿದರೆ ಹೊಸ ಸಮಸ್ಯೆಗೆ ಮೂಲ!**

- **ಆನಂದ ಕೆ.ಶಾಸ್ತ್ರೀ, ಬೆಂಗಳೂರು**
ಭಟ್ರೇ, ವೀರಪ್ಪ ಮೊಯಿಲಿ ಅವರ ವರ್ಚಸ್ಸನ್ನು ಯಾವುದರಿಂದ ಅಳೆಯಬಹುದು?
- **ಮಹಾಕಾವ್ಯಗಳಿಂದ ಮಾತ್ರ ಅಳೆಯಬೇಡಿ ಅಂತ ಪ್ರಾರ್ಥನೆ!**

- **ಸಂಗೀತಾ ವಿ., ಮಂಡ್ಯ**
ಭಟ್ರೇ, ಉತ್ತಮ ಉತ್ತರ ಬರೆಯ ಲು ಮುಖ್ಯವಾಗಿ ಏನು ಬೇಕು?
- **ಉತ್ತಮ ಪ್ರಶ್ನೆ!**

- **ಸಿ.ಕೆ.ಗೋಪಾಲ, ಮಲ್ಲೇಶ್ವರ**
ಭಟ್ರೇ, ಗಂಡಸು ಮಾಡುವ ದೊಡ್ಡ ತಪ್ಪು ಯಾವುದು?
- **ತನ್ನ ಪಾಡಿಗೆ ತಾನಿದ್ದ ಹೆಂಗಸನ್ನು ಮದುವೆಯಾಗಿ ಕೆಣಕುವುದು!**

- **ಸತೀಶ ಪಟಗಾರ, ಹೊನ್ನಾವರ**
ಭಟ್ರೇ, ಮದುವೆ ಮನುಷ್ಯನ ಅದ್ಭುತ ಆವಿಷ್ಕಾರ ಅಂತಾರಲ್ಲ?
- **ಕೊಳೆ ಪಂಪು, ಸೈಕಲ್ ರಿಪೇರಿ ಕಿಟ್ ಕಂಡುಹಿಡಿದಿದ್ದು ಸಹ ಅದ್ಭುತ ಆವಿಷ್ಕಾರ ಅಂತಾರಪ್ಪ!**

- **ಸುಂದರ ರೆಡ್ಡಿ, ಕೋರಮಂಗಲ**
ಭಟ್ರೇ, ದಾಂಪತ್ಯ ಜೀವನ ಅಂದ್ರೆ ಪಾರ್ಕಿನಲ್ಲಿ ವಿಹರಿಸಿದಂತೆ, ಏನಂತೀರಾ?
- **ಹೂಂ.. ಜುರಾಸಿಕ್ ಪಾರ್ಕಿನಲ್ಲಿ ವಿಹರಿಸಿದಂತೆ!**

- **ವೀರೇಶ ಕಮತಗಿ. ಅಡಗೂರು**
ಭಟ್ರೇ, ಯಾವ ಸಂದರ್ಭದಲ್ಲಿ ಹೆಂಡತಿ ಕೋಪಿಸಿಕೊಳ್ಳುವುದಿಲ್ಲ?
- **ಗಂಡ ಪಾತ್ರೆ ಮತ್ತು ಬಟ್ಟೆ ತೊಳೆಯುವಾಗ!**

ರಾಮ ರಾಮಾ... ಇದೆಂಥ ಅವಸ್ಥೆ...!

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಅವು ನಮ್ಮ ಬಾಲ್ಯದ ದಿನಗಳು. ರಾಮಾಯಣದಂಥ ಪೌರಾಣಿಕ ಕಥೆ ಮೊತ್ತಮೊದಲ ಬಾರಿಗೆ ಕಿರುತೆರೆಯಲ್ಲಿ ಪ್ರಸಾರವಾಯಿತು. ಅದುವರೆಗೂ ಹಿರಿತೆರೆಯಲ್ಲಿ ಮಾತ್ರ ಪೌರಾಣಿಕ, ಐತಿಹಾಸಿಕ ಚಿತ್ರಗಳು ಬರುತ್ತಿದ್ದವೇ ವಿನಾ ಕಿರುತೆರೆಯಲ್ಲಿ ಇದು ಮೊದಲ ಪ್ರಯೋಗವಾಗಿತ್ತು. ಜಾಹೀರಾತು ಸೇರಿ ಒಂದು ಗಂಟೆಗೆ ನಿಗದಿಯಾಗಿದ್ದ ಕಾರ್ಯಕ್ರಮದಲ್ಲಿ 45 ನಿಮಿಷ ಮಾತ್ರ ಕಥೆಗೆ ಮೀಸಲಾಗಿರುತ್ತಿತ್ತು. ಈ ನಿಟ್ಟಿನಲ್ಲಿ 1987ರ ಜನವರಿ 25 ಕಿರುತೆರೆಯ ಇತಿಹಾಸದಲ್ಲಿ ನೆನಪಿನಲ್ಲಿಡಬೇಕಾದ ಒಂದು ದಿನ. ಅಂದು ಆರಂಭವಾಗಿ 1988ರ ಜುಲೈ 31ರವರೆಗೆ, ಒಟ್ಟೂ 78 ಕಂತುಗಳಲ್ಲಿ ರಾಮಾಯಣ ಧಾರಾವಾಹಿ ದೂರದರ್ಶನದಲ್ಲಿ ಪ್ರಸಾರವಾಯಿತು. ಆರಂಭದಲ್ಲಿ ಇದನ್ನು ಒಂದು ವರ್ಷದ ಅವಧಿಗೆ, 52 ಕಂತಿಗೆ ವಿನ್ಯಾಸಗೊಳಿಸಲಾಗಿತ್ತು. ಆದರೆ ಜನಪ್ರಿಯತೆ ಮತ್ತು ಬೇಡಿಕೆಯಿಂದಾಗಿ ಇದನ್ನು 3 ಬಾರಿ ವಿಸ್ತರಿಸಿ, ಅಂತಿಮವಾಗಿ 78 ಸಂಚಿಕೆಗಳಲ್ಲಿ ಬಿತ್ತರಿಸಲಾಯಿತು.

ನಿರ್ಮಾಪಕರಾಗಿದ್ದ ರಮಾನಂದ ಸಾಗರ್ ರಾಮಾಯಣದ ಆ ದಿನಗಳಲ್ಲಿ ಧಾರಾವಾಹಿಯ ಪ್ರತಿ ಸಂಚಿಕೆಗೆ 9 ಲಕ್ಷ ರುಪಾಯಿ ಪಡೆದಿದ್ದರು. ಆ ಕಾಲದಲ್ಲಿ ನಿರ್ಮಿಸಲಾದ ಅತ್ಯಂತ ದುಬಾರಿ ಟಿವಿ ಕಾರ್ಯಕ್ರಮ ಎಂದು ಅದನ್ನು ಪರಿಗಣಿಸಲಾಗಿತ್ತು. ಆದರೆ ಅದರಿಂದ ದೂರದರ್ಶನಕ್ಕೆ ಲಾಭವೇ ಆಗುತ್ತಿತ್ತು. ಏಕೆಂದರೆ ಪ್ರತಿ ಗಂಟೆಗೆ 40 ಲಕ್ಷ ರುಪಾಯಿಗಳನ್ನು ಜಾಹೀರಾತಿನಿಂದಲೇ ದೂರದರ್ಶನ ಗಳಿಸುತ್ತಿತ್ತು. ಆ ಕಾಲದಲ್ಲಿ 65 ಕೋಟಿ ಜನ ರಾಮಾಯಣ ಧಾರಾವಾಹಿಯನ್ನು ವೀಕ್ಷಿಸಿದ್ದರು. ಬಿಬಿಸಿಯ ಒಂದು ವರದಿಯ ಪ್ರಕಾರ, ಆ ಸಮಯದಲ್ಲಿ 82 ಪ್ರತಿಶತ ಜನ (ಟಿವಿ ನೋಡುವವರಲ್ಲಿ) ಈ ಧಾರಾವಾಹಿಯನ್ನು ನೋಡುತ್ತಿದ್ದರಂತೆ. 2019-20ರ ಕೋವಿಡ್ ಸಂದರ್ಭದಲ್ಲಿ ಇದೇ ಧಾರಾವಾಹಿ ಮರುಪ್ರಸಾರವಾದಾಗ 250 ಕೋಟಿ ಜನ (ಎಲ್ಲ ಸಂಚಿಕೆ ಸೇರಿಸಿ) ವೀಕ್ಷಿಸಿದರು ಎಂದು ವರದಿ ಹೇಳುತ್ತದೆ. ಏಪ್ರಿಲ್ 16, 2020ರಂದು, ಒಂದೇ ದಿನ ಸುಮಾರು 7.5 ಕೋಟಿಗೂ ಹೆಚ್ಚು ಜನ ಈ ಧಾರಾವಾಹಿಯನ್ನು ನೋಡಿದ್ದು ವಿಶ್ವ ದಾಖಲೆಯಾಗಿದೆ ಎಂದರೆ ಅದರ ಜನಪ್ರಿಯತೆಯ ಅರಿವಾಗುತ್ತದೆ.

ಅಂದು ರಾಮಾಯಣ ಧಾರಾವಾಹಿಯಲ್ಲಿ ರಾಮನಾಗಿ ಅಭಿನಯಿಸಿದ ಅರುಣ್ ಗೋವಿಲ್, ಸೀತೆಯಾಗಿ ಅಭಿನಯಿಸಿದ ದೀಪಿಕಾ ಚಿಕಾಲಿಯ ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದರೆ, ಜನ ಕಾಲಿಗೆ ಬೀಳುವಷ್ಟು ಜನಪ್ರಿಯರಾಗಿದ್ದರು. ಆ ಜನಪ್ರಿಯತೆಯಿಂದಾಗಿ ಇಬ್ಬರೂ ರಾಜಕೀಯವನ್ನು ಪ್ರವೇಶಿಸಿ ಚುನಾವಣೆಯನ್ನೂ ಗೆದ್ದರು. ರಾವಣನ ಪಾತ್ರ ಮಾಡಿದ ಅರವಿಂದ ತ್ರಿವೇದಿಯೂ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದರು. ಇದು ಆ ಕಾಲದಲ್ಲಿ ರಾಮಾಯಣ ಮತ್ತು ಅದರ ಪಾತ್ರಧಾರಿಗಳು ಜನರ ಮೇಲೆ ಬೀರಿದ ಪರಿಣಾಮದ ವೈಖರಿ. ಅಂದು ತಾವು ಮಾಡುವ ಪಾತ್ರದಿಂದ, ತಮ್ಮ ಅಭಿನಯದಿಂದ ಕಲಾವಿದರು ಪ್ರಸಿದ್ಧಿಗೆ ಬರುತ್ತಿದ್ದರು.

ಆ ದಿನಗಳಲ್ಲಿ ಭಾನುವಾರ ಬೆಳಗ್ಗೆ, 'ಸೀತಾರಾಮ ಚರಿತ ಅತಿ ಪಾವನ್...' ಎಂಬ ಹಾಡು ಟಿವಿಯಲ್ಲಿ ಬರುತ್ತಿದ್ದರೆ, ಮನೆ ಮುಂದಿಯೆಲ್ಲ ಟಿವಿ ಮುಂದೆ ಜಮಾಯಿಸಿ ಕುಳಿತುಕೊಳ್ಳುತ್ತಿದ್ದರು. ಯಾವ ಕೆಲಸವೇ ಇದ್ದರೂ, ಅದೆಲ್ಲ ರಾಮಾಯಣ ಮುಗಿದ ನಂತರವೇ. ಹಿರಿಯ ನಟ ಅಶೋಕ್ ಕುಮಾರ್ ಮತ್ತು ರಮಾನಂದ ಸಾಗರ್ ಅಂದಿನ ಸಂಚಿಕೆಯ ಕಥೆಯ ಸಾರಾಂಶವನ್ನು ಹೇಳುತ್ತಿದ್ದರೆ, ನಮ್ಮದೇ ಮನೆಯ ಹಿರಿಯ ಜೀವವೊಂದು ರಾಮಾಯಣದ ಕಥೆ ಹೇಳುತ್ತಿರುವ ಅನುಭವ ಆಗುತ್ತಿತ್ತು. ಈ ಒಂದು ಅದ್ಭುತವಾದ, ಮರೆಯಲಾಗದಂಥ ಧಾರಾವಾಹಿಯನ್ನು ದೂರದರ್ಶನದಲ್ಲಿ ಬಿತ್ತರಿಸಲು ಕಾರಣರಾದವರು, ಅಂದಿನ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಕಾರ್ಯದರ್ಶಿಯಾಗಿದ್ದ ಎಸ್.ಎಸ್.ಗಿಲ್.

ಗಿಲ್ ಮೊದಲ ಬಾರಿ ರಮಾನಂದ ಸಾಗರ್ ಅವರನ್ನು ಸಂಪರ್ಕಿಸಿ, ''ರಾಮಾಯಣದ ಕಥೆಯನ್ನು ದೂರದರ್ಶನದಲ್ಲಿ ಬಿತ್ತರಿಸುವುದಕ್ಕೆ ಅನುಕೂಲವಾಗುವಂತೆ ಧಾರಾವಾಹಿಯ ರೂಪದಲ್ಲಿ ನಿರ್ಮಿಸಿ ಕೊಡಿ'' ಎಂದು ಕೇಳಿಕೊಂಡರು. ಅಸಲಿಗೆ ಅವರು ರಾಮಾಯಣ ಮತ್ತು ಮಹಾಭಾರತ ಎರಡನ್ನೂ ದೂರದರ್ಶನಕ್ಕೆ ಧಾರವಾಹಿಯಾಗಿ ಮಾಡಿಕೊಡಿ ಎಂದು ಕೇಳಿದ್ದರು. ರಾಮಾಯಣಕ್ಕಾಗಿ ರಮಾನಂದ ಸಾಗರ್ ಅವರನ್ನು ಕೇಳಿಕೊಂಡರೆ, ಮಹಾಭಾರತವನ್ನು ಮಾಡಿಕೊಡುವಂತೆ ಬಿ.ಆರ್.ಚೋಪ್ರಾ, ಅವರನ್ನು ಕೇಳಿಕೊಂಡಿದ್ದರು. ಮಹಾಭಾರತದ ತಯಾರಿಗೆ ಸುಮಾರು ನಾಲ್ಕು ವರ್ಷಗಳ ಸಮಯ ತೆಗೆದುಕೊಂಡಿತ್ತು. ಆದ್ದರಿಂದ ರಾಮಾಯಣ ಮೊದಲು ಪ್ರಸಾರವಾಯಿತು. ಅದು ಮುಗಿದ ನಂತರ ಮಹಾಭಾರತ ಪ್ರಸಾರಗೊಂಡಿತು.

ಈ ಧಾರಾವಾಹಿಗಳ ಜನಪ್ರಿಯತೆ ಹೇಗಿತ್ತು ಎಂದರೆ, ಭಾನುವಾರ ಏನಾದರೂ ವಿದ್ಯುತ್ ವ್ಯತ್ಯಯವಾದರೆ ಜನರು ಸ್ಥಳೀಯ ವಿದ್ಯುತ್ ಮಂಡಳಿಯ ಕಚೇರಿಯನ್ನು ಸುಟ್ಟು ಹಾಕುವುದಾಗಿ ಬೆದರಿಕೆ ಹಾಕುವಲ್ಲಿಯವರೆಗೆ ಹೋಗುತ್ತಿತ್ತು. ಹಿಂದಿ ಭಾಷೆಯನ್ನು ಕಡಿಮೆ ಬಳಸುವ ದಕ್ಷಿಣ ಭಾರತದ ರಾಜ್ಯಗಳಾದ ಕರ್ನಾಟಕ, ತಮಿಳು ನಾಡು, ಕೇರಳ ಮತ್ತು ಆಂಧ್ರಪ್ರದೇಶದಲ್ಲಿಯೂ ಶೇ.50ಕ್ಕೂ ಹೆಚ್ಚು ಜನ ಈ ಧಾರಾವಾಹಿಯನ್ನು ವೀಕ್ಷಿಸುತ್ತಿದ್ದರು. ಹಿಂದೂ ಸಂಸ್ಕೃತಿ ಮತ್ತು ಆಚರಣೆಯ ಕಥೆಯಾದರೂ, ಕ್ರಿಶ್ಚಿಯನ್ ಮತ್ತು ಇಸ್ಲಾಂ ಧರ್ಮದವರು ಕೂಡ ವೀಕ್ಷಿಸುತ್ತಿದ್ದ ಧಾರಾವಾಹಿ ಇದಾಗಿತ್ತು. ಮಹಭಾರತದ ಸಂಪೂರ್ಣ ಸಂಭಾಷಣೆ ಬರೆದವರು ಮುಸ್ಲಿಂ ಧರ್ಮದವರಾಗಿದ್ದ ರಾಹಿ ಮಾಸೂಮ್ ರಝಾ.

ಈ ಧಾರಾವಾಹಿ ಪ್ರಸಾರವಾಗುತ್ತಿರುವ ಸಂದರ್ಭದಲ್ಲಿ ನೂರಾರು ಜನ ಟೆಲಿವಿಷನ್ ಸೆಟ್ ಸುತ್ತಲೂ ಒಟ್ಟಾಗಿ ಕುಳಿತುಕೊಳ್ಳುತ್ತಿದ್ದರು ಎನ್ನುವುದರ ಜತೆಗೆ, ಮುಂಬೈ, ದೆಹಲಿ, ಕಲ್ಕತ್ತಾ, ಚೆನ್ನೈನಂಥ ಅತ್ಯಂತ ಜನನಿಬಿಡ ನಗರಗಳಲ್ಲಿಯೂ ರೈಲು, ಬಸ್ಸು, ಕಾರು, ಆಟೋ ಇತ್ಯಾದಿ ಸಾರ್ವಜನಿಕ ವಾಹನಗಳ ಸಂಚಾರ ನಿಂತುಹೋಗುತ್ತಿತ್ತು. ಅಂಗಡಿ-ಮುಂಗಟ್ಟುಗಳು ಮುಚ್ಚಿರುತ್ತಿದ್ದವು. ರಸ್ತೆಯೆಲ್ಲ ಭಣಗುಟ್ಟುತ್ತಿತ್ತು. ಹೆಚ್ಚು ಕಮ್ಮಿ ಇಡೀ ದೇಶವೇ ಸ್ತಬ್ಧವಾಗಿರುತ್ತಿತ್ತು. ಸರಕಾರಿ ಸಭೆಗಳನ್ನು ಕೂಡ ಮುಂದೂಡಲಾಗುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಸಚಿವ ಸಂಪುಟ ಕೂಡ ತುರ್ತುಸಭೆಗೆ ಹಾಜರಾಗಲು ವಿಫಲವಾಗುತ್ತಿತ್ತು. ಕೆಲವು ವಿದೇಶಿ ಪತ್ರಕರ್ತರು, ''ಭಾರತದಲ್ಲಿ ಭಾನುವಾರ ಬೆಳಗ್ಗೆ 9 ಗಂಟೆಯಿಂದ ಕರ್ಫ್ಯೂ ಜಾರಿಯಲ್ಲಿರುವಂತೆ ಭಾಸವಾಗುತ್ತದೆ'' ಎಂದು ವರದಿ ಮಾಡಿದ್ದೂ ಇದೆ. ಇದ್ದ ಬಿದ್ದ ಜನರೆಲ್ಲ ಟೆಲಿವಿಷನ್ ಮುಂದೆ ಜಮಾಯಿಸುತ್ತಿದ್ದರು. ಜನರು ಟಿವಿಗೆ ಹಾರ ಹಾಕುತ್ತಿದ್ದರು. ರಾಮ-ಸೀತೆ ಟಿವಿಯಲ್ಲಿ ಕಂಡಾಗ ಆರತಿ ಮಾಡುವವರೂ ಇದ್ದರು. ಧಾರಾವಾಹಿ ಆರಂಭವಾದಾಗಿನಿಂದ ಮುಗಿಯುವಲ್ಲಿಯವರೆಗೆ ಟಿವಿ ಮುಂದೆ ಕೈಮುಗಿದು ಕುಳಿತುಕೊಳ್ಳುವವರೂ ಇದ್ದರು. ಇದರ ಯಶಸ್ಸಿನಿಂದಾಗಿ, ನಂತರದ ದಿನಗಳಲ್ಲಿ ಚಾಣಕ್ಯ, ಟಿಪ್ಪು ಸುಲ್ತಾನ್ ಕುರಿತ ಧಾರಾವಾಹಿಗಳೂ ಕಿರುತೆರೆಯಲ್ಲಿ ಮೂಡಿಬಂದವು.

ಇಂಥ ಧಾರಾವಾಹಿಗಳಿಗೂ ಅಂದು ಅಪಸ್ವರ ಎದ್ದಿತ್ತು. ಕೆಲವರು ''ರಾಮಾಯಣ ಧಾರಾವಾಹಿಯು ಧಾರ್ಮಿಕ ಪಕ್ಷಪಾತದ ಮೇಲಿನ ದಶಕಗಳಷ್ಟು ಹಳೆಯದಾದ ನಿಷೇಧವನ್ನು ಉಲ್ಲಂಘಿಸಿದೆ'' ಎಂದರು. ಕೆಲವರು ''ಹಿಂದೂ ರಾಷ್ಟ್ರೀಯವಾದಿಗಳು ಈ ಅವಕಾಶವನ್ನು ಉಪಯೋಗಿಸಿಕೊಂಡರು'' ಎಂದು ಬರೆದರು. ''ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಅದರ ರಾಜಕೀಯ ಸಂಘಟನೆಯಾದ ಭಾರತೀಯ ಜನತಾ ಪಕ್ಷದ ಆಶ್ರಯದಲ್ಲಿ ಇವುಗಳು ಮೂಡಿಬಂದವು'' ಎಂಬ ಟೀಕೆಯೂ ಕೇಳಿಬಂದಿತ್ತು. ಇನ್ನು ಮಹಾಭಾರತವಂತೂ ಒಂದು ಸಾಲಿನ ಸಂಭಾಷಣೆಯಿಂದಾಗಿ ಸಂಕಷ್ಟ ಎದುರಿಸಿತ್ತು. ಅದರಲ್ಲಿ ಭರತನ ಪಾತ್ರ ಮಾಡಿದ ರಾಜ್ ಬಬ್ಬರ್ ಅವರು ಹೇಳುವ, ''ಮನುಷ್ಯ ತನ್ನ ಯೋಗ್ಯತೆಯಿಂದ ರಾಜನಾಗಬೇಕೇ ವಿನಾ ತನ್ನ ವಂಶದ ಆಧಾರದಿಂದಲ್ಲ'' ಎಂಬ ಒಂದು ಸಂಭಾಷಣೆಯ ಸಾಲು ಅಂದಿನ ಸರಕಾರದಲ್ಲಿದ್ದವರ ನಿದ್ದೆಗೆಡಿಸಿತ್ತು. ಅಂದು ರಾಜೀವ್ ಗಾಂಧಿ ಭಾರತದ ಪ್ರಧಾನಮಂತ್ರಿಯಾಗಿದ್ದರು. ಅದರೊಂದಿಗೆ ಧಾರಾವಾಹಿಯ ಆರಂಭದಲ್ಲಿ, 'ಸಮಯ' ಆಯಾ ಸಂಚಿಕೆಯ ಸಾರಾಂಶವನ್ನು ಹೇಳುವ ಮಾತುಗಳಿದ್ದವು. ಆ ಸಂದರ್ಭದಲ್ಲಿ ತೆರೆಯ ಮೇಲೆ ಒಂದು ಚಕ್ರ ತಿರುಗುತ್ತ ಇರುತ್ತಿತ್ತು. ಅದು ಜನತಾದಳ ಪಕ್ಷದ ಚಿಹ್ನೆಯನ್ನು ಹೋಲುತ್ತದೆ ಎಂದು ಆರೋಪಿಸಿದ್ದರು. ಸಂಭಾಷಣೆಯ ಆ ಒಂದು ಸಾಲು ಮತ್ತು ಒಂದು ಚಿಹ್ನೆ (ಚಕ್ರ) ಇವೆರಡನ್ನೂ ಧಾರಾವಾಹಿಯಿಂದ ತೆಗೆಯಬೇಕು ಎಂದು ಅಂದಿನ ಸರಕಾರವು ಅದರ ಪ್ರಸಾರಕ್ಕೆ ನಿರ್ಬಂಧ ಹೇರಿತ್ತು. ಈ ನಿರ್ಬಂಧ ಹೇರಿದ್ದಾದರೂ ಯಾವಾಗ? ಪ್ರಸಾರವಾಗುವ ಒಂದು ದಿನ ಮೊದಲು! ಮಹಾಭಾರತದ ನಿರ್ಮಾಪಕರಾದ ಬಿ.ಆರ್.ಚೋಪ್ರಾ, ಅಂದು ರಾತ್ರಿ ಕೋರ್ಟಿನ ಕದ ತಟ್ಟಿದರು. ಅಂದು ಮಧ್ಯರಾತ್ರಿ ಎರಡೂವರೆಯವರೆಗೆ ನ್ಯಾಯಾಲಯ ಇಬ್ಬರ ವಾದ ಕೇಳಿ, ಮಾರನೇ ದಿನ ಬೆಳಗ್ಗೆ ಪ್ರಸಾರ ಮಾಡಬಹುದು ಎಂಬ ತೀರ್ಪನ್ನು ನೀಡಿತ್ತು.

ಒಂದು ಕಾಲ ಇತ್ತು, ಕಲಾವಿದರು ತಾವು ಮಾಡುವ ಪಾತ್ರದಿಂದ ತಮ್ಮ ಅಭಿನಯದಿಂದ ಕೀರ್ತಿವಂತರಾಗುತ್ತಿದ್ದರು. ಇಂದು ಬಿಗ್ ಬಾಸ್‌ನಂಥ ಕಾರ್ಯಕ್ರಮದಲ್ಲಿ ಪ್ರವೇಶ ಪಡೆಯಬೇಕಾದರೆ (ಅಪ)ಕೀರ್ತಿ ಪಡೆದಿರಬೇಕು. ಅಂದು ಮೊದಲ ಬಾರಿಗೆ ಗಿಲ್ ಅವರು ರಮಾನಂದ ಸಾಗರ್ ಅವರನ್ನು ಧಾರಾವಾಹಿ ನಿರ್ಮಿಸಿಕೊಡುವಂತೆ ಕೇಳಿಕೊಂಡಾಗ, ''ನಮ್ಮ ಮಹಾಕಾವ್ಯಗಳು ನೈತಿಕ ಮತ್ತು ಸಾಮಾಜಿಕ ಮೌಲ್ಯಗಳ ಭಂಡಾರ'' ಎಂದಿದ್ದರು.

ಆದರೆ ಇಂದು ಮನೆಯಲ್ಲಿ ನಡೆಯುವ ಜಗಳ ಸಾಲದು ಎಂಬಂತೆ ಟಿವಿಯಲ್ಲಿಯೂ ಜಗಳ. ಅದಕ್ಕೆ 'ದೊಡ್ಡ ಮನೆ' ಎಂಬ ಹೆಸರು ಬೇರೆ! ಅಂಥ ದೊಡ್ಡ ಮನೆಯಲ್ಲಿ ಬೇಕೆಂದೇ ಒಬ್ಬರಿಗೆ ಒಬ್ಬರು ಕಾಟ ಕೊಡುವುದು, ಒಬ್ಬರ ಕಾಲನ್ನು ಇನ್ನೊಬ್ಬರು ಎಳೆಯುವುದು, ಇದ್ದಕ್ಕಿದ್ದಂತೆ ಕಿರುಚುವುದು, ಮೈಮೇಲೆ ಎಗರಿ ಹೋಗುವುದು, ಕರ್ಮ... ಕರ್ಮ... ಅದನ್ನೂ ಜನ ನೋಡುತ್ತಾರಲ್ಲ! ಅಸಲಿಗೆ ಇನ್ನೊಬ್ಬರ ಮನೆಯಲ್ಲಿ ಇಣುಕಿ ನೋಡುವುದೇ ತಪ್ಪು. ಅಂಥದ್ದರಲ್ಲಿ ಇನ್ನೊಬ್ಬರ ಮನೆಯಲ್ಲಿ ನಡೆಯುವ ಜಗಳ, ಕೊಂಕುಮಾತು, ಹಾತಾಪಾಯಿ, ಇದನ್ನೆಲ್ಲ ಗಂಟೆಗಟ್ಟಲೆ ನೋಡುವ ಅವಸ್ಥೆ! ಇದನ್ನೆಲ್ಲ ನೋಡುತ್ತೇವೆ ಎಂದಾದರೆ, ನಾವು ಯಾರನ್ನು ದೂಷಿಸಬೇಕು? ಉಳಿದ ಧಾರಾವಾಹಿಗಳ ವಿಷಯಗಳೂ ಅಷ್ಟಕಷ್ಟೇ! ಅವುಗಳ ವಿಷಯ ಮಾತನಾಡದಿದ್ದರೇ ಒಳಿತು. ಎಲ್ಲೋ ಆಗೊಮ್ಮೆ-ಈಗೊಮ್ಮೆ ಕೃಷ್ಣ, ಹನುಮಂತ, ಶಿವ ಇತ್ಯಾದಿ ಧಾರಾವಾಹಿಗಳು ನುಸುಳಿಕೊಂಡು ಬರುತ್ತಿವೆಯಾದರೂ, ಮೊದಲಿನ ರಾಮಾಯಣ, ಮಹಾಭಾರತ, ಚಾಣಕ್ಯದಂಥ ಧಾರಾವಾಹಿಯಷ್ಟು ಅಥವಾ ಇಂದಿನ ಬಿಗ್ ಬಾಸ್‌ನಂಥ ರಿಯಾಲಿಟಿ ಶೋಗಳಷ್ಟು ಜನಪ್ರಿಯವಾಗುವುದಿಲ್ಲ ಎಂದರೆ ನಮ್ಮನ್ನು ನಾವೇ ಶಪಿಸಿಕೊಳ್ಳಬೇಕು ಅಷ್ಟೇ!

ಅಂದು, ಕೇವಲ ಒಂದು ವಾಕ್ಯ ಸರಿ ಇಲ್ಲವೆಂಬ ಕಾರಣಕ್ಕಾಗಿ ಧಾರಾವಾಹಿಯನ್ನು ತಡೆಹಿಡಿದಿದ್ದಂಥ ಸರಕಾರ ಅಥವಾ ಅಧಿಕಾರಿವರ್ಗ, ಇಂದು ಮನೆಯ ಒಳಗೇ ಮೈ-ಕೈ ಮಿಲಾಯಿಸಿ ಹೊಡೆದಾಟ ಮಾಡಿಕೊಂಡರೂ, ಹೇಳುವವರಿಲ್ಲ, ಕೇಳುವವರಿಲ್ಲ. ನಮ್ಮವರಿಗೆ ಸ್ಪರ್ಧಿಯ ಕೊರಳಲ್ಲಿರುವ ಹುಲಿಯ ಉಗುರು ಕಾಣುತ್ತದೆ. ಆದರೆ ಹುಲಿಯಂತೆ ಪ್ರತಿಸ್ಪರ್ಧಿಯ ಮೇಲೆ ಎಗರಿ ಹೋಗುವವರು ಇವರ ಕಣ್ಣಿಗೆ ಬೀಳುವುದಿಲ್ಲ. ಬಿದ್ದರೂ, ಯಾರೂ ಮಾತನಾಡುವುದಿಲ್ಲ. ಯಾಕೆಂದರೆ ಅದರಿಂದಾಗಿಯೇ ಈ 'ಶೋ' ನಡೆಯಬೇಕು, ನಡೆಯುತ್ತದೆ.

ರಾಮಾಯಣ ಮತ್ತು ಮಹಾಭಾರತಗಳು ನೈತಿಕ ಮತ್ತು ಸಾಮಾಜಿಕ ಮೌಲ್ಯಗಳ ಆಗರ ಎಂಬುದು ಅಂದಿನ ಅಧಿಕಾರಿ ಗಿಲ್ ಅವರ ಅಂಬೋಣವಾಗಿತ್ತು. ಅದರ ಸಂದೇಶವು ಜಾತಿ, ಮತಗಳನ್ನು ಮೀರಿದ್ದು, ಸಾರ್ವತ್ರಿಕವಾದದ್ದು ಎಂದು ಅವರು ನಂಬಿದ್ದರು. ಅದಕ್ಕೆ ರಮಾನಂದ ಸಾಗರ್ ಅವರು ''ಆಧುನಿಕ ಯುಗದಲ್ಲಿ ರಾಮಾಯಣ ಮತ್ತು ಮಹಾಭಾರತದಂಥ ಮಹಾಕಾವ್ಯಗಳನ್ನು ಕಟ್ಟಿಕೊಡುವುದು, ಅದರ ಸಂದೇಶವನ್ನು ಆಧ್ಯಾತ್ಮಿಕ ಮತ್ತು ಭಾವನಾತ್ಮಕ ಅಂಶಗಳಿಗೆ ಹೊಂದಿಸುವುದು ನಿಜವಾದ ಸವಾಲಿನ ಕೆಲಸ'' ಅಂದಿದ್ದರು. ರಾಮಾಯಣ, ಮಹಾಭಾರತ ಧಾರಾವಾಹಿಯನ್ನು ನಿರ್ಮಿಸುವ ಪೂರ್ವದಲ್ಲಿ ಸಲಹೆ, ಸೂಚನೆ ನೀಡುವುದಕ್ಕೆ ಗಿಲ್ ಅವರು ರಮಾನಂದ ಸಾಗರ್ ಮತ್ತು ಬಿ.ಆರ್.ಚೋಪ್ರಾ, ಸೇರಿದಂತೆ ತಜ್ಞರು ಮತ್ತು ವಿದ್ವಾಂಸರ ಸಮಿತಿಯನ್ನು ರಚಿಸಿದ್ದರಂತೆ. ಒಮ್ಮೆ, ಯೋಚಿಸಿ ಈಗಿನ ಬಿಗ್ ಬಾಸ್‌ನಂಥ ಕಾರ್ಯಕ್ರಮಕ್ಕೆ ತಜ್ಞರು ಮತ್ತು ಪರಿಣತರ ಸಮಿತಿಯನ್ನು ರಚಿಸಿದರೆ ಆ ಸಮಿತಿಯಲ್ಲಿ ಯಾರೆಲ್ಲ ಸ್ಥಾನ ಪಡೆಯಬಹುದು ಅಥವಾ ಯಾರನ್ನೆಲ್ಲ ಕರೆಯಬೇಕಾಗಿತ್ತು? ಇದನ್ನು ನಿರ್ಮಿಸುವವರಿಗೆ ಯಾವ ಸವಾಲು ಇದ್ದೀತು? ಇದು ಖಾಸಗಿ ವಾಹಿನಿಯಲ್ಲಿ ಬರುವ ಕಾರ್ಯಕ್ರಮವೇ ಇರಬಹುದು. ನೋಡುವವರು ನಮ್ಮ ದೇಶದ ಪ್ರಜೆಗಳೇ ಅಲ್ಲವೇ? ಅದಕ್ಕೂ ಒಂದು ಕಡಿವಾಣ ಬೇಕಲ್ಲವೇ?

ನಾರದ ಸಂಚಾರ

ಕಲಹಪ್ರಿಯ
naadigru@gmail.com

ಹೀಗಿರ್ತಾರೆ ಖತರ್ನಾಕ್‌ಗಳು

ಇದು 'ಸುಳ್‌ಸುದ್ದಿ' ಅಲ್ಲ, ದೇಶದ ಉತ್ತರದ ತುದಿಯಿಂದ ಬಂದಿರುವ 'ಕಳ್‌ಸುದ್ದಿ'! ಅಂದರೆ, ಮೊಬೈಲ್‌ಫೋನ್ ಕಳ್ಳತನದಲ್ಲಿ ಅಪ್ರಾಪ್ತರನ್ನು ಒಳಗೊಂಡ ದಂಧೆಯ ಸುದ್ದಿ. ದೆಹಲಿ ಪೊಲೀಸರು ಈ ಪ್ರಕರಣವನ್ನು ಭೇದಿಸಿದ್ದಾರೆ ಎಂಬುದು ಹೆಮ್ಮೆಯ ಸಂಗತಿ. ಅಂದ ಹಾಗೆ, ಈ ಕಳ್ಳತನದ ಜಾಲ ಕಾರ್ಯಾಚರಿಸುತ್ತಿದ್ದುದು ಹೀಗೆ: ಈ 'ಕತ್ತರಿ ಕೆಲಸ'ದ ಮಾಸ್ಟರ್‌ಮೈಂಡ್ ಎನಿಸಿಕೊಂಡಾತ ಜಾರ್ಖಂಡ್ ರಾಜ್ಯದವನಂತೆ. ಈತ ಅಲ್ಲಿನ ಬಾಲಾಪರಾಧಿಗಳಿಗೆ ಆಮಿಷವೊಡ್ಡಿ ದೆಹಲಿಗೆ ಕಳಿಸುತ್ತಿದ್ದನಂತೆ. ಅವರ ಕೆಲಸವೇನು ಗೊತ್ತೇ? ಜನರಿಂದ ತುಂಬಿ ಗಿಜಿಗಿಜಿ ಎನ್ನುತ್ತಿರುವ ಮಾರುಕಟ್ಟೆಗಳು-ಮಾಲ್‌ಗಳು, ರೈಲು-ಬಸ್ ನಿಲ್ದಾಣಗಳಿಗೆ ತೆರಳಿ, ಅಲ್ಲಿ ಅಮಾಯಕರಂತೆ ಓಡಾಡಿಕೊಂಡು, 'ದುಡ್' ಇರೋ 'ದೊಡ್' ಮನುಷ್ಯರು ತಮ್ಮ 'ದೊಡ್ಡಸ್ತಿಕೆಯ' ಸಂಕೇತವಾಗಿ ಖರೀದಿಸಿ ಜೇಬಿನಲ್ಲಿಟ್ಟುಕೊಂಡಿರೋ ಅತ್ಯಾಧುನಿಕ ಮತ್ತು ಭಾರಿ ಬೆಲೆಬಾಳುವ ಸ್ಮಾರ್ಟ್‌ಫೋನುಗಳನ್ನು ಕದಿಯೋದು!

ಹೀಗೆ ಭಾರಿ ಬೆಲೆಯ ಮಾಲನ್ನು ಆ ಬಾಲಾಪರಾಧಿಗಳು ಕದ್ದರೂ ಅದಕ್ಕೆ ಹೆಚ್ಚುವರಿಯಾಗಿ 'ಬೋನಸ್' ಏನೂ ಅವರಿಗೆ ಸಿಗುತ್ತಿರಲಿಲ್ಲವಂತೆ; ಬದಲಿಗೆ, ಪ್ರತಿ ಕಳ್ಳತನಕ್ಕೆ ಆ ಮಾಸ್ಟರ್‌ಮೈಂಡ್ 'ದೊಡ್ಡ ಕಳ್ಳ' ಕೊಡುತ್ತಿದ್ದುದು 3,000 ರುಪಾಯಿ ಮಾತ್ರವಂತೆ. ಜಾರ್ಖಂಡ್‌ನಿಂದ ದೆಹಲಿಗೆ ರೈಲಿನಲ್ಲಿ ಟಿಕೆಟ್‌ರಹಿತವಾಗಿ ಪಯಣಿಸೋದು, ಬಿಡುವಿಲ್ಲದ ಚಟುವಟಿಕೆಗಳಲ್ಲಿ ವ್ಯಸ್ತವಾಗಿರುವ ಮಾರುಕಟ್ಟೆಗಳನ್ನು ನುಗ್ಗೋದು, ತಮ್ಮ 'ಕೈಚಳಕ'ವನ್ನು ಮೆರೆದ ನಂತರ, ಶಿವ ಎಂಬ ಆ ಮಾಸ್ಟರ್‌ಮೈಂಡ್‌ಗೆ ಕದ್ದ ಮಾಲುಗಳನ್ನು ಹಸ್ತಾಂತರಿಸಿ, ಜಾರ್ಖಂಡ್‌ಗೆ ತಣ್ಣಗೆ ಮರಳಿಬಿಡೋದು ಈ ಬಾಲಾಪರಾಧಿಗಳ 'ಕುಕಾರ್ಯ'ಶೈಲಿ ಆಗಿತ್ತಂತೆ.

ಎಂತೆಂಥಾ ಖತರ್ನಾಕ್‌ಗಳು ಇರ್ತಾರಲ್ವಾ?

'ಟೆನ್ಷನ್-ಫ್ರೀ' ಟ್ರಂಪ್!

ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನಿಜಾರ್ಥದಲ್ಲಿ 'ವರ್ಣರಂಜಿತ' ವ್ಯಕ್ತಿ ಅನ್ನೋದು ನಿಮಗೆ ಗೊತ್ತಿರುವ ಸಂಗತಿಯೇ. ಅದರಲ್ಲೂ 'ನೀಲಿ' ಬಣ್ಣವನ್ನು ಒಳಗೊಂಡಿರುವ ವಸ್ತುಗಳೆಂದರೆ, ಅಂದರೆ ನೀಲಿ ಸೂಟು, ನೀಲಿ ಪೆನ್ನು, ನೀಲಿ ಕಾರು, ನೀಲಿ ಚಿತ್ರ... ಇತ್ಯಾದಿಗಳೆಂದರೆ ಅವರಿಗೆ ಶಾನೆ ಇಷ್ಟವಂತೆ ಎಂದೆಲ್ಲಾ ಅವರಿವರು ಬಾಯಿಗೆ ಬಂದಂತೆ ಮಾತಾಡುವುದು ಕಲಹಪ್ರಿಯ ನಾರದರ ಕಿವಿಗೂ ಬಿದ್ದಿದ್ದುಂಟು. ಈ ಮಾತಿಗೆ ಪುಷ್ಟಿ ನೀಡುವಂತೆ, ಕಳೆದ ಬಾರಿಯ ಅಧ್ಯಕ್ಷೀಯ ಚುನಾವಣೆ ವೇಳೆ, ''ನಮ್ಮಿಬ್ಬರ ನಡುವಿನ ಲೈಂಗಿಕ ಸಂಬಂಧದ ಕುರಿತು ಮಾತಾಡ್‌ಬ್ಯಾಡ ಕಣಮ್ಮೀ...'' ಅಂತ ಟ್ರಂಪ್ ಮಹಾಶಯರು ನೀಲಿಚಿತ್ರಗಳ ನಟಿಯೊಬ್ಬಳಿಗೆ ಪುಸಲಾಯಿಸಿ ಹಣವನ್ನೂ ನೀಡಿದ್ದರು ಎಂಬ ಪ್ರಕರಣ ಅವರ ಮೇಲೆ ದಾಖಲಾಗಿದ್ದು ನಿಮಗೆ ಗೊತ್ತು. ಆದರೆ ಇದೀಗ ಬಂದಿರೋ ಸುದ್ದಿಯ ಪ್ರಕಾರ, ಟ್ರಂಪ್ ಮಹಾಶಯರು ಈ ಪ್ರಕರಣದಲ್ಲಿ ನೆಮ್ಮದಿಯ ನಿಟ್ಟುಸಿರು ಬಿಡುವಂತೆ ಆಗಿದೆಯಂತೆ. ಕಾರಣ, ಅಲ್ಲಿನ ಮ್ಯಾನ್‌ಹಟನ್ ಕ್ರಿಮಿನಲ್ ಕೋರ್ಟ್‌ನ ನ್ಯಾಯಾಧೀಶರು ಈ ಪ್ರಕರಣದಿಂದ ಟ್ರಂಪ್ ಅವರ ಬೇಷರತ್ ಬಿಡುಗಡೆಯನ್ನು ಘೋಷಿಸಿದ್ದಾರಂತೆ. ಇದರನ್ವಯ, ನಮ್ ಟ್ರಂಪಣ್ಣ ಜೈಲಿಗೂ ಹೋಗಂಗಿಲ್ಲ, ದಂಡವನ್ನೂ ಕಟ್ಟಂಗಿಲ್ಲ ಹೋಗ್ ಅತ್ಲಾಗೆ...! ಜತೆಗೆ ಈ ತೀರ್ಪಿನಿಂದಾಗಿ, ಸದ್ಯದಲ್ಲೇ ನಡೆಯಲಿರುವ ತಮ್ಮ ಅಧಿಕಾರ ಸ್ವೀಕಾರ ಸಮಾರಂಭಕ್ಕೆ ಸಂಬಂಧಿಸಿ ಟ್ರಂಪಣ್ಣ ನಿರಾಳತೆಯನ್ನೂ ಅನುಭವಿಸಲಿದ್ದಾರೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲವಷ್ಟೇ. ಅಟ್‌ಲೀಸ್ಟ್, ಅಧಿಕಾರ ಸ್ವೀಕರಿಸಿದ ನಂತರ ಕೂರೋ ಸಿಂಹಾಸನವಾದರೂ 'ನೀಲಿಬಣ್ಣ'ದಲ್ಲಿ ಇರದಂತೆ ಟ್ರಂಪಣ್ಣ ನೋಡ್ಕೊಂಡ್ರೆ ಸಾಕು ಅನ್ನೋದು ನಾರದರ ಸಜೆಷನ್ನು!

ಮಾಹಿತಿ ಹಕ್ಕು ಕಾಯಿದೆ: ದುರುಪಯೋಗಕ್ಕೆ ಬೇಕು ತಡೆ

ಪ್ರಜಾಪ್ರಭುತ್ವದಲ್ಲಿ ಪಾರದರ್ಶಕತೆ ಅತ್ಯಗತ್ಯ. ಜತೆಗೆ ಭ್ರಷ್ಟಾಚಾರ ನಿಯಂತ್ರಣ, ಸರಕಾರಿ ಇಲಾಖೆಗಳ ಉತ್ತರದಾಯಿತ್ವ ಅಷ್ಟೇ ಮಹತ್ವದ್ದು. ಆದರೆ ಗೌಪ್ಯತೆ ಹಾಗೂ ಆಡಳಿತಾತ್ಮಕ ಸಮಸ್ಯೆಗಳಿಂದಾಗಿ ಕೆಲ ಸೂಕ್ಷ್ಮ ವಿಷಯಗಳನ್ನು ಬಹಿರಂಗಪಡಿಸಲು ಆಗಲಿಕ್ಕಿಲ್ಲ. ಇವೆರಡೂ ಅಂಶಗಳನ್ನು ಸರಿದೂಗಿಸಿ ನಾಗರಿಕರಿಗೆ ಕೆಲವು ಮಾಹಿತಿಗಳನ್ನು ನೀಡುವುದು ಅವಶ್ಯವೆಂದು ಮನಗಂಡು ಮಾಹಿತಿ ಹಕ್ಕು ಕಾಯಿದೆಯನ್ನು ಜಾರಿಮಾಡಲಾಗಿದೆ.

ನ್ಯಾಯ ಕಾನೂನು

ತಿಮ್ಮಣ್ಣ ಭಾಗ್ವತ್
vveditoped@gmail.com

ರಸ್ತೆ ಮಾಡಿ ಆರು ತಿಂಗಳಾಗಿಲ್ಲ, ಗುಂಡಿ ಬಿದ್ದೋಯ್ತು. ಹಳ್ಳದ ಒಡ್ಡು ಮೊದಲ ಮಳೆಗೇ ಕೊಚ್ಚಿಕೊಂಡು ಹೋಯ್ತು. ಕಂಟ್ರಾಕ್ಟರ್ ಪತ್ತೆ ಇಲ್ಲ. ಇಲಾಖೆಯವರು ಕ್ಯಾರೇ ಎನ್ನುವುದಿಲ್ಲ. ಈ ಕಳಪೆ ಕಾಮಗಾರಿಗೆ ತೆರಿಗೆದಾರರ ಹಣ ಎಷ್ಟು ಖರ್ಚಾಗಿದೆ? ಟೆಂಡರ್ ಪಡೆದ ಪುಣ್ಯಾತ್ಮ ಕಂಟ್ರಾಕ್ಟರ್ ಯಾರು? ಅವನ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ? ಎಂಬ ಯಾವ ಮಾಹಿತಿಯೂ ಇಲ್ಲದೆ ಕೇವಲ ಕಾಲಹರಣಕ್ಕೆ ಸುದ್ದಿ ಹೇಳುವುದನ್ನು ಬಿಟ್ಟರೆ ಜನಸಾಮಾನ್ಯರ ಕೈಯಲ್ಲಿ ಯಾವುದೇ ಪರಿಹಾರವಿರಲಿಲ್ಲ. ಆದರೆ ಮಾಹಿತಿ ಹಕ್ಕು ಕಾಯಿದೆ 2005ರ ಅಡಿಯಲ್ಲಿ ಅರ್ಜಿ ಹಾಕಿದರೆ ಅಧಿಕಾರಿಗಳು ಕ್ಯಾ'ರೇ' ಅಲ್ಲ, ಕ್ಯಾ 'ಜೀ' ಎನ್ನಬೇಕಾಗುತ್ತದೆ. 30 ದಿನದಲ್ಲಿ ಮಾಹಿತಿ ನೀಡದಿದ್ದರೆ ದಂಡ ನೀಡಬೇಕಾಗುತ್ತದೆ.

ಪ್ರಜಾಪ್ರಭುತ್ವದಲ್ಲಿ ಮಾಹಿತಿವಂತ ನಾಗರಿಕರು ಮತ್ತು ಪಾರದರ್ಶಕತೆ ಅತ್ಯಗತ್ಯ. ಜತೆಗೆ ಭ್ರಷ್ಟಾಚಾರ ನಿಯಂತ್ರಣ ಮತ್ತು ಸರಕಾರಿ ಇಲಾಖೆಗಳ ಉತ್ತರದಾಯಿತ್ವ ಅಷ್ಟೇ ಮಹತ್ವದ್ದು. ಆದರೆ ಗೌಪ್ಯತೆ ಹಾಗೂ ಆಡಳಿತಾತ್ಮಕ ಸಮಸ್ಯೆಗಳಿಂದಾಗಿ ಕೆಲವು ಸೂಕ್ಷ್ಮ ವಿಷಯಗಳನ್ನು ಬಹಿರಂಗಪಡಿಸುವುದು ಕಾರ್ಯಸಾಧ್ಯವಾಗಲಿಕ್ಕಿಲ್ಲ. ಇವೆರಡೂ ಅಂಶಗಳನ್ನು ಸರಿದೂಗಿಸಿ ಪ್ರಜಾಪ್ರಭುತ್ವದ ಆದರ್ಶಗಳನ್ನು ಗಮನದಲ್ಲಿರಿಸಿ ನಾಗರಿಕರಿಗೆ ಸರಕಾರಿ ಅಧಿಕಾರಿಗಳ ನಿಯಂತ್ರಣದಲ್ಲಿರುವ ಕೆಲವು ಮಾಹಿತಿಗಳನ್ನು ನೀಡುವುದು ಅವಶ್ಯವೆಂದು ಮನಗಂಡು ಮಾಹಿತಿ ಹಕ್ಕು ಕಾಯಿದೆಯನ್ನು 15ನೇ ಜೂನ್ 2005ರಿಂದ ಜಾರಿಮಾಡಲಾಯಿತು.

ಸ್ಥೂಲವಾಗಿ ಹೇಳುವುದಾದರೆ, ಈ ಕಾಯಿದೆಯನ್ವಯ, ಅರ್ಜಿ ಸಲ್ಲಿಸಿದ 30 ದಿನಗಳ ಒಳಗಾಗಿ ಅರ್ಜಿದಾರರು ಕೇಳಿದ ಮಾಹಿತಿಯನ್ನು ಕೊಡುವುದು ಸರಕಾರ ಅಥವಾ ಅದರ ಅಧೀನ ಸಂಸ್ಥೆಗಳ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೊಣೆಯಾಗಿರುತ್ತದೆ. ತಪ್ಪಿದರೆ ಅಥವಾ ಒದಗಿಸಿದ ಮಾಹಿತಿ ಸರಿಯಾಗಿರದಿದ್ದರೆ ಎರಡು ಹಂತದ ಮೇಲ್ಮನವಿಗೆ ಅವಕಾಶವಿದೆ. ದಂಡ ವಿಧಿಸುವ ಅಧಿಕಾರವನ್ನು ಕೇಂದ್ರ ಮಾಹಿತಿ ಆಯೋಗವು ಹೊಂದಿರುತ್ತದೆ. ಕೇಂದ್ರ ಹಾಗೂ ರಾಜ್ಯಗಳ ಮಾಹಿತಿ ಆಯೋಗಗಳ/ಆಯುಕ್ತರ ನಿಯುಕ್ತಿ, ಅಧಿಕಾರ ವ್ಯಾಪ್ತಿ ಮುಂತಾದ ವಿಷಯಗಳನ್ನು ಈ ಕಾಯಿದೆ ನಿರ್ದೇಶಿಸುತ್ತದೆ. ಆದರೆ ಕಲಂ 8 ಮತ್ತು 11ರನ್ವಯ, ದೇಶದ ಸಾರ್ವಭೌಮತೆ, ಸಮಗ್ರತೆ, ರಕ್ಷಣೆ, ವಿಚಕ್ಷಣಾ ವ್ಯವಸ್ಥೆಗಳು, ವಿದೇಶ ವ್ಯವಹಾರಗಳ ವಿಷಯಗಳು, ವೈಜ್ಞಾನಿಕ ಅಥವಾ ಆರ್ಥಿಕ ಹಿತಾಸಕ್ತಿ, ಕೋರ್ಟ್ ನಿರ್ಬಂಧ, ವ್ಯಕ್ತಿಗಳ ಅಥವಾ ಸಂಸ್ಥೆಗಳ ವಾಣಿಜ್ಯ ಹಿತಾಸಕ್ತಿ, ವಿಶ್ವಾಸಾರ್ಹ ಸಂಬಂಧ, ಅಪರಾಧಿಗಳ ವಿಚಾರಣೆಯ ವಿಷಯಗಳು, ಮಂತ್ರಿಮಂಡಲದ ಠರಾವುಗಳು, ಹಾಗೂ ಮೂರನೇ ವ್ಯಕ್ತಿಯ ಮಾಹಿತಿಗಳು, ಮುಂತಾದವು ವಿನಾಯತಿ ಹೊಂದಿರುತ್ತವೆ. ಕಲಂ 24 ಮತ್ತು ಅನುಬಂಧ 2 ರಲ್ಲಿ ನಮೂದಿಸಿದ ಕೆಲವು ಇಲಾಖೆಗಳು ಈ ಕಾಯಿದೆಯ ವ್ಯಾಪ್ತಿಗೆ ಒಳಪಡುವುದಿಲ್ಲ.

ಮಾಹಿತಿ ನೀಡಲು 30 ದಿನ, ಪ್ರತಿ ಮೇಲ್ಮನವಿಗೆ 45 ದಿನ, ಹೀಗೆ ಕಾಲಮಿತಿಯನ್ನು ವಿಧಿಸಲಾಗಿದೆ. ಈ ಕಾಯಿದೆಯಡಿಯಲ್ಲಿ ಕೇಂದ್ರ ಸರಕಾರ ಮತ್ತು ವಿವಿಧ ರಾಜ್ಯ ಸರಕಾರಗಳು ನಿಯಮಾವಳಿಗಳನ್ನು ರೂಪಿಸಿವೆ. ಆದಷ್ಟು ಹೆಚ್ಚಿನ ಮಾಹಿತಿ ಹಾಗೂ ವರದಿಗಳನ್ನು ಅಂತರ್ಜಾಲದಲ್ಲಿ ಪ್ರಕಟಿಸಬೇಕೆಂಬ ನಿಯಮವೂ ಇದೆ. ಮಾಹಿತಿಯನ್ನು ಒದಗಿಸುವುದು ಕಡ್ಡಾಯವಾಗಿರುವುದರಿಂದ ಮತ್ತು ಮಾಹಿತಿ ಬಹಿರಂಗವಾದಾಗ ಅದರ ಆಧಾರದಲ್ಲಿ ವಿಮರ್ಶೆ, ಸಾರ್ವಜನಿಕ ಚರ್ಚೆ ಹಾಗೂ ಮಾಧ್ಯಮಗಳಲ್ಲಿ ವರದಿ/ಚರ್ಚೆ ನಡೆಯುವುದರಿಂದ ಅಧಿಕಾರಿಗಳು ಹೆಚ್ಚಿನ ಜಾಗರೂಕತೆಯಿಂದ ಕಾರ್ಯನಿರ್ವಹಿಸಬೇಕಾಗುತ್ತದೆ, ಅವರ ಉತ್ತರದಾಯಿತ್ವ ಹೆಚ್ಚುವುದರಿಂದ ಕಾಯಿದೆಯ ಮೂಲ ಉದ್ದೇಶ ಬಹಳಮಟ್ಟಿಗೆ ಯಶಸ್ಸು ಕಂಡಿದೆ ಎಂದೇ ಹೇಳಬೇಕು.

ದುರುಪಯೋಗ: 'ಸೂರ್ಯ ರಶ್ಮಿ' (sun shine) ಕಾಯಿದೆ ಎಂದು ಹೊಗಳಿಸಿಕೊಂಡ ಈ ಕಾಯಿದೆಯ ಸಮರ್ಪಕ ಉಪಯೋಗ ದೇಶದ ಹಿತದೃಷ್ಟಿಗೆ ಪೂರಕ. ಆದರೆ ಅನೇಕ ಜನೋಪಯೋಗಿ ಕಾಯಿದೆಗಳಂತೆ ಈ ಕಾಯಿದೆಯನ್ನೂ ದುರುಪಯೋಗ ಮಾಡಿದ ಅನೇಕ ಪ್ರಕರಣಗಳು ನ್ಯಾಯಾಲಯಗಳ ಗಮನಕ್ಕೆ ಬಂದಿವೆ.

ಶ್ರೀಮತಿ ಉಮಾಕಾಂತಿ ವರ್ಸಸ್ ನವೋದಯ ವಿದ್ಯಾಲಯ ಸಮಿತಿ, ನವದೆಹಲಿ: (ಕೇಂದ್ರೀಯ ಮಾಹಿತಿ ಆಯೋಗ):

ಈ ಪ್ರಕರಣದಲ್ಲಿ 188 ಪುಟಗಳ ಅರ್ಜಿಯಲ್ಲಿ 375 ವಿಷಯಗಳ ಕುರಿತು 141 ಫಾರ್ಮ್‌ಗಳಲ್ಲಿ 20 ವರ್ಷಗಳ ಅವಧಿಗೆ ಸಂಬಂಧಿಸಿದ ಮಾಹಿತಿಯನ್ನು ಕೇಳಲಾಗಿತ್ತು. ಇಲಾಖೆಯಲ್ಲಿ ಕೆಲಸ ಮಾಡುವ ಸಾವಿರಾರು ನೌಕರರ ವಾರ್ಷಿಕ ಗೌಪ್ಯ ವರದಿಗಳು, ಟೈಮ್-ಟೇಬಲ್, ಮುಂಗಡಗಳು, 1996ರಿಂದ ಎಲ್ಲಾ ಸಿಬ್ಬಂದಿಗಳಿಗೆ ನೀಡಲಾದ ಪಗಾರ ವಿವರ, ಸಿಬ್ಬಂದಿ ವಸತಿ ಗೃಹಗಳು ಮುಂತಾದ ಅನೇಕ ಮಾಹಿತಿಗಳನ್ನು ಕೋರಿದ್ದರು. ಪ್ರಕರಣ ಅಂತಿಮವಾಗಿ ಕೇಂದ್ರೀಯ ಮಾಹಿತಿ ಆಯೋಗದ ಮುಂದೆ ವಿಚಾರಣೆಗೆ ಬಂದಾಗ ತಿಳಿದ ಸಂಗತಿಯೆಂದರೆ ಸದರಿ ದೂರುದಾರರನ್ನು ವರ್ಗಾವಣೆ ಮಾಡಿದ್ದರಿಂದ ಅವರು ಇಲಾಖೆಯ ವಿರುದ್ಧ ಅಸಮಾಧಾನಗೊಂಡಿದ್ದರು. ಅವರು ತಮ್ಮ ಮತ್ತು ತಮ್ಮ ಹೆಂಡತಿಯ ಹೆಸರಿನಲ್ಲಿ ಪದೇ ಪದೆ ಅರ್ಜಿ ಸಲ್ಲಿಸಿ ಇಲಾಖೆಗೆ ಅನವಶ್ಯಕ ಪತ್ರವ್ಯವಹಾರ, ಖರ್ಚು, ತಿರುಗಾಟ ಉಂಟಾಗುವಂತೆ ಮಾಡುವ ಉದ್ದೇಶದಿಂದ ಕಾಯಿದೆಯನ್ನು ದುರುಪಯೋಗ ಮಾಡಿಕೊಳ್ಳುತ್ತಿರುವುದು ಮಾನ್ಯ ನ್ಯಾಯಾಲಯದ ಗಮನಕ್ಕೆ ಬಂತು. ದೂರುದಾರರ ಅರ್ಜಿಯನ್ನು ತಿರಸ್ಕರಿಸಿದ ಆಯೋಗ, ''ಈ ಪ್ರಕರಣ ಬಹುಶಃ ಸದರಿ ಕಾಯಿದೆಯ ದುರುಪಯೋಗದ ಅತಿಕೆಟ್ಟ ಪ್ರಕರಣ. ಆರ್.ಟಿ.ಐ. ಕಾಯಿದೆಯನ್ನು ಉದ್ಯೋಗದಾತರ ವಿರುದ್ಧ ನೌಕರರು ಸೇಡು ತೀರಿಸಿಕೊಳ್ಳುವ ಸಾಧನವಾಗಿ ಬಳಸಿಕೊಳ್ಳುವಂತಿಲ್ಲ'' ಎಂದು ಅಭಿಪ್ರಾಯ ಪಟ್ಟಿತು.

ಪಾರದರ್ಶಿತ ಪಬ್ಲಿಕ್ ವೆಲ್ಫೇರ್ ಫೌಂಡೇಶನ್ ವರ್ಸಸ್ ಭಾರತ ಸರಕಾರ: ಇದು ಉದಾತ್ತ ಉದ್ದೇಶ ಹೊಂದಿದ ಕಾಯಿದೆಯೊಂದನ್ನು ಅತಿ ಕೀಳುಮಟ್ಟದಲ್ಲಿ ದುರುಪಯೋಗ ಮಾಡಿಕೊಂಡ ಕೆಟ್ಟ ಪ್ರಕರಣ. ಅರ್ಜಿದಾರ ಎನ್‌ಜಿಒ, ದೆಹಲಿ ಮಹಾನಗರ ಪಾಲಿಕೆಯ ಇಬ್ಬರು ಎಂಜಿನಿಯರುಗಳ ನಿಜವಾದ ತಂದೆ-ತಾಯಿ ಯಾರು, ಅವರ ತಂದೆ ಯಾರು ಎಂಬುದಕ್ಕೆ ಡಿಎನ್‌ಎ ಟೆಸ್ಟ್ ಮಾಡಲಾಗಿದೆಯೋ, ಅವರಿಗೆ ಏನಾದರೂ ಲೈಂಗಿಕ ರೋಗಗಳಿವೆಯೋ ಎಂಬಿತ್ಯಾದಿ ಅಸಹ್ಯವೆನಿಸುವ ಮಾಹಿತಿಗಳನ್ನು ಕೇಳಿದ್ದರು. ಈ ಪ್ರಕರಣದಲ್ಲಿ ದೆಹಲಿ ಉಚ್ಚ ನ್ಯಾಯಾಲಯವು ಅರ್ಜಿದಾರರಿಗೆ 75000 ರು. ದಂಡವಿಧಿಸಿ ಅರ್ಜಿಯನ್ನು ತಿರಸ್ಕರಿಸಿತು.

ಕಾಯಿದೆಯ ಕುರಿತಾದ ಜ್ಞಾನದ ಕೊರತೆ: ಅತ್ಯಂತ ಸರಳ ವಿಧಾನದ ಮೂಲಕ ಮಾಹಿತಿ ಪಡೆಯುವ ಅವಕಾಶವನ್ನು ಈ ಕಾಯಿದೆಯು ಕಲ್ಪಿಸುತ್ತದೆ. ಆದರೆ ಜನಸಾಮಾನ್ಯರಿಗೆ ವಿವಿಧ ನಿಬಂಧನೆಗಳ ಕುರಿತು ಅರಿವಿಲ್ಲ. ಆದ್ದರಿಂದ ಸಹಜವಾಗಿ ವಕೀಲರ ಅಥವಾ ಇತರ ಮಧ್ಯವರ್ತಿಗಳ ಸಹಾಯ ಪಡೆಯುತ್ತಾರೆ. ಆದರೆ ಮಧ್ಯವರ್ತಿಗಳು ದಿಕ್ಕು ತಪ್ಪಿಸುತ್ತಿದ್ದಾರೆ ಎಂಬ ಆರೋಪವೂ ಇದೆ. ಅನೇಕ ಅಧಿಕಾರಿಗಳಿಗೂ ಈ ಕಾಯಿದೆಯ ಕುರಿತು ಜ್ಞಾನದ ಕೊರತೆ ಇದೆ. ನೀಡಿದ ಮಾಹಿತಿಯ ಆಧಾರದಲ್ಲಿ ಸಾರ್ವಜನಿಕ/ಮಾಧ್ಯಮ ಚರ್ಚೆ, ಕೋರ್ಟ್ ಪ್ರಕರಣಗಳು ಮುಂತಾದ ಸಾಧ್ಯತೆಗಳಿವೆ. ನಿಯಮಬದ್ಧ ನಿರ್ಧಾರಗಳಿಗೆ ಯಾಕೆ ಹೆದರಬೇಕು ಎಂಬ ವಾದ ಇದೆಯಾದರೂ, ಅನೇಕ ಸಲ ಕೆಲಸದ ಒತ್ತಡದಿಂದ ಕೆಲವು ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಲು ಸಾಧ್ಯವಾಗದಿರಬಹುದು.



ಮಾನವ ಸಹಜ ತಪ್ಪುಗಳಾಗಬಹುದು. ಈ ಕಾರಣಕ್ಕೆ ಅನೇಕ ಅಧಿಕಾರಿಗಳು ಕಚೇರಿ ಟಿಪ್ಪಣಿಗಳಿಗೆ ಸಹಿ ಮಾಡದೇ ನಿರ್ಧಾರಗಳನ್ನು ಮುಂದೂಡುತ್ತಾರೆ ಅಥವಾ ಮೌಖಿಕ ಆದೇಶ ನೀಡುತ್ತಾರೆ ಎಂಬ ಅಭಿಪ್ರಾಯವಿದೆ. ಇದರಿಂದಾಗಿ ಅಭಿವೃದ್ಧಿ ಸ್ಥಗಿತಗೊಳ್ಳಬಹುದು ಎಂಬ ಆತಂಕ ಇದೆ.

ಮಾಹಿತಿ ಹಕ್ಕು ಕಾರ್ಯಕರ್ತರು: ಕಾಯಿದೆಯ ಜ್ಞಾನ ಇರುವವರು ಜನಸಾಮಾನ್ಯರಿಗೆ ಮಾಹಿತಿ ದೊರಕಿಸಿಕೊಳ್ಳಲು ಸಹಾಯ ಮಾಡುವುದು ಸ್ವಾಗತಾರ್ಹ. ಇನ್ನು, ಸರಕಾರಿ ಇಲಾಖೆಗಳಲ್ಲಿರುವ ಭ್ರಷ್ಟಾಚಾರ, ಅವ್ಯವಹಾರಗಳನ್ನು ಬಯಲಿಗೆಳೆಯಲು ಪ್ರಾಮಾಣಿಕ ಪ್ರಯತ್ನ ಮಾಡುವವರೂ ಇದ್ದಾರೆ. ಕೆಲವು ಮಾಧ್ಯಮದವರೂ ಮಾಹಿತಿಗಾಗಿ ಅಥವಾ ತನಿಖಾ ವರದಿಗಾಗಿ ಈ ಕಾಯಿದೆಯನ್ನು ಪರಿಣಾಮಕಾರಿಯಾಗಿ ಬಳಸುತ್ತಿದ್ದಾರೆ. ಆದರೆ ಕೆಲವು ಇಲಾಖೆಗಳಲ್ಲಿ ಇರಬಹುದಾದ ಸಾಮಾನ್ಯ ಲೋಪದೋಷಗಳು, ನಿಯಮಗಳ ಉಲ್ಲಂಘನೆ ಮುಂತಾದವುಗಳನ್ನೇ ಮುಂದಿಟ್ಟುಕೊಂಡು, ಕೆಲವು ಸಲ ಇಲಾಖೆಯ ಒಳಗಿನವರ ಸಹಾಯವನ್ನೇ ಪಡೆದು, ಪ್ರಾಮಾಣಿಕ ಅಧಿಕಾರಿಗಳನ್ನು ಬ್ಲ್ಯಾಕ್‌ಮೇಲ್ ಮಾಡುವ, ಹಣಕ್ಕಾಗಿ ಪೀಡಿಸುವ ಪ್ರವೃತ್ತಿ ಬೆಳೆಯುತ್ತಿದೆ ಎನ್ನಲಾಗಿದೆ.

ಅಂಜಲಿ ಭಾರದ್ವಾಜ ವರ್ಸಸ್ ಭಾರತ ಸರಕಾರ (ಸುಪ್ರೀಂ ಕೋರ್ಟ್): 'ಆರ್‌ಟಿಐ ಕಾರ್ಯಕರ್ತ ಎನ್ನುವುದು ಒಂದು ವೃತ್ತಿಯೇ? ಕೆಲವರು ತಮ್ಮ ಲೆಟರ್‌ಹೆಡ್‌ನಲ್ಲಿ 'ಆರ್‌ಟಿಐ ಸಲಹೆಗಾರ' ಎಂದು ನಮೂದಿಸುತ್ತಾರೆ. ಅವರು ತಮ್ಮನ್ನು ಆರ್‌ಟಿಐ ಕಾರ್ಯಕರ್ತ ಎಂದು ಕರೆದುಕೊಳ್ಳುತ್ತಾರೆ. ವಿಷಯಕ್ಕೆ ಏನೂ ಸಂಬಂಧ ಇಲ್ಲದೆ ಆರ್‌ಟಿಐ ಅರ್ಜಿಗಳನ್ನು ದಾಖಲಿಸುತ್ತಾರೆ. ಇದು ಕಾಯಿದೆಯ ದುರುಪಯೋಗ. ಆರ್‌ಟಿಐ ಅರ್ಜಿಗಳ ಹಿಂದೆ ಸ್ವಾರ್ಥಿಗಳ ಕೈವಾಡ ಇರಬಹುದು. ಕಾಯಿದೆಯ ದುರ್ಬಳಕೆ ತಡೆಯಲು ನಿಯಮಾವಳಿ ಅಗತ್ಯ'.

ಬ್ಯಾಂಕುಗಳಿಂದ ಗ್ರಾಹಕರ ಮಾಹಿತಿ ಕೋರಿಕೆ: ಸರಕಾರಿ ಸ್ವಾಮ್ಯದ ಬ್ಯಾಂಕುಗಳು ಸದರಿ ಕಾಯಿದೆಯ ವ್ಯಾಪ್ತಿಗೆ ಬರುತ್ತವೆ. ಆದರೆ ಗ್ರಾಹಕರು ಬ್ಯಾಂಕಿನೊಂದಿಗೆ ಇಟ್ಟಿರುವ ವ್ಯವಹಾರದ ಗೌಪ್ಯತೆ ಕಾಯ್ದುಕೊಳ್ಳುವುದು ಬ್ಯಾಂಕಿನ ಹೆಚ್ಚಿನ ಜವಾಬ್ದಾರಿ ಮತ್ತು ಅದು ಬ್ಯಾಂಕು ಹಾಗೂ ಗ್ರಾಹಕರ ನಡುವಿನ ವಿಶ್ವಾಸಾರ್ಹ ಸಂಬಂಧಕ್ಕೆ ಒಳಪಡುತ್ತದೆ. ಗ್ರಾಹಕರ ವ್ಯವಹಾರದ ವಿವರಗಳನ್ನು ಈ ಕಾಯಿದೆಯ ಅಡಿಯಲ್ಲಿ ಕೇಳಿದಾಗ ಬ್ಯಾಂಕುಗಳು ಕಲಂ 8 (ಡಿ), (ಇ) ಮತ್ತು (ಜೆ) ಅಡಿಯಲ್ಲಿರುವ ವಿನಾಯತಿಯನ್ನು ಉಲ್ಲೇಖಿಸಿ ಅಂಥ ಅರ್ಜಿಗಳನ್ನು ತಿರಸ್ಕರಿಸುತ್ತವೆ.

ದುರುಪಯೋಗದ ಇನ್ನೂ ಕೆಲವು ಘಟನೆಗಳು ಈ ಮುಂದಿನಂತಿವೆ:

1. ಒಬ್ಬಾತ, ತನ್ನ ಸ್ನೇಹಿತರು ಮತ್ತು ಸಂಬಂಧಿಕರ ಹೆಸರಿನಲ್ಲಿ ಬೇರೆ ಬೇರೆ ನಗರಗಳ ವಿಳಾಸ ನೀಡಿ ಅದೇ ಮಾಹಿತಿಯನ್ನು ಕೇಳುತ್ತಿದ್ದ. ಅವನು ಕೇಳಿದ ಮಾಹಿತಿಯನ್ನು ಕೊಡದೇ ವಿಧಿಯಿರಲಿಲ್ಲ, ಯಾಕೆಂದರೆ ಅರ್ಜಿದಾರರ ಗುರುತು ಚೀಟಿ ಮತ್ತು ವಿಳಾಸದ ಪುರಾವೆ ಕೇಳಲು ಕಾಯಿದೆಯಲ್ಲಿ ಅವಕಾಶವಿಲ್ಲ (Ramesh Chand Jain v/s DTC).

2. ಕಳೆದ ಹತ್ತು ವರ್ಷಗಳಲ್ಲಿ ಒಂದು ಬ್ಯಾಂಕು ನೀಡಿದ ಸಾಲಗಳ ಜಾತಿವಾರು/ಗ್ರಾಮವಾರು ಮಾಹಿತಿ. ಆ ಪೈಕಿ ಮಹಿಳೆಯರಿಗೆ, ಅಂಗವಿಕಲರಿಗೆ, ಎಸ್‌ಸಿ/ಎಸ್‌ಟಿ, ಅಲ್ಪಸಂಖ್ಯಾತ ಮುಂತಾದ ವರ್ಗೀಕರಣದ ಅಂಕಿ-ಅಂಶ ಮತ್ತು ಆ ಪೈಕಿ ಸರಕಾರಿ ಯೋಜನೆಗಳಲ್ಲಿ ಕೊಟ್ಟ ಸಾಲಗಳೆಷ್ಟು- ಈ ಮಾಹಿತಿಯನ್ನು ದೇಶಾದ್ಯಂತ ಶಾಖೆಗಳನ್ನು ಹೊಂದಿರುವ ಬ್ಯಾಂಕು ನೀಡಬೇಕೆಂದರೆ ಎಷ್ಟು ಸಮಯ ವ್ಯಯವಾಗಬಹುದೆಂದು ಊಹಿಸಿ (J.I.Buck v/s. State Bank of Saurashtra).

3. ಅನೇಕ ಕಚೇರಿಗಳಲ್ಲಿ, ಬೇರೆ ಬೇರೆ ಕಚೇರಿ/ಶಾಖೆಗಳಿಂದ ಮಾಹಿತಿ ತರಿಸಿ ಕ್ರೋಡೀಕರಿಸಬೇಕಾಗುತ್ತದೆ. ಇದರಿಂದಾಗಿ. ಕಚೇರಿಯ ಮಾಮೂಲಿ ಕೆಲಸ ಹಾಗೂ ಅಭಿವೃದ್ಧಿ ಕಾರ್ಯಗಳಿಗಿಂತ ಕಾಲಮಿತಿಯಲ್ಲಿ ಮುಗಿಸಬೇಕಾದ ಆರ್‌ಟಿಐ ಅರ್ಜಿಗೇ ಹೆಚ್ಚಿನ ಪ್ರಾಧಾನ್ಯ ನೀಡಬೇಕಾಗುತ್ತದೆ. ಹೀಗಾಗಿ ನೌಕರರ ಕೊರತೆಯಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ.

4. ಮೇಲ್ಮನವಿ ಮತ್ತು ಇತರ ಕಾನೂನು ಹೋರಾಟಗಳಿಗೆ ಕೂಡಾ ಸಾಕಷ್ಟು ಸಮಯ ಮತ್ತು ಹಣ ವೆಚ್ಚವಾಗುತ್ತದೆ.

ಈ ಎಲ್ಲ ರೀತಿಯ ದುರುಪಯೋಗಗಳಿಂದಾಗಿ ಒಳ್ಳೆಯ ಕಾಯಿದೆಯ ಉದ್ದೇಶ ವಿಫಲವಾಗುತ್ತಿದೆ. ಈ ದಿಸೆಯಲ್ಲಿ ಕೈಗೊಳ್ಳಬಹುದಾದ ಕೆಲವು ಕ್ರಮಗಳು ಈ ಕೆಳಗಿನಂತಿವೆ:

- ಅರ್ಜಿದಾರರ ಗುರುತು ಮತ್ತು ವಿಳಾಸಗಳ ಪುರಾವೆ ಕೇಳುವುದು; ಇದರಿಂದ ನಕಲಿ ಅರ್ಜಿಗಳನ್ನು ತಡೆಯಬಹುದು.
- ಮಾಹಿತಿಯ ಉದ್ದೇಶವನ್ನು ಕಡ್ಡಾಯ ಮಾಡುವುದು.
- ಅರ್ಜಿದಾರರಿಗೆ ಮಾಹಿತಿಯ ಕುರಿತು ಇರುವ ಸಂಬಂಧ (locus standi); ಆರ್‌ಟಿಐ ಮಧ್ಯವರ್ತಿಗಳನ್ನು ತಡೆಯಲು ಇದು ಸಹಕಾರಿ.
- ಆರ್‌ಟಿಐ ಶುಲ್ಕ ಹೆಚ್ಚಳ: ಅರ್ಜಿಯೊಂದಿಗೆ ತೆರಬೇಕಾದ ಶುಲ್ಕ ಕೇವಲ 10 ರುಪಾಯಿ ಇದ್ದು ಇದನ್ನು ಹೆಚ್ಚಳ ಮಾಡಿದರೆ ಅನವಶ್ಯಕ ಅರ್ಜಿಗಳನ್ನು ತಡೆಯಬಹುದೆಂಬ ಅಭಿಪ್ರಾಯವಿದೆ.
- ಇಲಾಖೆಗಳ ನೌಕರರಿಗೆ ಈ ಕುರಿತು ಸಾಕಷ್ಟು ತರಬೇತಿ ಮತ್ತು ಜ್ಞಾನ ನೀಡುವುದರಿಂದ ಅರ್ಜಿಗಳ ವಿಲೇವಾರಿಗೆ ಹಾಗೂ ಅನರ್ಹ ಅರ್ಜಿಗಳನ್ನು ತಿರಸ್ಕರಿಸಲು ಸಹಾಯವಾಗುವುದು.
- ಬೇರೆ ಮೂಲಗಳಿಂದ ದಾಖಲೆ ಪಡೆಯಲು ಅವಕಾಶವಿದ್ದಾಗ ಆರ್‌ಟಿಐ ಅರ್ಜಿ ನಿರಾಕರಿಸುವುದು.

ದುರುಪಯೋಗ ಆಗುತ್ತಿರುವುದು ನಿಜವಾದರೂ, ಪಾರದರ್ಶಕತೆ ಹಾಗೂ ಭ್ರಷ್ಟಾಚಾರ ತಡೆಯಂಥ ಶ್ಲಾಘನೀಯ ಉದ್ದೇಶ ಹೊಂದಿರುವ ಈ ಕಾಯಿದೆ ಇನ್ನೂ ಬಲವಾಗಬೇಕು ಮತ್ತು ವ್ಯಾಪಕವಾಗಿ ಉಪಯೋಗವಾಗಬೇಕು. ಇದು ಪ್ರಜಾಪ್ರಭುತ್ವದ ಉಳಿವಿಗೆ ಮತ್ತು ಯಶಸ್ಸಿಗೆ ಅಗತ್ಯ.

(ಲೇಖಕರು ಕಾನೂನು ತಜ್ಞರು ಮತ್ತು ಕೆವಿಜಿ ಬ್ಯಾಂಕ್‌ನ ನಿವೃತ್ತ ಎಜಿಎಂ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:18

ಸಮಾಚಾರ ಸಣ್ಣದಲ್ಲ

ಮತಾಂತರಕ್ಕೆ ಯತ್ನ : ಸಗಣಿ ಹೊಡೆತ

ಹೈದರಾಬಾದ್: ಮತಾಂತರ ಉದ್ದೇಶದಿಂದ ಗ್ರಾಮಕ್ಕೆ ಬಂದವರಿಗೆ ಗ್ರಾಮಸ್ಥರು ಸಗಣಿ ನೀರೆರಚಿ ಓಡಿಸಿರುವ ಘಟನೆ ತೆಲಂಗಾಣದಲ್ಲಿ ನಡೆದಿದೆ. ಈ ಸಂದರ್ಭದ ವಿಡಿಯೊವನ್ನು ಶಿಲ್ಪಾ ಎಂಬವರು ಹಂಚಿಕೊಂಡಿದ್ದು, ಭಾರೀ ವೈರಲ್ ಆಗಿದೆ. ಗೂಡ್ಸ್ ಆಟೋದಲ್ಲಿ ಪುರುಷರ ತಂಡವೊಂದು ತೆಲಂಗಾಣದ ಗ್ರಾಮಕ್ಕೆ ತೆರಳಿ ಗ್ರಾಮಸ್ಥರನ್ನು ಮತಾಂತರ ಮಾಡಲೆತ್ನಿಸಿದೆ. ಅದಕ್ಕೆ ಗ್ರಾಮಸ್ಥರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮತಾಂತರಕ್ಕೆ ಬಂದವರು ಮತ್ತು ಗ್ರಾಮಸ್ಥರ ನಡುವೆ ಮಾತಿನ ಚಕಮಕಿ ನಡೆದಿದೆ. ನಂತರ ಕೆಲ ಗ್ರಾಮಸ್ಥರು ಕೊಟ್ಟಿಗೆಗೆ ತೆರಳಿ ಸಗಣಿ ತಂದು ನೀರಲ್ಲಿ ಕಲಸಿ ಮತಾಂತರಕ್ಕೆ ಬಂದವರ ಮೇಲೆ ಎರಚಿದ್ದಾರೆ. ಅಲ್ಲದೆ ಮತಾಂತರ ಸಂಚಿಗೆ ಬಲಿಯಾಗದಂತೆ ಗ್ರಾಮ ಜನರಲ್ಲಿ ಮನವಿ ಮಾಡಿದ್ದಾರೆ.

ರಾಜ್ಯಕ್ಕೆ 3 ರೈಲ್ವೆ ಸೇತುವೆಗೆ ಅಸ್ತು

ದೆಹಲಿ: ಕರ್ನಾಟಕದಲ್ಲಿ ಮೂರು ಕಡೆ ರೈಲ್ವೆ ಮೇಲ್ಸೇತುವೆ ನಿರ್ಮಿಸಲು ಭಾರತೀಯ ರೈಲ್ವೆ ಇಲಾಖೆ ಮುಂದಾಗಿದೆ. ಹೊಳೆನರಸೀಪುರದ ಅಕ್ಕಿಹೆಬ್ಬಾಳು -ಮಂದಗೆರೆ, ಮಂದಗೆರೆ-ಹೊಳೆನರಸೀಪುರ ಮತ್ತು ಕಡೂರು ಜಂಕ್ಷನ್-ಬಿರೂರು ಜಂಕ್ಷನ್ ನಡುವೆ ಸೇತುವೆ ನಿರ್ಮಾಣವಾಗಲಿವೆ. ವಿಶೇಷ ರೈಲ್ವೆ ಯೋಜನೆಗಳೆಂದು ಪರಿಗಣಿಸಿ ಅಧಿಸೂಚನೆ ಹೊರಡಿಸಲಾಗಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

ಸಿಎಂ ಯೋಗಿಗೆ ಬೆದರಿಕೆ: ಬಳಿಕ ಕ್ಷಮೆ

ಲಖನೌ: ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರಿಗೆ 'ಮಹಾಕುಂಭ ಮೇಳವನ್ನು ಹೇಗೆ ನಡೆಸುತ್ತೀರಿ ಎಂಬುದನ್ನು ನಾನೂ ನೋಡುತ್ತೇನೆ. ನಿಮ್ಮನ್ನು ಕೊಲ್ಲುತ್ತೇನೆ' ಎಂದು ಉತ್ತರ ಪ್ರದೇಶದ ಮೈಜಾನ್ ರಜಾ ಎಂಬಾತ ಜಾಲತಾಣದಲ್ಲಿ ಜೀವ ಬೆದರಿಕೆ ಹಾಕಿದ್ದ. ಆ ಬಳಿಕ ಕಾರ್ಯಪ್ರವೃತ್ತರಾದ ಬರೇಲಿ ಪೊಲೀಸರು ಆರೋಪಿಯನ್ನು ಪತ್ತೆ ಹಚ್ಚಿ ಠಾಣೆಗೆ ಕರೆತಂದು ಲಾಠಿ ರುಚಿ ತೋರಿಸಿದ್ದಾರೆ. ನಂತರದ ಕೆಲ ಸಮಯದಲ್ಲೇ ಆತ ಇನ್ನೊಂದು ವಿಡಿಯೋ ಮಾಡಿ ಹಂಚಿಕೊಂಡಿದ್ದು, 'ನನ್ನಿಂದ ತಪ್ಪಾಗಿದೆ ಕ್ಷಮಿಸಿ' ಎಂದು ಬೇಡಿಕೊಂಡಿದ್ದಾನೆ. ಸದ್ಯ ಆರೋಪಿ ರಜಾನನ್ನು ಬಂಧಿಸಲಾಗಿದ್ದು, ಪ್ರಕರಣದಲ್ಲಿ ಈತನ ಜತೆಗೆ ಬೇರೆ ಯಾರಿದ್ದಾರೆ ಎಂದು ತನಿಖೆ ನಡೆಸಿದ್ದಾರೆ.

ಅಂಗದಾನ ಮಾಡಿದ ನೌಕರರಿಗೆ 42 ದಿನ ರಜೆ

ದೆಹಲಿ: ಅಂಗ ದಾನ ಮಾಡುವ ಕೇಂದ್ರ ಸರಕಾರದ ನೌಕರರು 42 ದಿನಗಳ ವಿಶೇಷ ಸಾಂದರ್ಭಿಕ ರಜೆ ಪಡೆಯಲು ಅರ್ಹರು ಎಂದು ರಾಷ್ಟ್ರೀಯ ಅಂಗಾಂಗ-ಅಂಗಾಂಶ ಕಸಿ ಸಂಸ್ಥೆ (ಎನ್‌ಒಟಿಟಿಒ) ಹೇಳಿದೆ. ಜೀವಂತ ದಾನಿಯ ದೇಹದಿಂದ ಅಂಗಗಳನ್ನು ಪಡೆಯುವ ವಿಧಾನ ಶಸ್ತ್ರಚಿಕಿತ್ಸೆಗೆ ಸಮಾನ. ಬಳಿಕ ಅವರ ಚೇತರಿಕೆಗೆ ಸಮಯ ಬೇಕಾಗುತ್ತದೆ. ಆದ್ದರಿಂದ ಅಂಗಾಂಗ ದಾನ ಮಾಡುವ ಕೇಂದ್ರ ಸರಕಾರದ ನೌಕರರು ಆಸ್ಪತ್ರೆಗೆ ದಾಖಲಾಗುವ ದಿನದಿಂದ ಗರಿಷ್ಠ 42 ದಿನಗಳ ಸಾಂದರ್ಭಿಕ ರಜೆ ನೀಡಬೇಕು ಎಂದು ಎನ್‌ಒಟಿಟಿಒ ಹೇಳಿದೆ.

ಟ್ರಂಪ್ ಪ್ರಮಾಣ ವಚನಕ್ಕೆ ಜೈಶಂಕರ್

ದೆಹಲಿ: ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಭಾರತದ ಅಳಿಯ, ನಿಯೋಜಿತ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಅವರ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಭಾರತಕ್ಕೂ ಆಹ್ವಾನ ಬಂದಿದ್ದು, ಕೇಂದ್ರ ಸರಕಾರದ ಪ್ರತಿನಿಧಿಯಾಗಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅಮೆರಿಕಕ್ಕೆ ಭೇಟಿ ನೀಡಲಿದ್ದಾರೆ.



47ನೇ ಅಧ್ಯಕ್ಷರಾಗಿ ಟ್ರಂಪ್ ಪ್ರಮಾಣವಚನ ಸ್ವೀಕರಿಸುವ ಸಮಾರಂಭ ಜ.20ರಂದು ನಡೆಯಲಿದ್ದು, ಕಾರ್ಯಕ್ರಮದಲ್ಲಿ ಭಾಗಿಯಾದ ಬಳಿಕ ವಿದೇಶಾಂಗ ಸಚಿವ ಜೈಶಂಕರ್, ಅಮೆರಿಕಕ್ಕೆ ಭೇಟಿ ನೀಡಲಿರುವ ವಿವಿಧ ದೇಶಗಳ ಕೆಲ ಗಣ್ಯರನ್ನು ಭೇಟಿಯಾಗಿ ಮಾತುಕತೆ ನಡೆಸಲಿದ್ದಾರೆ. ಕ್ಯಾಪಿಟಲ್ ಹಿಲ್‌ನಿಂದ ಶ್ವೇತಭವನಕ್ಕೆ ಟ್ರಂಪ್ ಮೆರವಣಿಗೆ ನಿಗದಿಯಾಗಿದ್ದು, ಭಾರತೀಯ ಅಮೆರಿಕನ್ ಡೋಲ್ ಬ್ಯಾಂಡ್ ಕೂಡಾ ಇರಲಿದೆ.

{ ಅರವಿಂದ್ ಕೇಜ್ರಿವಾಲ್ } ಎಎಪಿ ಮುಖಂಡ

ಬಿಜೆಪಿ ದೆಹಲಿ ವಿಧಾನಸಭೆ ಚುನಾವಣೆ ಗೆದ್ದು ಅಧಿಕಾರಕ್ಕೇರಿದರೆ ರಾಜಧಾನಿಯ ಕೊಳೆಗೇರಿಗಳನ್ನೆಲ್ಲಾ ನೆಲಸಮಗೊಳಿಸಲಿದೆ. ಬಿಜೆಪಿ, ಸ್ಲಂ ನಿವಾಸಿಗಳ ಕಲ್ಯಾಣಕ್ಕಿಂತಲೂ ಭೂಸ್ವಾಧೀನಕ್ಕೆ ಆದ್ಯತೆ ನೀಡುತ್ತದೆ. ಬಡವರಿಗೆ ಮನೆ ಕಟ್ಟಿಸಿಕೊಡುವುದಾಗಿ ಹೇಳುವ ಬಿಜೆಪಿ, ಕಳೆದ 5 ವರ್ಷದಲ್ಲಿ ಕೊಳೆಗೇರಿ ನಿವಾಸಿಗಳಿಗೆ ಕೇವಲ 4700 ಮನೆಗಳನ್ನಷ್ಟೇ ನಿರ್ಮಿಸಿಕೊಟ್ಟಿದೆ.

2024ರಲ್ಲಿ 16,914 ಕೋಟಿ ರು. ಬೆಲೆಯ ನಾರ್ಕೋಟಿಕ್ಸ್ ವಶ । ದೇಶದಲ್ಲಿ ವಶವಾದ ಮಾದಕ ದ್ರವ್ಯಗಳಲ್ಲೇ ಅಧಿಕ ಪ್ರಮಾಣವಿದು । 10 ದಿನಗಳಲ್ಲಿ 8600 ಕೋಟಿ ಬೆಲೆಯ 1 ಲಕ್ಷ ಕಿಲೊ ಡ್ರಗ್ಸ್ ನಾಶ

ಶೇ.7 ಭಾರತೀಯರು ಮಾದಕದ್ರವ್ಯ ವ್ಯಸನಿ

ದೆಹಲಿ: ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇ.7ರಷ್ಟು ಜನರು ಮಾದಕದ್ರವ್ಯ ಬಳಕೆದಾರರಾಗಿದ್ದಾರೆ ಎಂಬ ಕಳವಳಕಾರಿ ಸಂಗತಿಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೊರಗೆಡವಿದ್ದಾರೆ.

ಭಾರತದಲ್ಲಿ ಇತ್ತೀಚಿನ ದಿನಮಾನದಲ್ಲಿ ಮಾದಕದ್ರವ್ಯ ಲೋಕ ವಿಸ್ತಾರಗೊಳ್ಳುತ್ತಿದೆ. ನೂರು ಜನರಲ್ಲಿ ಏಳು ಮಂದಿ ಮಾದಕದ್ರವ್ಯ ವ್ಯಸನಿಗಳಾಗಿ ಬದಲಾಗಿದ್ದಾರೆ. ಇದನ್ನು ಕೊನೆಗೊಳಿಸಲೇಬೇಕಿದೆ ಎಂದು ಹೇಳಿದ್ದಾರೆ. ದೆಹಲಿಯ ವಿಜ್ಞಾನ ಭವನ್‌ನಲ್ಲಿ 'ಡ್ರಗ್ ಟ್ರಾಫಿಕಿಂಗ್ ಅಂಡ್ ನ್ಯಾಷನಲ್ ಸೆಕ್ಯುರಿಟಿ' ವಿಚಾರ ಸಂಕಿರಣದಲ್ಲಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, 2024ರಲ್ಲಿಯೇ ಒಟ್ಟು 16,914 ಕೋಟಿ ರು. ಬೆಲೆಯ ನಾರ್ಕೋಟಿಕ್ಸ್ ವಶವಾಗಿದೆ. ಇದು ದೇಶದಲ್ಲಿ ಈವರೆಗೆ ವಶಪಡಿಸಿಕೊಳ್ಳಲಾದ ಮಾದಕದ್ರವ್ಯಗಳಲ್ಲೇ ಅತ್ಯಧಿಕ ಪ್ರಮಾಣವಾಗಿದೆ ಎಂದು ಅಂಕಿ ಅಂಶ ನೀಡುವ ಮೂಲಕ ಸಚಿವರು, ದೇಶದಲ್ಲಿನ ಮಾದಕದ್ರವ್ಯ ಲೋಕ ಯಾವ ಪ್ರಮಾಣದಲ್ಲಿ ವಿಸ್ತಾರ ಗೊಂಡಿದೆ ಎಂಬುದರ ಚಿತ್ರಣ ನೀಡಿದರು. ಹೀಗೆ ವಶಪಡಿಸಿಕೊಳ್ಳಲಾಗಿರುವ ಮಾದಕದ್ರವ್ಯಗಳನ್ನೆಲ್ಲಾ ಕಾಲಕಾಲಕ್ಕೆ ನಾಶಪಡಿಸಲಾಗಿದೆ. ಮುಂದಿನ 10 ದಿನಗಳಲ್ಲಿ 8600 ಕೋಟಿ ಬೆಲೆಯ 1 ಲಕ್ಷ ಕಿಲೊ ಡ್ರಗ್ಸ್ ಸುಡಲಾಗುವುದು ಎಂದರು. ಮಾದಕದ್ರವ್ಯಗಳ ಕಳ್ಳಸಾಗಣೆ, ವಿತರಣೆ, ಮಾರಾಟವನ್ನು ಅಪರಾಧ ಲೋಕದವರು ಬಹಳ ವ್ಯವಸ್ಥಿತವಾಗಿ ನಡೆಸುತ್ತಿದ್ದಾರೆ. ಬಳಕೆದಾರರ ಪ್ರಮಾಣವೂ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಎಷ್ಟೇ ಅರಿವು ಮೂಡಿಸಿದರೂ ಹೊಸದಾಗಿ ಬಳಕೆದಾರರ ಸೇರ್ಪಡೆ ಆಗುತ್ತಲೇ ಇದೆ. ಹಾಗಾಗಿಯೇ ಮಾದಕದ್ರವ್ಯ ಕಳ್ಳಸಾಗಣೆ ಲೋಕ ಇಷ್ಟೊಂದು ವಿಸ್ತಾರಗೊಂಡಿದೆ ಎಂದರು. ಅಂತಾರಾಷ್ಟ್ರೀಯ ಮಟ್ಟದ ಡ್ರಗ್ಸ್ ಜಾಲದ ವಿರುದ್ಧ ಕೇಂದ್ರದ ಏಜೆನ್ಸಿಗಳು ಸಮರ ಸಾರಿವೆ. ಆದರೆ, ಅಪರಾಧ ಲೋಕದವರು ದೇಶದೊಳಗೇ ಪ್ರಯೋಗಾಲಯಗಳಲ್ಲಿ ನಾರ್ಕೋಟಿಕ್ ತಯಾರಿ ನಡೆಸಿದ್ದಾರೆ. ಇಂತಹ 50ಕ್ಕೂ ಅಧಿಕ ಅಕ್ರಮ ಲ್ಯಾಬ್‌ಗಳನ್ನು ಪತ್ತೆ ಹಚ್ಚಿ ಅಪರಾಧಿಗಳನ್ನು ಬಂಧಿಸಲಾಗಿದೆ ಎಂದು ಗೃಹ ಸಚಿವರು ವಿವರಿಸಿದರು. ದೇಶದ ಯುವಜನರನ್ನು ಈ ಮಾದಕ ಲೋಕದಿಂದ ರಕ್ಷಿಸಬೇಕಿದೆ. ಅದಕ್ಕಾಗಿ 2019ರಿಂದಲೇ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರ ದೇಶದಲ್ಲಿನ ಮಾದಕದ್ರವ್ಯ ಲೋಕದ ವಿರುದ್ಧ ಬೇರೆಯದೇ ರೀತಿಯಲ್ಲಿ ಸಮರ ಸಾರಿದೆ. ದೇಶದಿಂದ ನಾರ್ಕೋಟಿಕ್ಸ್ ಜಾಲವನ್ನು ನಿವಾರಣೆ ಮಾಡಲಾಗುವುದು ಎಂದು ಸಚಿವ ಶಾ ಭರವಸೆ ನೀಡಿದರು.

ದೆಹಲಿಯಲ್ಲಿ ನಡೆದ ಮಾದಕದ್ರವ್ಯ ವಿರೋಧಿ ಸಮಾವೇಶದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾರಿಗೆ ಹಿರಿಯ ಅಧಿಕಾರಿಯಿಂದ ಗೌರವ ಸಮರ್ಪಣೆ.

10 ವರ್ಷದಲ್ಲಿ 24 ಲಕ್ಷ ಕೆಜಿ ವಶ!

ಭಾರತದಲ್ಲಿ 2004ರಿಂದ 2014ರವರೆಗೆ 3.63 ಲಕ್ಷ ಕೆಜಿ ಮಾದಕ ಪದಾರ್ಥಗಳನ್ನು ಕೇಂದ್ರದ ನಾರ್ಕೋಟಿಕ್ಸ್ ಇಲಾಖೆ ವಶಪಡಿಸಿಕೊಂಡಿತ್ತು. ಆದರೆ, ನಂತರದ 10 ವರ್ಷಗಳಲ್ಲಿ, ಅಂದರೆ 2014ರಿಂದ 2024ರವರೆಗಿನ ಅವಧಿಯಲ್ಲಿ ದೇಶದಲ್ಲಿ ವಶಪಡಿಸಿಕೊಳ್ಳಲಾದ ಡ್ರಗ್ಸ್‌ಗಳ ಪ್ರಮಾಣ 24 ಲಕ್ಷ ಕೆಜಿಗಳಷ್ಟು ಅಗಾಧ ಪ್ರಮಾಣವಾಗಿದೆ ಎಂದು ಸಚಿವ ಅಮಿತ್ ಶಾ, ದೇಶದ ಕರಾಳ ಲೋಕದ ವಿಸ್ತಾರ-ವ್ಯಾಪ್ತಿಯನ್ನು ಅನಾವರಣಗೊಳಿಸಿದರು. 2004ರಿಂದ 2014ರವರೆಗೆ ವಶವಾದ ಡ್ರಗ್ಸ್‌ಗಳ ಮೌಲ್ಯ 8,150 ಕೋಟಿ ರು.ಗಳಷ್ಟಾಗಿದ್ದರೆ, 2014ರಿಂದ 2024ರವರೆಗೆ ವಶಪಡಿಸಿಕೊಳ್ಳಲಾದ ಮಾದಕ ಪದಾರ್ಥಗಳ ಬೆಲೆ 56,861 ಕೋಟಿ ರು. ಎಂದು ಅಂಕಿ ಅಂಶ ನೀಡಿದರು.

'ಪಿಐಟಿಎನ್ ಡಿಪಿಎಸ್' ಕಾಯಿದೆ

ಮಾದಕದ್ರವ್ಯ ಲೋಕದ ಧಮನ ಕಾರ್ಯಾಚರಣೆಯಲ್ಲಿ ರಾಜ್ಯಗಳ ಮಟ್ಟದಲ್ಲಿನ ಕಾರ್ಯಾಚರಣೆ ಬಹಳ ಮುಖ್ಯ. ಆದರೆ, ಹಲವು ರಾಜ್ಯಗಳು 'ಪ್ರಿವೆನ್ಷನ್ ಆಫ್ ಇಲ್ಲಿಸಿಟ್ ಟ್ರಾಫಿಕ್ ಇನ್ ನಾರ್ಕೋಟಿಕ್ಸ್ ಡ್ರಗ್ಸ್ ಅಂಡ್ ಸೈಕಿಯಾಟ್ರೋಪಿಕ್ ಸಬ್‌ಸ್ಟ್ಯಾನ್ಸಸ್'(ಪಿಐಟಿಎನ್‌ಡಿಪಿಎಸ್) ಕಾಯಿದೆ ಯನ್ನು ಸರಿಯಾಗಿ ಬಳಸುತ್ತಲೇ ಇಲ್ಲ. ಈ ಕಾಯಿದೆ ಕೇವಲ 2 ರಾಜ್ಯಗಳಲ್ಲಷ್ಟೇ ಬಳಕೆ ಆಗುತ್ತಿದೆ ಎಂದು ಸಚಿವ ಅಮಿತ್ ಶಾ ಬೇಸರ ವ್ಯಕ್ತಪಡಿಸಿದರು.

ಪಂಜಾಬ್ ರಾಜ್ಯದಲ್ಲಿ ಈ ಕಾಯಿದೆಯನ್ನು ಒಮ್ಮೆ ಮಾತ್ರ ಬಳಸಲಾಗಿದೆ. ದೆಹಲಿಯಲ್ಲಿ 12 ಪ್ರಕರಣಗಳಲ್ಲಿ ಬಳಸಲಾಗಿದೆ. ಉಳಿದ ಯಾವುದೇ ರಾಜ್ಯಗಳಲ್ಲಿ, ಕೇಂದ್ರಾಡಳಿತ ಪ್ರದೇಶಗಳಲ್ಲಿಯೂ ಈ ಕಾಯಿದೆಯ ಬಳಕೆಯೇ ಆಗಿಲ್ಲ ಎಂದು ವಿಷಾದಿಸಿದರು.

ಮೊತ್ತ ಹೆಚ್ಚಿಸಿದ ಕೇಂದ್ರ ಸಾರಿಗೆ ಸಚಿವ ಗಡ್ಕರಿ

ಅಪಘಾತ ಗಾಯಾಳುವಿಗೆ ನೆರವಾದ ವ್ಯಕ್ತಿಗೆ 25 ಸಾವಿರ ರು. ಬಹುಮಾನ

ದೆಹಲಿ: ರಸ್ತೆ ಅಪಘಾತದಲ್ಲಿ ಗಾಯಗೊಂಡವರಿಗೆ, ಸಂಕಷ್ಟದಲ್ಲಿ ಸಿಲುಕಿದವರಿಗೆ ಸಹಾಯ ಮಾಡಿದರೆ ಕೇಂದ್ರ ಸರಕಾರ 25 ಸಾವಿರ ರು. ಬಹುಮಾನ ನೀಡಲಿದೆ. ದೇಶದಲ್ಲಿ ಸುರಕ್ಷಿತ ರಸ್ತೆ ಪ್ರಯಾಣ ಉತ್ತೇಜಿಸಲು ಮತ್ತು ಸಂತ್ರಸ್ತರ ಜೀವ ರಕ್ಷಣೆಗಾಗಿ ಕೇಂದ್ರ ಸರಕಾರ ಹೊಸ ಯೋಜನೆ ಪ್ರಕಟಿಸಿದೆ.

ಕಣ್ಣೆದುರೇ ರಸ್ತೆ ಅಪಘಾತ ನಡೆದರೂ ಜನರು ಸಹಾಯಕ್ಕೆ ಬರಲು ಹಿಂದೆಗೆಯುತ್ತಾರೆ. ಅಪಘಾತದ ಬಗ್ಗೆ ಪೊಲೀಸರಿಗೆ ಕರೆ ಮಾಡಿ ಮಾಹಿತಿ ನೀಡಲೂ ಹೆದರುತ್ತಾರೆ. ಮಾಹಿತಿ ನೀಡಿದರೆ ಅಥವಾ ಅಪಘಾತದ ಗಾಯಾಳುವನ್ನು ಆಸ್ಪತ್ರೆಗೆ ಕರೆದೊಯ್ದರೆ ಪೊಲೀಸರು ತಮ್ಮನ್ನು ಅಪಘಾತ ಪ್ರಕರಣದಲ್ಲಿ ಸಿಲುಕಿಸುತ್ತಾರೆ ಎಂದು ಜನರು ಭಯ ಪಡುತ್ತಾರೆ. ಜನರ ಈ ಚಿಂತನೆ ಬದಲಿಸಲು ಕೇಂದ್ರ ಸಚಿವ ನಿತಿನ್ ಗಡ್ಕರಿ 'ನೆರವಾದವರಿಗೆ ಬಹುಮಾನ' ಯೋಜನೆ ಘೋಷಿಸಿದ್ದಾರೆ.

ರಸ್ತೆ ಸುರಕ್ಷತೆ ಕುರಿತು ನಟ ಅನುಪಮ್ ಖೇರ್ ಜತೆ ಟಿವಿ ಸಂದರ್ಶನದಲ್ಲಿ ಮಾತನಾಡಿದ ಸಚಿವ ನಿತಿನ್ ಗಡ್ಕರಿ, ರಸ್ತೆ ಅಪಘಾತದಲ್ಲಿ ಗಾಯಗೊಂಡವರನ್ನು ತಕ್ಷಣ ಆಸ್ಪತ್ರೆಗೆ ಕರೆದೊಯ್ಯುವ ವ್ಯಕ್ತಿಗೆ ಸರಕಾರದಿಂದ ಸದ್ಯ 5 ಸಾವಿರ ರು. ನೀಡಲಾಗುತ್ತಿದೆ. ಇನ್ನು ಮುಂದೆ ಬಹುಮಾನದ ಮೊತ್ತವನ್ನು 25,000 ರು.ಗೆ ಹೆಚ್ಚಿಸಲಾಗುವುದು. ಬಹುಮಾನ ಮೊತ್ತ ಹೆಚ್ಚಿಸಲು ರಸ್ತೆ ಸಾರಿಗೆ ಸಚಿವಾಲಯಕ್ಕೆ ನಿರ್ದೇಶನ ನೀಡಿದ್ದೇನೆ ಎಂದು ಹೇಳಿದರು. ಕೆಲವು ಹಿಟ್ ಅಂಡ್ ರನ್ ಪ್ರಕರಣದಲ್ಲಿ ಪೊಲೀಸರಿಗೆ ಸಾಕ್ಷ್ಯ ಸಿಗದಂತಾಗಿದೆ. ಇಂಥ ಸಂದರ್ಭಗಳಲ್ಲಿ ಪೊಲೀಸ್ ಠಾಣೆಗೆ ಕರೆ ಮಾಡಿ ಮಾಹಿತಿ ನೀಡುವ ವ್ಯಕ್ತಿಯನ್ನೇ ಪೊಲೀಸರು ಸಾಕ್ಷಿಯನ್ನಾಗಿಸಲು ಯತ್ನಿಸುತ್ತಾರೆ. ಇದರಿಂದಾಗಿಯೇ ಜನರು ರಸ್ತೆ ಅಪಘಾತ ಕಂಡರೂ ಗಾಯಾಳುವಿಗೆ ನೆರವಾಗಲು ಮುಂದೆ ಬರುವುದಿಲ್ಲ, ಪೊಲೀಸರಿಗೆ ಕರೆ ಮಾಡಲೂ ಮುಂದಾಗುವುದಿಲ್ಲ. ಸಾಕ್ಷಿಯಾಗಲು ಒಪ್ಪದ ವ್ಯಕ್ತಿಯನ್ನು ಪ್ರಕರಣದಲ್ಲಿ ಸಿಲುಕಿಸುವುದಾಗಿ ಪೊಲೀಸರು ಬೆದರಿಕೆ ಹಾಕುತ್ತಾರೆ. ಆ ಮೂಲಕ ಸಾಕ್ಷಿಯಾಗಿಸಲು ಒತ್ತಾಯಿಸುತ್ತಾರೆ. ಹಾಗಾಗಿಯೇ ಜನರು ಅಪಘಾತ ಸಂದರ್ಭಗಳಲ್ಲಿ ನೆರವಾಗಲು ಮುಂದೆ ಬರುವುದಿಲ್ಲ ಎನ್ನಲಾಗಿದೆ.

2021ರಿಂದಲೇ ಜಾರಿ

ರಸ್ತೆ ಅಪಘಾತಗಳಲ್ಲಿ ಸಂತ್ರಸ್ತರಿಗೆ ನೆರವಾಗುವಂತೆ ಜನರನ್ನು ಉತ್ತೇಜಿಸಲು ಭಾರತ ಸರಕಾರ 2021ರ ಅಕ್ಟೋಬರ್‌ನಿಂದಲೇ ಬಹುಮಾನ ಹಣ ಯೋಜನೆ ಆರಂಭಿಸಿದೆ. ಆದರೆ, ಬಹುಮಾನ ಮೊತ್ತ 5 ಸಾವಿರ ರು. ಬಹಳ ಕಡಿಮೆ ಎಂಬ ಅಭಿಪ್ರಾಯ ವ್ಯಕ್ತವಾಗಿದ್ದರಿಂದ ಸಚಿವ ನಿತಿನ್ ಗಡ್ಕರಿ ಮೊತ್ತವನ್ನು 25 ಸಾವಿರ ರು.ಗೆ ಏರಿಕೆ ಮಾಡಿದ್ದಾರೆ. ರಸ್ತೆ ಅಪಘಾತ ಸಂತ್ರಸ್ತರಿಗೆ ನೆರವಾದವರಿಗೆ ಈ ಯೋಜನೆಯಡಿ ಪ್ರಮಾಣಪತ್ರವನ್ನೂ ನೀಡಲಾಗುತ್ತದೆ. ಆದರೆ, ಈ ಯೋಜನೆಯಡಿ ಈವರೆಗೆ ಎಷ್ಟು ಜನರಿಗೆ ಹಣ, ಪ್ರಮಾಣಪತ್ರ ನೀಡಲಾಗಿದೆ ಎಂಬ ಬಗ್ಗೆ ಸದ್ಯ ಮಾಹಿತಿ ಲಭ್ಯವಿಲ್ಲ.

40 ಸಾವಿರ ಎಕರೆಗೆ ವಿಸ್ತರಿಸಿದ ಬೆಂಕಿ । 12 ಸಾವಿರ ಕಟ್ಟಡ ಭಸ್ಮ

ಅಮೆರಿಕ ಕಾಡ್ಗಿಚ್ಚಿಗೆ ಜೀವಬಲಿ 16ಕ್ಕೆ

ಲಾಸ್‌ಏಂಜಲೀಸ್: ವಾರದ ಹಿಂದೆ ಲಾಸ್ ಏಂಜಲೀಸ್ ರಾಜ್ಯದ ಅರಣ್ಯ ಭಾಗದಲ್ಲಿ ಹೊತ್ತಿಕೊಂಡ ಕಿಡಿ ಕಾಡ್ಗಿಚ್ಚಾಗಿ ಬದಲಾಗಿ 40 ಸಾವಿರ ಎಕರೆಗೂ ಅಧಿಕ ವಿಸ್ತಾರಕ್ಕೆ ವ್ಯಾಪಿಸಿ, 12,000ಕ್ಕೂ ಅಧಿಕ ಕಟ್ಟಡಗಳನ್ನು ಭಸ್ಮವಾಗಿಸಿ, ಈವರೆಗೆ ಒಟ್ಟು 16 ಜೀವಗಳನ್ನು ಬಲಿತೆಗೆದುಕೊಂಡಿದೆ. ಅದಲ್ಲದೇ 13 ಮಂದಿ ಕಾಣೆಯಾಗಿದ್ದು ಅವರ ಶೋಧ ಕಾರ್ಯಾಚರಣೆ ಸವಾಲಿನ ಕೆಲಸವಾಗಿದೆ ಎಂದು ರಕ್ಷಣಾ ಅಧಿಕಾರಿಗಳು ಹೇಳಿದ್ದಾರೆ.

ಸರಕಾರದ ವಿವಿಧ ಇಲಾಖೆಗಳ ರಕ್ಷಣಾ ತಂಡಗಳು ಈವರೆಗೂ 2 ಲಕ್ಷ ಜನರನ್ನು ಕಾಡ್ಗಿಚ್ಚು ಹರಡುತ್ತಿರುವ ಪ್ರದೇಶಗಳಿಂದ ರಕ್ಷಿಸಿ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿವೆ. ಕ್ಯಾಲಿಫೋರ್ನಿಯ ರಾಜ್ಯದ ದಕ್ಷಿಣ ಭಾಗಕ್ಕೂ ಕಾಡ್ಗಿಚ್ಚು ಹರಡಿದ್ದು, 80 ಲಕ್ಷ ಮಂದಿ ತೊಂದರೆಗೆ ಒಳಗಾಗಿದ್ದಾರೆ ಎಂದು ಅಂದಾಜು ಮಾಡಲಾಗಿದೆ. ವಾರವಾದರೂ ಕಾಡ್ಗಿಚ್ಚನ್ನು ನಂದಿಸಲು ಪರದಾಡುತ್ತಿರುವುದಕ್ಕೆ ಲಾಸ್‌ಏಂಜಲೀಸ್‌ನ ಅಗ್ನಿಶಾಮಕ ಇಲಾಖೆಯ ವಿರುದ್ಧ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೇರಿದಂತೆ ಹಲವರು ಟೀಕಿಸಲಾರಂಭಿಸಿದ್ದಾರೆ. ಅಗ್ನಿಶಾಮಕ ದಳದ ಹಲವಾರು ತಂಡಗಳು ಬೆಂಕಿ ನಂದಿಸಲು ಶ್ರಮಿಸುತ್ತಿದ್ದರೆ, ಇನ್ನೊಂದೆಡೆ ಬಿರುಗಾಳಿ ಗಂಟೆಗೆ 100-120 ಕಿಮೀ ವೇಗದಲ್ಲಿ ಬೀಸುತ್ತಾ ಇರುವುದರಿಂದ ಕಾಡ್ಗಿಚ್ಚು ನಿರೀಕ್ಷೆಗೂ ಮೀರಿ ಹರಡುತ್ತಾ ಹೋಗುತ್ತಿದೆ. ಇದರಿಂದಾಗಿ ಬೆಂಕಿ ನಂದಿಸುವ ಕಾರ್ಯ ಹಾಗೂ ರಕ್ಷಣಾ ಕಾರ್ಯಾಚರಣೆಗೆ ಅಡ್ಡಿಯಾಗಿದೆ ಎನ್ನಲಾಗಿದೆ.



ಲಾಸ್‌ಏಂಜಲೀಸ್ ನಗರದ ಆಕಾಶ ಕಾಡ್ಗಿಚ್ಚಿನಿಂದ ಹೊರಬಿದ್ದ ಧೂಮದಿಂದ ದಟ್ಟ ಮೋಡವಾಗಿ ಆವರಿಸಿಕೊಂಡಿರುವ ಚಿತ್ರ.

ಹಾಲಿವುಡ್ ಬಾಲನಟ ಸಾವು

ಹಾಲಿವುಡ್ ಚಿತ್ರರಂಗದಲ್ಲಿ ಬಾಲನಟನಾಗಿ ಗುರುತಿಸಿಕೊಂಡಿದ್ದ, ಈಗ ದೊಡ್ಡ ಹುಡುಗನಾಗಿರುವ ರೋರಿ ಸೈಕ್ಸ್ ಕೂಡಾ ಕಾಡ್ಗಿಚ್ಚಿಗೆ ಬಲಿಯಾಗಿದ್ದಾನೆ. 'ನಮ್ಮ ನಿವಾಸದತ್ತ ಕಾಡ್ಗಿಚ್ಚು ಸಮೀಪಿಸಿದಾಗಲೇ ಮನೆ ತೊರೆಯಲು ಮುಂದಾದೆವು. ಆದರೆ, ರೋರಿ ಸೈಕ್ಸ್ ಗಾಯಗೊಂಡಿದ್ದ. ಅವನಿಗೆ ಮೇಲೆದ್ದು ನಡೆಯಲು ಶಕ್ತಿ ಇರಲಿಲ್ಲ. ನನ್ನ ಕೈಕೂಡಾ ಮುರಿತಕ್ಕೊಳಗಾಗಿತ್ತು. ಹಾಗಿದ್ದೂ ಅವನನ್ನು ಎತ್ತಿಕೊಳ್ಳಲು ಯತ್ನಿಸಿದೆ. ಆದರೆ, ಸಾಧ್ಯವಾಗಲಿಲ್ಲ. ಆಗ ರೋರಿ, ''ಮಾಮ್ ನೀನು ತಕ್ಷಣ ಹೊರಟುಹೋಗು. ನನ್ನನ್ನು ಇಲ್ಲಿಯೇ ಬಿಡು. ನನ್ನ ಬಗ್ಗೆ ಚಿಂತೆ ಮಾಡಬೇಡ. ನೀನು ಮೊದಲು ಪಾರಾಗು'' ಎಂದು ನನ್ನನ್ನು ಒತ್ತಾಯಿಸಿದ. ಅವನನ್ನು ಈ ಕಾಡ್ಗಿಚ್ಚು ಬಲಿ ತೆಗೆದುಕೊಂಡಿತು' ಎಂದು ಶೆಲ್ಲಿ ಸೈಕ್ಸ್ ಕಣ್ಣೀರಾಗಿದ್ದಾರೆ. ಹಾಲಿ ವುಡ್ ಚಿತ್ರರಂಗದ ಹಲವು ನಟ ನಟಿಯರ ಮನೆಗಳು ಕಾಡ್ಗಿಚ್ಚಿಗೆ ಸಿಲುಕಿ ಭಸ್ಮವಾಗಿವೆ.

ಇಂದ್ರಾವತಿ ರಾಷ್ಟ್ರೀಯ ಉದ್ಯಾನವನ ಪ್ರದೇಶದಲ್ಲಿ ಘಟನೆ । ಸ್ವಯಂಚಾಲಿತ ಬಂದೂಕು ಸೇರಿದಂತೆ ಅಪಾರ ಶಸ್ತ್ರಾಸ್ತ್ರ ವಶ

ಬಿಜಾಪುರ: ಮೂವರು ನಕ್ಸಲರ ಅಂತ್ಯ

ಬಿಜಾಪುರ: ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯಲ್ಲಿ ಭಾನುವಾರ ಭದ್ರತಾ ಪಡೆಗಳು ನಡೆಸಿದ ಕಾರ್ಯಾಚರಣೆಯಲ್ಲಿ ಮೂವರು ನಕ್ಸಲರು ಹತರಾಗಿದ್ದಾರೆ. ಇದರೊಂದಿಗೆ ರಾಜ್ಯದಲ್ಲಿ 2025ರಲ್ಲಿ ಈವರೆಗೆ ನಡೆದ ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಒಟ್ಟು 12 ನಕ್ಸಲರನ್ನು ಕೊಲ್ಲಲಾಗಿದೆ.

ಇಂದ್ರಾವತಿ ರಾಷ್ಟ್ರೀಯ ಉದ್ಯಾನವನ ಪ್ರದೇಶದ ಅರಣ್ಯದಲ್ಲಿ ಭಾನುವಾರ ಬೆಳಗ್ಗೆ ಜಂಟಿ ಭದ್ರತಾ ಪಡೆ ನಡೆಸಿದ ನಕ್ಸಲರ ಧಮನ ಕಾರ್ಯಾಚರಣೆಯಲ್ಲಿ ತೀವ್ರ ಸ್ವರೂಪದ ಗುಂಡಿನ ಚಕಮಕಿ ನಡೆದಿದೆ. ಮೂವರು ನಕ್ಸಲರನ್ನು ಹೊಡೆದುರುಳಿಸುವಲ್ಲಿ ಭದ್ರತಾಪಡೆಗಳು ಯಶಸ್ವಿಯಾಗಿವೆ. ಜಿಲ್ಲಾ ಮೀಸಲು ಪಡೆ(ಡಿಆರ್‌ಜಿ), ವಿಶೇಷ ಕಾರ್ಯಪಡೆ (ಎಸ್‌ಟಿಎಫ್) ಮತ್ತು ಜಿಲ್ಲಾ ಪಡೆಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದವು ಎಂದು ಬಸ್ತಾರ್ ವಲಯ ಪೊಲೀಸ್ ಮಹಾನಿರೀಕ್ಷಕ ಸುಂದರರಾಜ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಸಮವಸ್ತ್ರ' ಧರಿಸಿದ್ದ ಮೂವರು ನಕ್ಸಲರ ಮೃತದೇಹಗಳನ್ನು ಕಾರ್ಯಾಚರಣೆ ಸ್ಥಳದಲ್ಲಿ ವಶಪಡಿಸಿಕೊಳ್ಳಲಾಗಿದೆ. ಜತೆಗೆ ಸ್ವಯಂಚಾಲಿತ ಬಂದೂಕುಗಳು, ಸ್ಫೋಟಕ ಸಾಮಗ್ರಿಗಳು ಸೇರಿದಂತೆ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ನಕ್ಸಲರ ಅಡಗುತಾಣದಿಂದ ವಶಪಡಿಸಿಕೊಳ್ಳಲಾಗಿದೆ. ಪ್ರದೇಶದಲ್ಲಿ ಭಾನುವಾರ ಸಂಜೆಯೂ ಶೋಧ ಕಾರ್ಯಾಚರಣೆ ಮುಂದುವರಿಸಲಾಗಿದೆ ಎಂದು ಎಡಿಜಿಪಿ ತಿಳಿಸಿದ್ದಾರೆ.

ಈ ವರ್ಷದ ಕಾರ್ಯಾಚರಣೆ

- **ಜ.6ರಂದು ನಾರಾಯಣಪುರ- ದಾಂತೆವಾಡ-ಬಿಜಾಪುರ ಜಿಲ್ಲೆಗಳ ಗಡಿಯ ಅಬುಜಮದ್‌ನಲ್ಲಿ ಭದ್ರತಾ ಪಡೆಗಳು 3 ದಿನಗಳ ಕಾಲ ನಡೆಸಿದ ಸುದೀರ್ಘ ನಕ್ಸಲ್ ಧಮನ ಕಾರ್ಯಾಚರಣೆಯಲ್ಲಿ ಇಬ್ಬರು ಮಹಿಳೆಯರು ಸೇರಿದಂತೆ ಐವರು ನಕ್ಸಲರು ಹತರಾದರು.**
- **ಜ.7ರಂದು ಬಿಜಾಪುರ ಜಿಲ್ಲೆಯಲ್ಲಿ ನಕ್ಸಲರು 'ಐಇಡಿ' ನೆಲದಡಿ ಅಡಗಿಸಿಟ್ಟು ಪೊಲೀಸರ ವಾಹನವನ್ನು ಸ್ಫೋಟಿಸಿದರು. ಪರಿಣಾಮ 9 ಪೊಲೀಸ್ ಸಿಬ್ಬಂದಿ ಮತ್ತು ಚಾಲಕ ಮೃತಪಟ್ಟರು.**
- **ಜ.9ರಂದು ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ನಡೆಸಿದ ಕಾರ್ಯಾಚರಣೆಯಲ್ಲಿ ಮೂವರು ನಕ್ಸಲರು ಹತರಾದರು.**
- **ಜ.3ರಂದು ರಾಯಪುರ ವಿಭಾಗದ ಗರಿಯಾಬಂದ್ ಜಿಲ್ಲೆಯಲ್ಲಿ ಭದ್ರತಾ ಸಿಬ್ಬಂದಿ ನಡೆಸಿದ ಕಾರ್ಯಾಚರಣೆಯಲ್ಲಿ ಒಬ್ಬ ನಕ್ಸಲ ಹತನಾದ.**
- **2024ರಲ್ಲಿ ಛತ್ತೀಸ್‌ಗಢ ಪ್ರತ್ಯೇಕವಾಗಿ ನಡೆದ ನಕ್ಸಲರ ಧಮನ ಕಾರ್ಯಾಚರಣೆಗಳಲ್ಲಿ ಒಟ್ಟು 219 ನಕ್ಸಲರನ್ನು ಭದ್ರತಾ ಪಡೆಗಳು ಹೊಡೆದುರುಳಿಸಿವೆ.**

ಪೊಲೀಸರ ಮೇಲೇ 20 ಪಾದ್ರಿಗಳ ದಾಳಿ-ಥಳಿತ

ಎರ್ನಾಕುಲಂ: ಕೇರಳದ ಎರ್ನಾಕುಲಂ-ಅಂಗಮಾಲಿ ಆರ್ಚ್‌ಡಿಯೋಸಿಸ್‌ನ ಬಿಷಪ್ ಹೌಸ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಕ್ರೈಸ್ತ ಪಾದ್ರಿಗಳೇ ಭದ್ರತೆಗೆ ನಿಯೋಜನೆಗೊಂಡಿದ್ದ ಪೊಲೀಸರ ಮೇಲೆ ದಾಳಿ ಮಾಡಿ ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಪರಿಣಾಮ, ಎರ್ನಾಕುಲಂ ಸೆಂಟ್ರಲ್ ಠಾಣೆಯ ಪೊಲೀಸ್ ಸಬ್-ಇನ್‌ಸ್ಪೆಕ್ಟರ್ ಅನೂಪ್ ಸೇರಿದಂತೆ ಹಲವು ಪೊಲೀಸರು ಗಾಯಗೊಂಡಿದ್ದಾರೆ.

ಪ್ರತಿಭಟನೆ ನಡೆಸುತ್ತಿದ್ದ 20 ಪಾದ್ರಿಗಳು ಕಾನೂನು ಮತ್ತು ಸುವ್ಯವಸ್ಥೆ ಕಾರ್ಯಾಚರಣೆಯಲ್ಲಿದ್ದ ಪೊಲೀಸರ ಮೇಲೆಯೇ ದಾಳಿ ನಡೆಸಿ ಗಾಯಗೊಳಿಸಿದ್ದಾರೆ ಎಂದು ಎರ್ನಾಕುಲಂ ಕೇಂದ್ರ ಪೊಲೀಸರು ಬಿಎನ್‌ಎಸ್ ಸೆಕ್ಷನ್ 189(2), 190, 191(2), ಮತ್ತು 121(2) ಅನ್ವಯ ಪ್ರಕರಣ ದಾಖಲಿಸಿದ್ದಾರೆ.

ಉದ್ಧವ್ ಠಾಕ್ರೆ ಶತ್ರುವಲ್ಲ: ದೇವೇಂದ್ರ ಫಡ್ನವೀಸ್

ಮುಂಬೈ: ರಾಜ್ ಠಾಕ್ರೆ ನನ್ನ ಗೆಳೆಯ, ಉದ್ಧವ್ ಠಾಕ್ರೆ ಶತ್ರುವೇನೂ ಅಲ್ಲ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಹೇಳಿದ್ದು, ಬಿಜೆಪಿ-ಶಿವಸೇನೆ(ಉದ್ಧವ್ ಬಣ) ಮತ್ತೆ ಒಂದಾಗಲಿವೆಯೇ? ಎಂಬ ಪ್ರಶ್ನೆ ಮೂಡಿದೆ.

ಮುಂಬೈ ಮಹಾನಗರ ಪಾಲಿಕೆ(ಬಿಎಂಸಿ) ಚುನಾವಣೆ ಸೇರಿದಂತೆ ಸ್ಥಳೀಯ ಚುನಾವಣೆಗಳಿಗೆ ಮುಂಚಿತವಾಗಿ ಸಿಎಂ ಫಡ್ನವೀಸ್ ಮಹತ್ವದ ಹೇಳಿಕೆ ನೀಡಿದ್ದಾರೆ. ಭವಿಷ್ಯದಲ್ಲಿ ರಾಜಕೀಯ ಸಮೀಕರಣಗಳು ಬದಲಾಗಬಹುದು ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ. ಮಹಾರಾಷ್ಟ್ರ ನವನಿರ್ಮಾಣ ಸೇನೆ(ಎಂಎನ್‌ಎಸ್) ರಾಜ್ ಠಾಕ್ರೆ ಈಗಲೂ ನನಗೆ ಸ್ನೇಹಿತ. ಉದ್ಧವ್ ಠಾಕ್ರೆ ಅವರನ್ನು ವಿರೋಧಿ ಎಂದು ನೋಡಬಾರದು. ರಾಜಕೀಯದಲ್ಲಿ ಯಾವುದೂ ಖಚಿತವಿಲ್ಲ. ಉದ್ಧವ್ ಠಾಕ್ರೆ ಮೊದಲು ಮಿತ್ರರಾಗಿದ್ದರು. ನಂತರ ರಾಜ್ ಠಾಕ್ರೆ ಗೆಳೆಯರಾದರು. ಹಾಗೆಂದು ಉದ್ಧವ್ ಶತ್ರುವಲ್ಲ ಎಂದಿದ್ದಾರೆ. ಇದು ಬಿಜೆಪಿ-ಶಿವಸೇನೆ(ಉದ್ಧವ್ ಬಣ) ನಡುವಿನ ಸಂಭಾವ್ಯ ಹೊಂದಾಣಿಕೆ ಸಂಕೇತವಾಗಿದೆ. ನಾಗಪುರದಲ್ಲಿ ವಿಧಾನಸಭೆ ಚಳಿಗಾಲ ಅಧಿವೇಶನ ಸಂದರ್ಭ ಉದ್ಧವ್ ಠಾಕ್ರೆ ಮತ್ತು ಪುತ್ರ ಆದಿತ್ಯ ಠಾಕ್ರೆ, ಸಿಎಂ ಫಡ್ನವಿಸ್ ಅವರನ್ನು ವೈಯಕ್ತಿಕವಾಗಿ ಅಭಿನಂದಿಸಿದ್ದರು. ಹಾಗಾಗಿ ಈ ಹೇಳಿಕೆ ಮಹತ್ವ ಪಡೆದುಕೊಂಡಿದೆ. ಅಂದಿನಿಂದ, ಆದಿತ್ಯ ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಚರ್ಚಿಸಲು ಫಡ್ನವಿಸ್‌ರನ್ನು ಭೇಟಿ ಮಾಡಿದ್ದಾರೆ ಎಂದು ವರದಿಯಾಗಿದೆ. ನಾನು ಪಕ್ಷದ ಶಿಸ್ತಿನ ಕಾರ್ಯಕರ್ತ. ಪಕ್ಷ ಈಗಲೂ ನನ್ನ ರಾಜೀನಾಮೆ ಪಡೆದು ಬೇರಾವುದೇ ಜವಾಬ್ದಾರಿ ಕೊಟ್ಟರೂ ನಿರ್ವಹಿಸಲು ಸಿದ್ಧ. ನನ್ನ ಬೆಳವಣಿಗೆಗೆ ಪಕ್ಷ-ಕಾರ್ಯಕರ್ತರ ಬಲ ಕಾರಣ ಎಂದಿದ್ದಾರೆ.

ಚಳಿಗೆ ಅಗ್ಗಿಷ್ಟಿಕೆ: ಇಬ್ಬರು ಉಸಿರುಗಟ್ಟಿ ಸಾವು

ನೊಯಿಡಾ: ಉತ್ತರ ಪ್ರದೇಶದ ನೊಯಿಡಾದಲ್ಲಿ ಸೆಕ್ಟರ್ 70ರ ಬಸಾಯಿ ಗ್ರಾಮದಲ್ಲಿ ಬಾಡಿಗೆ ಕೊಠಡಿಯಲ್ಲಿ ವಾಸಿಸುತ್ತಿದ್ದ ರಸ್ತೆ ಬದಿ ಸಿದ್ಧ ಆಹಾರ ವ್ಯಾಪಾರಿಗಳಿಬ್ಬರು, ಚಳಿ ತಡೆಯಲಾಗದೇ ಕೊಠಡಿಯಲ್ಲಿ ಅಗ್ಗಿಷ್ಟಿಕೆ ಉರಿಸಿದ್ದರು. ರಾತ್ರಿಯಿಡೀ ಅಗ್ಗಿಷ್ಟಿಕೆ ಉರಿದಿದ್ದು, ಕೊಠಡಿಯಲ್ಲಿ ಹೊಗೆ ತುಂಬಿಕೊಂಡಿದೆ. ಇಬ್ಬರೂ ಹೊಗೆಯನ್ನೇ ಉಸಿರಾಡಿದ್ದರಿಂದ ನಿದ್ರೆಯಲ್ಲೇ ಪ್ರಜ್ಞಾಹೀನರಾಗಿ, ಬಳಿಕ ಅಸುನೀಗಿದ್ದಾರೆ. ಮೃತರನ್ನು ಉಪೇಂದ್ರ, (22) ಮತ್ತು ಶಿವಂ (23) ಎಂದು ಗುರುತಿಸಲಾಗಿದೆ. ಇಬ್ಬರೂ ರಸ್ತೆ ಬದಿ ಚೋಲೆ ಕುಲ್ಚೆ ಮತ್ತು ಭತೂರಾ ಮಾರಾಟ ಮಾಡುತ್ತಿದ್ದರು.

ದೆಹಲಿ ಸಿಎಂ ಆತಿಶಿ 'ಕ್ರೌಡ್ ಫಂಡಿಂಗ್'

ದೆಹಲಿ: ದೆಹಲಿ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಲು ಮುಖ್ಯಮಂತ್ರಿ, ಆಮ್ ಆದ್ಮಿ ಪಕ್ಷದ(ಎಎಪಿ) ಅಭ್ಯರ್ಥಿ ಆತಿಶಿ, ಜನರಿಂದಲೇ ಹಣ ಸಂಗ್ರಹಕ್ಕೆ ಮುಂದಾಗಿದ್ದಾರೆ. ಮತ್ತೊಬ್ಬ ಎಎಪಿ ನಾಯಕ ಮನೀಶ್ ಸಿಸೋಡಿಯ ಡಿಸೆಂಬರ್‌ನಲ್ಲೇ ಕ್ರೌಡ್ ಫಂಡಿಂಗ್ ಆರಂಭಿಸಿದ್ದಾರೆ.

ಚುನಾವಣೆಗೆ ಸ್ಪರ್ಧೆ ಮತ್ತು ಪ್ರಚಾರಕ್ಕಾಗಿ ತಮಗೆ 40 ಲಕ್ಷ ರು. ಅಗತ್ಯವಿದೆ ಎಂದು ಹೇಳಿದ ಆತಿಶಿ, ಕ್ರೌಡ್ ಫಂಡಿಂಗ್ ಅಭಿಯಾನವನ್ನು ಭಾನುವಾರ ಆರಂಭಿಸಿದ್ದಾರೆ. ಅಸಕ್ತ ಜನರು ಡಿಜಿಟಲ್ ಪೇ ಮೂಲಕವೂ ಹಣ ನೀಡಲು ಅನುಕೂಲವಾಗುವಂತೆ ಆನ್‌ಲೈನ್ ಲಿಂಕ್ ಅನ್ನು ಸುದ್ದಿಗೋಷ್ಠಿಯಲ್ಲಿ ಬಿಡುಗಡೆ ಮಾಡಿದರು. ಜನರು ತಮ್ಮ ಪಕ್ಷದ ಕೆಲಸ ಮತ್ತು ಪ್ರಾಮಾಣಿಕತೆಯ ರಾಜಕೀಯವನ್ನು ಬೆಂಬಲಿಸುತ್ತಾರೆ ಎಂದೂ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಆಮ್ ಆದ್ಮಿ ಪಕ್ಷ, ಸದಾ ಜನರಿಂದ ದೇಣಿಗೆ ಪಡೆದೇ ಚುನಾವಣೆಗಳನ್ನು ಎದುರಿಸುತ್ತಿದೆ. 10 ವರ್ಷಗಳಿಂದ ದೆಹಲಿಯಲ್ಲಿ ಅಧಿಕಾರದಲ್ಲಿದ್ದರೂ ಭ್ರಷ್ಟಾಚಾರ ನಡೆಸಿಲ್ಲ. ಪಕ್ಷದ ಬಳಿ ಭ್ರಷ್ಟಾಚಾರದ ಒಂದು ರು. ಕೂಡಾ ಇಲ್ಲ. ಹಿಂದಿನ ಚುನಾವಣೆಗಳಂತೆ ದೆಹಲಿ ಮತ್ತು ದೇಶದ ಜನರ ಬೆಂಬಲದೊಂದಿಗೆ ಚುನಾವಣೆ ಎದುರಿಸುತ್ತೇವೆ ಎಂದರು.

ಸ್ವಾಮಿ ವಿವೇಕಾನಂದ ಜಯಂತಿ ಪ್ರಯುಕ್ತ ರಾಷ್ಟ್ರೀಯ ಯುವ ದಿನ

ಬಲಿಷ್ಠ ಯುವಜನರಿಂದ ಭಾರತ ವಿಕಸಿತ

ದೆಹಲಿ: '2047ರೊಳಗೆ ಭಾರತ ವಿಕಸಿತ ದೇಶವಾಗಿ ರೂಪುಗೊಳ್ಳುವ ದೊಡ್ಡ ಗುರಿ ಹೊಂದಿದೆ. ಚಲ್ತಾ ಹೈ ಧೋರಣೆ ಬೇಡ, ದೇಶದ ಅಭಿವೃದ್ಧಿಯೇ ನಿಮ್ಮೆಲ್ಲರ ಮುಖ್ಯ ಗುರಿಯಾಗಲಿ' ಎಂದು ದೇಶದ ಯುವಜನರಿಗೆ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ಸ್ವಾಮಿ ವಿವೇಕಾನಂದರ ಜನ್ಮದಿನ ನಿಮಿತ್ತ ದೆಹಲಿಯ ಭಾರತ್ ಮಂಟಪಂನಲ್ಲಿ ಭಾನುವಾರ ಆಯೋಜನೆಗೊಂಡಿದ್ದ 'ವಿಕಸಿತ ಭಾರತ ಯುವ ನಾಯಕರ ಸಂವಾದ' ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ, ದೇಶದ ಅಭಿವೃದ್ಧಿ ಕಾರ್ಯದಲ್ಲಿ ಯುವಜನರ ಮಹತ್ವದ ಪಾತ್ರದ ಬಗ್ಗೆ ಮಾತನಾಡಿದರು.

ಮುಂದಿನ 25 ವರ್ಷಗಳಲ್ಲಿ ಭಾರತ ವಿಕಸಿತ ದೇಶವಾಗಲು ಎಲ್ಲರೂ ಒಗ್ಗೂಡಿ ಕೆಲಸ ಮಾಡಬೇಕಿದೆ. ಯುವಜನರು ವಿಕಸಿತ ಭಾರತ ನಿರ್ಮಾಣದಲ್ಲಿ ಮುಖ್ಯ ಪಾತ್ರ ವಹಿಸಬಲ್ಲರು ಎಂಬ ವಿಶ್ವಾಸವಿದೆ ಎಂದು ಮೋದಿ ಹೇಳಿದರು. ಸ್ವಾಮಿ ವಿವೇಕಾನಂದರು ಇವತ್ತು ನಮ್ಮೊಂದಿಗಿದ್ದಿದ್ದರೆ ದೇಶಕ್ಕೆ ಹೊಸ ಭರವಸೆ ಮತ್ತು ಕನಸುಗಳನ್ನು ಕಟ್ಟಿಕೊಡುತ್ತಿರುವ ಇವತ್ತಿನ ಯುವಜನರ ಗಂಭೀರ ಪ್ರಯತ್ನಗಳನ್ನು ಕಂಡು ಖಂಡಿತಾ ಖುಷಿಪಡುತ್ತಿದ್ದರು ಎಂದು ಪ್ರಧಾನಿ ಅಭಿಪ್ರಾಯಪಟ್ಟರು. ಸಂವಾದಕ್ಕೆ ಆಸಕ್ತಿ ತೋರಿದ್ದ ದೇಶಾದ್ಯಂತದ 30 ಲಕ್ಷಕ್ಕೂ ಹೆಚ್ಚು ಯುವಕ-ಯುವತಿಯರಲ್ಲಿ ಅರ್ಹತೆ ಆಧಾರ ಬಹುಹಂತಗಳ ಆಯ್ಕೆಯಾದ 3000 ಯುವ ನಾಯಕರ ಜತೆ ಪ್ರಧಾನಿ ಮೋದಿ ಸಂವಾದ ನಡೆಸಿದರು.

ಗುರಿ ಇರಲೇಬೇಕು

'ಚಲ್ತಾ ಹೈ ಧೋರಣೆಯ ವ್ಯಕ್ತಿಗಳು ಮೃತದೇಹಕ್ಕೆ ಸಮಾನ. ಅವರ ಇರುವಿಕೆ ಶವಕ್ಕಿಂತ ಭಿನ್ನವಲ್ಲ. ಹಾಗಾಗಿ ಅಂತಹ ಧೋರಣೆಯನ್ನು ಯುವಜನರು ತ್ಯಜಿಸಬೇಕು. ಪ್ರತಿಯೊಬ್ಬರ ಜೀವನ ದಲ್ಲೂ ಗುರಿ ಎಂಬುದು ಇರಲೇಬೇಕು. ದೇಶದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಮೋದಿ ಉತ್ತೇಜಿಸಿದರು.

ಪತಿ ಜತೆ ವಾಸಿಸದೇ ಇದ್ದರೂ ಜೀವನಾಂಶ

ದೆಹಲಿ: ಕೆಲ ಕಾರಣಗಳಿಂದ ಪತಿ ಜತೆ ಪತ್ನಿ ವಾಸಿಸದೇ ಇದ್ದರೂ ಆಕೆ ಜೀವನಾಂಶ ಪಡೆಯಲು ಅರ್ಹಳು ಎಂದು ಜಾರ್ಖಂಡ್ ರಾಜ್ಯದ ವಿಚ್ಛೇದನ ಪ್ರಕರಣವೊಂದರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಜಾರ್ಖಂಡ್ ದಂಪತಿ 2014ರ ಮೇ 1ರಂದು ವಿವಾಹವಾಗಿ 2015ರ ಅಗಸ್ಟ್‌ನಲ್ಲಿ ಬೇರ್ಪಟ್ಟರು. ಮಹಿಳೆ ಪತಿ ಜತೆಗೆ ವಾಸಿಸದೇ ಇರಲು ಸಮರ್ಪಕ ಕಾರಣಗಳಿವೆ. ಹಾಗಾಗಿ, ಜತೆಗೆ ವಾಸಿಸದೇ ಇದ್ದರೂ ಪತ್ನಿ ಜೀವನಾಂಶ ಪಡೆಯಲು ಅರ್ಹಳು ಎಂದು ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾ.ಸಂಜಯ್ ಕುಮಾರ್ ಅವರ ಪೀಠ ತೀರ್ಪು ನೀಡಿದೆ.



ವೈವಾಹಿಕ ಹಕ್ಕು ಮರುಸ್ಥಾಪನೆಗಾಗಿ ಪತಿ ರಾಂಚಿ ಕೌಟುಂಬಿಕ ನ್ಯಾಯಾಲಯದ ಮೊರೆ ಹೋದರು. ಕೋರ್ಟ್ ಪತಿ ಜತೆ ಸಹಬಾಳ್ವೆ ಮಾಡಬೇಕೆಂಬ ಷರತ್ತು ವಿಧಿಸಿ ನೀಡಿದ ತೀರ್ಪು ನೀಡಿತು. ಆ ತೀರ್ಪನ್ನು ಪತ್ನಿ ಪಾಲಿಸಲಿಲ್ಲ. ಹಾಗಿದ್ದರೂ ಪತ್ನಿಗೆ ಜೀವನಾಂಶ ಹಕ್ಕು ಇರುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಆರಾಮ

ಹಿರಿಯರೆಂದರೆ ವಯಸ್ಸಿಗೆ ತಕ್ಕಂತೆ ಅರುಳೋ.. ಮರುಳೋ.. ನೆನಪಿನ ಶಕ್ತಿ ಇರುವುದಿಲ್ಲ, ಕಿವಿಗಳು ಸ್ಪಷ್ಟವಾಗಿ ಕೇಳಿಸುವುದಿಲ್ಲ ಮಾತು ಮಾತಿಗೂ ಹಾ.. ಹಾ.... ಎನ್ನುತ್ತಿರುತ್ತಾರೆ ಹೇಳಿದ್ದನ್ನೇ ಎಷ್ಟು ಸಾರಿ ಹೇಳಬೇಕು ಈ ಮುದುಕನಿಗೆ, ಎದುರಿಗಿದ್ದವರನ್ನು ಗುರುತಿಸುವುದಕ್ಕೆ ಸಶಕ್ತವಲ್ಲದ ಕಣ್ಣುಗಳು, ತಿಂದದ್ದನ್ನು ಅಗಿದು ನುಂಗಲು ಆಗದಂತೆ ಬಾಯಲ್ಲಿ ಒಂದಷ್ಟು ಹಲ್ಲುಗಳು ಮುಕ್ತಿ ಕಂಡಿರುತ್ತವೆ.

ಅರವತ್ತರ ನಂತರದ ಬದುಕು!

• ಮಿರ್ಲೆ ಚಂದ್ರಶೇಖರ

ಇತ್ತೀಚೆಗೆ ಅರವತ್ತು ದಾಟಿದವರೆಂದರೆ ಏನೋ ಪ್ರೀತಿ ಹಾಗೂ ಅಭಿಮಾನ ಏಕೆಂದು ತಿಳಿಯದು, ಬಹುಶಃ ನಾನೂ ಆ ಹಂತ ತಲುಪಿರುವ ಕಾರಣವೂ ಇರಬಹುದು. ಇನ್ನು ನೂರರ ಗಡಿಯನ್ನು ತಲುಪಲು ಸಮೀಪ ಇರುವವರನ್ನು ಕಂಡರೆ ಪ್ರೀತಿ, ಅಭಿಮಾನದ ಜೊತೆಗೆ ಕನಿಕರವೂ ಆಗುವುದುಂಟು. ಸೃಷ್ಟಿಯಲ್ಲಿ ಅದೇನು ಚಮತ್ಕಾರ ಇದೆಯೋ ಮುಪ್ಪನ್ನು ವುದು ವಿಜ್ಞಾನಿಗಳಿಗೂ ಸಿಗದ ಕಗ್ಗಂಟಾಗಿದೆ. ಏನೆಲ್ಲಾ ಆವಿಷ್ಕಾರಗಳು, ಸಂಶೋದನೆಗಳು ಆಗಿವೆಯಾದರೂ ಜೀವನಚಕ್ರವನ್ನು ನಮಗಿಷ್ಟ ಆಗುವಂತೆ ಬದಲಾವಣೆ ಮಾಡಿಕೊಳ್ಳಲಾಗಿಲ್ಲ. ಬಾಲ್ಯ, ಯೌವ್ವನ ಹಾಗೂ ಮುಪ್ಪು ಇವು ಪ್ರತೀ ಜೀವಿಗೆ ಕ್ರಮವಾಗಿ ಬರುವ ಮಜಲುಗಳು. ಮೊದಲೆರಡು ಸೂಪರ್ ಓಕೆ, ಆದರೆ ಕೊನೆಯದ್ದು ಇಷ್ಟವಾಗದಿದ್ದರು ಅನಿವಾರ್ಯ ಅಕಸ್ಮಾತ್ ಬದುಕುಳಿದಿದ್ದರೆ.

ಮತ್ತೊಬ್ಬರ ಮೇಲೆ ಆಶ್ರಯ

ಪ್ರಬುದ್ಧ ವಯಸ್ಸಿಗೆ ಬಂದವರ ಮೇಲೇಕೆ ಕನಿಕರ ಎನ್ನುವುದಕ್ಕೆ ಕಾರಣಗಳಿವೆ, ಆ ವಯಸ್ಸಿಗೆ ತಲುಪಿ ವೃದ್ಧರೆನಿಸಿಕೊಂಡವರ ದಿನಗಳು ಉರುಳುತ್ತಿದ್ದಂತೆ ಸಾರ್ವಜನಿಕವಾಗಿ ಗೌರವ ಏರುತ್ತಲಿರುತ್ತದೆ, ತಿರಸ್ಕಾರಕ್ಕೂ ಒಳಗಾಗುವ ಸಂದರ್ಭಗಳು ಕಡಿಮೆ ಇಲ್ಲ. ವಯಸ್ಸು ದಿನದಿಂದ ದಿನಕ್ಕೆ ಶಕ್ತಿಯನ್ನು ಕುಂದಿಸುತ್ತದೆ, ಬಹಳಷ್ಟು ಕಾರ್ಯಗಳಿಗೆ ಪರಾವಲಂಬಿಗಳಾಗಿರುತ್ತಾರೆ. ಹೆಚ್ಚೆಚ್ಚು ಮತ್ತೊಬ್ಬರನ್ನು ಆಶ್ರಯಿಸಿದಂತೆ ಅಯ್ಯೋ ಇವನದು ಇದ್ದೇ ಇರುತ್ತದೆ ಎನ್ನುವ ಮಾತುಗಳು ಎದುರಾಗುತ್ತವೆ. ಹಣ್ಣಣ್ಣು ಮುದುಕುರಾಗಿದ್ದವರ ಮೇಲೆ ಮನೆಯವರಿಂದಲೇ ಸಣ್ಣಪುಟ್ಟದಕ್ಕೂ ನಿಂದನೆಗಳು ನಿರಂತರ. ಮನೆಯೊಳಗಿದ್ದರೂ ಹೊರಗಿನವನಂತಿರುವ ಆ ಹಿರಿಯ ಜೀವಕ್ಕೆ ಬದುಕು ಬೇಡವಾಗಿರುತ್ತದೆ.

ನಿಧನ: ನೆಮ್ಮದಿಯ ಉಸಿರು

ಪೂರ್ಣಾಯಸ್ಸು ಪಡೆದವರು ನಿಧನರಾದ ಸಮಯದ ಚಿತ್ರಣವನ್ನು ಅವಲೋಕಿಸಿ, ಅಂತಿಮಕಾರ್ಯದ ವಿದಿವಿಧಾನಗಳು ಸಾವದಾನವಾಗಿ ನಡೆಯುತ್ತಿರುತ್ತದೆ. ನೆರೆದಿದ್ದವರಲ್ಲಿ ದುಃಖದ ಛಾಯೆ ಸ್ವಲ್ಪವೂ ಇರುವುದಿಲ್ಲ, ಒಳಗೊಳಗೆ ದುಃಖಿವಿದ್ದರೂ ಯಾರೂ ಅಳುವುದಿಲ್ಲ, ನಮಗೂ ಇವರಷ್ಟೇ ಆಯಸ್ಸು ಕೊಡು ಭಗವಂತ ಎಂದು ಕೈಮುಗಿಯುತ್ತಾರೆ. ಬದುಕಿದ್ದಾಗ ಕಿರಿಕ್ ಮಾಡಿದ ಪಾರ್ಟಿಯಾದರೆ ಖುಷಿಖುಷಿಯಾಗಿಯೇ ಬೀಳ್ಕೊಡುಗೆ ಕೊಟ್ಟು ನೆಮ್ಮದಿಯ ಉಸಿರು ಬಿಡುತ್ತಾರೆ. ಹಿರಿಯರೆಂದರೆ ವಯಸ್ಸಿಗೆ ತಕ್ಕಂತೆ ಅರುಳೋ.. ಮರುಳೋ.. ನೆನಪಿನ ಶಕ್ತಿ ಇರುವುದಿಲ್ಲ, ಕಿವಿಗಳು ಸ್ಪಷ್ಟವಾಗಿ ಕೇಳಿಸುವುದಿಲ್ಲ ಮಾತು ಮಾತಿಗೂ ಹಾ.. ಹಾ.... ಎನ್ನುತ್ತಿರುತ್ತಾರೆ ಹೇಳಿದ್ದನ್ನೇ ಎಷ್ಟು ಸಾರಿ ಹೇಳಬೇಕು ಈ ಮುದುಕನಿಗೆ, ಎದುರಿಗಿದ್ದವರನ್ನು ಗುರುತಿಸುವುದಕ್ಕೆ ಸಶಕ್ತವಲ್ಲದ ಕಣ್ಣುಗಳು, ತಿಂದದ್ದನ್ನು ಅಗಿದು ನುಂಗಲು ಆಗದಂತೆ ಬಾಯಲ್ಲಿ ಒಂದಷ್ಟು ಹಲ್ಲುಗಳು ಮುಕ್ತಿ ಕಂಡಿರುತ್ತವೆ. ಮನುಷ್ಯನಾಗಿದ್ದವನು ಪೂರ್ಣಾಯುಸ್ಸಿಗೆ ಮುಟ್ಟುವಷ್ಟರಲ್ಲಿ ದೇಹದಲ್ಲಿನ ಮಾಂಸವು ಕರಗಿ ಬರಿ ತೊಗಲು ಮತ್ತು ಮೂಳೆಗಳಷ್ಟೇ ಉಳಿದು ಮುಖದ ಕಳೆಯು ಮಂಗನ ರೂಪವಾಗಿರುತ್ತದೆ.

ರಾಜ್ಯವನ್ನಾಳುವ ಅರಸನಾಗಲಿ, ಕೂಲಿ ಮಾಡುವ ಕಾರ್ಮಿಕನಾಗಲಿ ಮುಪ್ಪಿನಲ್ಲಿ ಸಮಾನರೆ, ಅದಷ್ಟೇ ಪೌಷ್ಟಿಕ ಆಹಾರ ಸೇವಿಸಿದ್ದರೂ ಕಾಲ ಕಳೆದಂತೆ ದೇಹದಲ್ಲಿ ಆಗುವ ಬದಲಾವಣೆಯಲ್ಲಿ ಯಾವುದೇ ರಿಯಾಯಿತಿ ಇರುವುದಿಲ್ಲ.

ಏಕಾಂಗಿತನ

ವಿಶ್ವ ಆರೋಗ್ಯ ಸಂಸ್ಥೆಯು ಹಿರಿಯರ ಯೋಗಕ್ಷೇಮಕ್ಕಾಗಿ ಕೆಲಸ ಮಾಡುತ್ತಿದೆ, ಸಂಸ್ಥೆಯ ವರದಿಯ ಪ್ರಕಾರ, 2030ರ ಹೊತ್ತಿಗೆ ವಿಶ್ವದ ಆರು ಜನರಲ್ಲಿ ಒಬ್ಬರು ಅರವತ್ತು ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರಾಗಿರುತ್ತಾರೆ. ಏಕಾಂಗಿತನ ಮತ್ತು ಕುಟುಂಬದ ಪ್ರತ್ಯೇಕತೆಯ ಫಲವಾಗಿ ಮಾನಸಿಕವಾಗಿ ಕುಂದುತ್ತಾರೆ. ಹಿರಿಯ ನಾಗರೀಕರ ಸಂಖ್ಯೆಯ ಶೇ. 14 ರಷ್ಟು ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದಾರೆ. 2020 ರಲ್ಲಿ 100 ಕೋಟಿ ಜನರು ಹಿರಿಯ ನಾಗರಿಕರಿದ್ದರೆ, ಈ ಅಂಕಿಯು 2030ರ ಹೊತ್ತಿಗೆ 140 ಕೋಟಿಗೆ ಏರುತ್ತದೆ, 2050ರ ಹೊತ್ತಿಗೆ 210 ಕೋಟಿಗೆ ತಲುಪುವುದು. ಇವರಲ್ಲಿ ಹೆಚ್ಚಿನವರು ಆರ್ಥಿಕವಾಗಿ ಸದೃಡವಲ್ಲದ ಕಾರಣ, ಎರಡೊತ್ತಿನ ಊಟಕ್ಕಾಗಿ ವಯಸ್ಸಿಗೆ ಅನುಗುಣವಾಗಿ ಅಂಗಡಿಗಳಲ್ಲಿ ಲೆಕ್ಕ ಬರೆಯುವುದು, ಸೆಕ್ಯೂರಿಟಿ, ವಾಚ್‌ಮನ್ ನಂತಹ ಕೆಲಸಗಳಲ್ಲಿ ಅನ್ಯಮಾರ್ಗವಿಲ್ಲದೆ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ, ವಯಸ್ಸಾಗಿ ದೇಹದಲ್ಲಿ ಶಕ್ತಿ ಇಲ್ಲದಿದ್ದರೂ ದುಡಿಯಲೇಬೇಕು. ದೀರ್ಘಕಾಲಿಕ ಆರೈಕೆಯನ್ನು ಬೇಡುವ ನೋವು, ದೌರ್ಬಲ್ಯ, ಬುದ್ಧಿಮಾಂದ್ಯತೆ ಅಥವಾ ಇತರೆ ಆರೋಗ್ಯ ಸಮಸ್ಯೆಗಳು ಇರುತ್ತವೆ, ಅವರುಗಳ ದೇಹಕ್ಕೆ ನೋವಿಲ್ಲದ ದಿನಗಳಿಲ್ಲ. 2019ರ ಅಂಕಿಅಂಶಗಳ ಪ್ರಕಾರ ವಯಸ್ಕರರು ಖಿನ್ನತೆ ಮತ್ತು ಆತಂಕಕ್ಕೆ ಒಳಗಾಗಿ ಆತ್ಮಹತ್ಯೆಯಿಂದ ಕಾಲುಭಾಗದಷ್ಟು ಸಾವುಗಳು 60 ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಜನರಲ್ಲಿ ಆಗಿವೆ ಎನ್ನುತ್ತದೆ ವರದಿಯು.

ಆಸ್ತಿವಂತನಿಗೆ ಒಳ್ಳೆಯ ಸ್ಥಿತಿ

ಮುಪ್ಪಿಗೆ ಸಿಗುವ ಗೌರವವು ಆತನಿಗಿರುವ ಅಧಿಕಾರ, ಆಸ್ತಿಅಂತಸ್ತಿನ ಮೇಲೆ ನಿಂತಿರುತ್ತದೆ, ಅಧಿಕಾರ ಇಲ್ಲದವರು ಮೂರು ಕಾಸಿಗೂ ಬೆಲೆಬಾಳುವುದಿಲ್ಲ, ಅದೇ ಸ್ಥಿತಿವಂತನಾದರೆ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆದು ತಲೆಯ ಮೇಲೆ ಹೊತ್ತು ಮೆರೆಯುತ್ತಾರೆ, ಒಮ್ಮೊಮ್ಮೆ ಆಸ್ತಿಯೂ ಮುದುಕರಿಗೆ ಮಾರಕವಾಗುವುದುಂಟು. ಹಿರಿಯರು ಹೇಗೆ ಬದುಕಬೇಕು ಎನ್ನುವುದಕ್ಕಿಂತ ಅವರನ್ನು

ಹೇಗೆ ನೋಡಿಕೊಳ್ಳಬೇಕೆನ್ನುವ ಪ್ರಶ್ನೆಗೆ ತಿಳುವಳಿಕೆಯ ಉತ್ತರವನ್ನು ಕಲಿಯುವ ವಿದ್ಯೆಯನ್ನು ಮಕ್ಕಳಿಗೆ ಕಲಿಸಬೇಕಾಗಿದೆ. ಅರೆಯದವರಾಗಿದ್ದಾಗ ಭವಿಷ್ಯದ ಮುಪ್ಪನ್ನು ಸುಖದಿಂದ ಅಪ್ಪಿಕೊಂಡು ಆನಂದವಾಗಿರಲು ಹೇಗೆಲ್ಲಾ ಯೋಜನೆಗಳನ್ನು ರೂಪಿಸಿಕೊಳ್ಳಬೇಕು ಎನ್ನುವ ಬುದ್ಧಿವಂತಿಕೆಯನ್ನು ಹೊಂದಿರಬೇಕಾಗುತ್ತದೆ. ಅರೆಯದರಲ್ಲಿ ಮುಂದೆ ಬರಬಹುದಾದ ಕಷ್ಟಗಳನ್ನು ಅರಿಯದೆ ಉಂಡಾಡಿ ಗುಂಡನಾಗಿ ಇದ್ದುಬಿಟ್ಟು ಮುಪ್ಪಿನಲ್ಲಿ ಚಿಂತಿಸಿದರೆ ಪ್ರಯೋಜನವಿಲ್ಲ.

ಎಲ್ಲ ಸಮಸ್ಯೆಗಳಿಗೂ ಹೋರಾಡಲು ಸಂಘಗಳುಂಟು ಆದರೆ ಮುದುಕರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಸಂಘಟನೆಗಳಿಲ್ಲ, ಸಮಾಜದಲ್ಲಿ ರೈತ ಮತ್ತು ವೃದ್ಧರ ಸಮಸ್ಯೆಗಳು ಈ ಯುಗದಲ್ಲಿ ಬಗೆಹರಿಯುವುದಿಲ್ಲ.

ಮುಪ್ಪು ಮುಪ್ಪೆಂದು ತೀರಾ ಅಲ್ಲಗಳೆಯದಿರಿ, ಇಳಿವಯಸ್ಸಿನಲ್ಲೂ ಮದುವೆ ಮಾಡಿಕೊಂಡವರಿದ್ದಾರೆ, ಅವರಿಗೂ ಮಕ್ಕಳಾಗಿವೆ, ತಾಕತ್ತು ಹಾಗೂ ಸಾಧನೆಯಲ್ಲಿ ಗಿನ್ನಿಸ್ ಬುಕ್ಕ್‌ಗೂ ಸೇರಿದ್ದಾರೆ, 70 ವರ್ಷಕ್ಕಿಂತಲೂ ಹೆಚ್ಚು ವಯಸ್ಸಾಗಿದ್ದರೂ ಯುವಕರನ್ನು ನಾಚಿಸುವಂತೆ ವಾರಕ್ಕೆ 70 ಗಂಟೆಯಿಂದ 100 ಗಂಟೆಯವರೆಗೆ ವಿರಮಿಸದೆ ದುಡಿಯುವ ಉದ್ಯಮಿ ಎನ್.ಆರ್.ನಾರಾಯಣಮೂರ್ತಿ ಹಾಗೂ ಸನ್ಮಾನ್ಯ ಪ್ರಧಾನಿಗಳು ಇದ್ದಾರಲ್ಲ. ಮನಸ್ಸು ಮತ್ತು ಏಕಾಗ್ರತೆ ಇದ್ದಲ್ಲಿ ವಯಸ್ಸಿನ ಅಂಕೆಗಳು ಲೆಕ್ಕಕ್ಕೆ ಬರುವುದೇ ಇಲ್ಲ, ಮುಪ್ಪು ಶಾಪವಾಗದ ರೀತಿ ಲವಲವಿಕೆಯಿಂದ ಇರುವಂತೆ ಹೇಗೆಲ್ಲಾ ಇರಬೇಕೋ ಹಾಗೆ ಇರಲು ಪ್ರಯತ್ನ ಹಿರಿಯದಾಗಲಿ.

ಹದಿಹರೆಯದ ಮಕ್ಕಳಲ್ಲಿ ಮಾನಸಿಕ ಖಿನ್ನತೆ

• ದಿವ್ಯ ಬಾಬು

ದೈಹಿಕ, ಲೈಂಗಿಕ ಮತ್ತು ಭಾವನಾತ್ಮಕ ನಿಂದನೆ ಮತ್ತು ಮಕ್ಕಳ ನಿರ್ಲಕ್ಷ್ಯದ ವಿವಿಧ ರೂಪಗಳು ಏಕಕಾಲೀನ ಮತ್ತು ನಂತರದ ಮನೋರೋಗಶಾಸ್ತ್ರಕ್ಕೆ ಗಣನೀಯವಾಗಿ ಹೆಚ್ಚಿದ ಅಪಾಯದೊಂದಿಗೆ ಸಂಬಂಧಿಸಿವೆ ಮತ್ತು ಅನೇಕ ಕ್ಲಿನಿಕಲ್ ಸೆಟ್ಟಿಂಗ್‌ಗಳಲ್ಲಿ ವೈದ್ಯರು ಎದುರಿಸುವ ಸಾಮಾನ್ಯ ಸಮಸ್ಯೆಗಳಲ್ಲಿ ಒಂದಾಗಿದೆ. ಈ ಮಕ್ಕಳು ಮತ್ತು ಅವರ ಕುಟುಂಬಗಳನ್ನು ಆವರಿಸಿರುವ ಅನೇಕ ಸಂಕೀರ್ಣ ಕುಟುಂಬ ಮತ್ತು ವ್ಯವಸ್ಥೆಯ ಶಕ್ತಿಗಳಿಂ ದಾಗಿ ಇಂತಹ ಪ್ರಕರಣಗಳು ವೈದ್ಯರಿಗೆ ಹೆಚ್ಚುವರಿ ಸವಾಲುಗಳನ್ನು ಒಡ್ಡುತ್ತವೆ. ದೌರ್ಜನ್ಯಕ್ಕೊಳಗಾದ ಮಕ್ಕಳನ್ನು ಮೌಲ್ಯಮಾಪನ ಮಾಡಲು ಸಾಮಾನ್ಯವಾಗಿ ದುರುಪಯೋಗವನ್ನು ಅನುಭವಿಸದ ಮಕ್ಕಳ ಮೌಲ್ಯಮಾಪನಕ್ಕಿಂತ ಹೆಚ್ಚಿನ ಸಮಯ ಬೇಕಾಗುತ್ತದೆ. ಅತಿ ಹೆಚ್ಚು ದುಷ್ಕೃತ್ಯವನ್ನು ಅನುಭವಿಸುವ ಚಿಕ್ಕ ಮಕ್ಕಳು, ವಿಶೇಷವಾಗಿ ಸಂಕೀರ್ಣ ಮೌಲ್ಯಮಾಪನಗಳನ್ನು ಪ್ರಸ್ತುತಪಡಿಸುತ್ತಾರೆ ಏಕೆಂದರೆ ಅವರು ತಮ್ಮ ಆರೈಕೆಯ ಪರಿಸರವನ್ನು ಅವಲಂಬಿಸಿರುತ್ತಾರೆ. ದುರುಪಯೋಗಕ್ಕೆ ಸಂಬಂಧಿಸಿದ ಮನೋರೋಗಶಾಸ್ತ್ರದ ಚಿಕಿತ್ಸೆಯು ಸಾಮಾನ್ಯವಾಗಿ ಬಹುಮಾದರಿಯಾಗಿದೆ, ರೋಗಲಕ್ಷಣಗಳು ಮತ್ತು ದುರ್ಬಲಗೊಂಡ ಕಾರ್ಯನಿರ್ವಹಣೆಯನ್ನು ಶಾಶ್ವತಗೊಳಿಸುವ ಅಥವಾ ಉಲ್ಬಣಗೊಳಿಸಬಹುದಾದ ವಿವಿಧ ಬಾಹ್ಯ ಅಂಶಗಳನ್ನು ಪರಿಹರಿಸುವ ಅಗತ್ಯವಿದೆ. ಕಾನೂನು ಮತ್ತು ಮಕ್ಕಳ ರಕ್ಷಣಾ ಸೇವೆಗಳ ವ್ಯವಸ್ಥೆಗಳ ವಿಭಿನ್ನ ಸಂಸ್ಕೃತಿಗಳನ್ನು ಹೆಚ್ಚು ವೈದ್ಯರು ಅರ್ಥಮಾಡಿಕೊಳ್ಳುತ್ತಾರೆ ಎಂದು ನಾವು ಸಲಹೆ ನೀಡುತ್ತೇವೆ, ಅವರು ದುಷ್ಕೃತ್ಯಕ್ಕೆ ಒಳಗಾದ ಮಕ್ಕಳ ಉತ್ತಮ ಹಿತಾಸಕ್ತಿಗಳಿಗೆ ಹೆಚ್ಚು ಪರಿಣಾಮಕಾರಿಯಾಗಿ ಸಲಹೆ ನೀಡಲು ಸಹಾಯ ಮಾಡುತ್ತದೆ. ಅವರ ಅಭಿವೃದ್ಧಿ, ಮತ್ತು ಅವರ ಸಾಮರ್ಥ್ಯವನ್ನು ಉತ್ತೇಜಿಸಿ, ಎಲ್ಲರಂತೆಯೇ ಅವರು ಕೂಡ ಬದುಕುವ ಹಾಗೆ, ಅವರು ಮಾನಸಿಕ ಖಿನ್ನತೆಯಿಂದ ಹೊರಬರುವಂತೆ ಸರಿಯಾದ ವೈದ್ಯಕೀಯ ಚಿಕಿತ್ಸೆ ಆ ಮಕ್ಕಳಿಗೆ ತುಂಬಾನೇ ಅವಶ್ಯಕತೆ ಇದೆ. ಇದನ್ನು ಅರಿಯದ ಪಾಲಕರು ಮಕ್ಕಳನ್ನು ಮತ್ತಷ್ಟು ಶೋಷಣೆಗೆ ಒಳಪಡಿಸು ತ್ತಿದ್ದಾರೆ. ಕಳೆದ ಹಲವಾರು ವರ್ಷಗಳಿಂದ, ಪ್ರತಿ ವರ್ಷ ಸರಿಸುಮಾರು 250,000 ರಿಂದ 275,000 ಮಕ್ಕಳನ್ನು ಪೋಷಣೆಗೆ ತೆಗೆದುಕೊಳ್ಳಲಾಗುತ್ತದೆ ಮತ್ತು ಯುನೈಟೆಡ್ ಸ್ಟೇಟ್ಸ್‌ನಲ್ಲಿ ಯಾವುದೇ ಸಮಯದಲ್ಲಿ 400,000 ರಿಂದ 500,000 ಮಕ್ಕಳು ಸಾಕು ಆರೈಕೆಯಲ್ಲಿದ್ದಾರೆ. ಹೀಗೆ, ದುರುಪಯೋಗವನ್ನು ದೃಢೀಕರಿಸಿದ ಮಕ್ಕಳ ಬಲಿಪಶುಗಳಲ್ಲಿ ಹೆಚ್ಚಿನವರು ಅವರ ಕುಟುಂಬಗಳೊಂದಿಗೆ ನಿರ್ವಹಿಸಲ್ಪಡುತ್ತಾರೆ ಮತ್ತು ತೆಗೆದುಹಾಕುವಿಕೆಯನ್ನು ತಡೆಗಟ್ಟಲು ವಿನ್ಯಾಸಗೊಳಿಸಲಾದ ಸೇವೆಗಳಿಗೆ ಪ್ರವೇಶವನ್ನು ಒದಗಿಸುತ್ತಾರೆ. ಈ ಪ್ರಕರಣಗಳನ್ನು ಸಾಮಾನ್ಯವಾಗಿ ಕುಟುಂಬ ಸೇವೆಗಳು, ಮನೆಯಲ್ಲಿ ಸೇವೆಗಳು, ಕುಟುಂಬ ಸಂರಕ್ಷಣೆ ಅಥವಾ ಅಂತಹುದೇ ನಿಯಮಗಳು ಎಂದು ಉಲ್ಲೇಖಿಸಲಾಗುತ್ತದೆ.

ಮಕ್ಕಳು ಮತ್ತು ಹದಿಹರೆಯದವರಲ್ಲಿ ಖಿನ್ನತೆ

ಖಿನ್ನತೆಯು ಮಕ್ಕಳು ಮತ್ತು ಹದಿಹರೆಯದವರಲ್ಲಿ ದೀರ್ಘಕಾಲದ ಅತೃಪ್ತಿ ಅಥವಾ ಕಿರಿಕಿರಿಯ ಅವಧಿಗಳಾಗಿ ಕಾಣಿಸಿಕೊಳ್ಳಬಹುದು. ಹಳೆಯ ಮಕ್ಕಳು ಮತ್ತು ಹದಿಹರೆಯದವರಲ್ಲಿ ಇದು ತುಂಬಾ ಸಾಮಾನ್ಯವಾಗಿದೆ, ಆದರೆ ಆಗಾಗ್ಗೆ ಗುರುತಿಸಲಾಗುವುದಿಲ್ಲ. ಕೆಲವು ಮಕ್ಕಳು ಅವರು ಅಸಂತೋಷ ಅಥವಾ ದುಃಖ ಎಂದು ಹೇಳಬಹುದು. ಇತರರು ತಮ್ಮನ್ನು ತಾವು ನೋಯಿಸಲು ಅಥವಾ ಕೊಲ್ಲಲು ಬಯಸುತ್ತಾರೆ ಎಂದು ಹೇಳಬಹುದು. ಖಿನ್ನತೆಯನ್ನು ಅನುಭವಿಸುವ ಮಕ್ಕಳು ಮತ್ತು ಹದಿಹರೆಯದವರು ಸ್ವಯಂ-ಹಾನಿಯಾಗುವ ಅಪಾಯವನ್ನು ಹೊಂದಿರುತ್ತಾರೆ, ಆದ್ದರಿಂದ ಅಂತಹ ಪ್ರತಿಕ್ರಿಯೆಗಳನ್ನು ಯಾವಾಗಲೂ ಗಂಭೀರವಾಗಿ ತೆಗೆದುಕೊಳ್ಳಬೇಕು.

ಮಗುವಿಗೆ ದುಃಖವಿದೆ ಎಂದು ತೋರುವ ಕಾರಣ, ಅವರು ಖಿನ್ನತೆಯನ್ನು ಹೊಂದಿರುತ್ತಾರೆ ಎಂದು ಅರ್ಥವಲ್ಲ. ಆದರೆ ದುಃಖವು ನಿರಂತರವಾಗಿದ್ದರೆ ಅಥವಾ ಸಾಮಾನ್ಯ ಸಾಮಾಜಿಕ ಚಟುವಟಿಕೆಗಳು, ಆಸಕ್ತಿಗಳು, ಶಾಲಾ ಕೆಲಸ ಅಥವಾ ಕೌಟುಂಬಿಕ ಜೀವನಕ್ಕೆ ಅಡ್ಡಿಪಡಿಸಿದರೆ, ಅವರಿಗೆ ಮಾನಸಿಕ ಆರೋಗ್ಯ ವೃತ್ತಿಪರರಿಂದ ಬೆಂಬಲ ಬೇಕಾಗುತ್ತದೆ ಎಂದರ್ಥ.

ದಿನೇ ದಿನೇ ಹದಿಹರಿಯದವರಲ್ಲಿ ಮಾನಸಿಕ ಖಿನ್ನತೆಗೆ ಒಳಗಾಗುತ್ತಿರುವ ಮಕ್ಕಳು ಹೆಚ್ಚಾಗುತ್ತಿದ್ದಾರೆ ಸರಿಯಾದ ಸಮಯಕ್ಕೆ ಸರಿಯಾದ ರೀತಿಯ ಚಿಕಿತ್ಸೆ ಕೊಡಿಸದಿದ್ದರೆ ಮಕ್ಕಳ ಭವಿಷ್ಯದ ಮೇಲೆ ಪರಿಣಾಮ ಬೀರುತ್ತದೆ ಇದನ್ನು ಪೋಷಕರು ಗಮನಿಸಬೇಕು.

ಇತರರು ತಮ್ಮನ್ನು ತಾವು ನೋಯಿಸಲು ಅಥವಾ ಕೊಲ್ಲಲು ಬಯಸುತ್ತಾರೆ ಎಂದು ಹೇಳಬಹುದು. ಖಿನ್ನತೆಯನ್ನು ಅನುಭವಿಸುವ ಮಕ್ಕಳು ಮತ್ತು ಹದಿಹರೆಯದವರು ಸ್ವಯಂ-ಹಾನಿಯಾಗುವ ಅಪಾಯವನ್ನು ಹೊಂದಿರುತ್ತಾರೆ, ಆದ್ದರಿಂದ ಅಂತಹ ಪ್ರತಿಕ್ರಿಯೆಗಳನ್ನು ಯಾವಾಗಲೂ ಗಂಭೀರವಾಗಿ ತೆಗೆದುಕೊಳ್ಳಬೇಕು.

ಮಾನಸಿಕ ಖಿನ್ನತೆ

ಖಿನ್ನತೆಯು ಮಾನಸಿಕ ಆರೋಗ್ಯದ ಸಾಮಾನ್ಯ ವಿಧಗಳಲ್ಲಿ ಒಂದಾಗಿದೆ ಮತ್ತು ಆಗಾಗ್ಗೆ ಜೊತೆಗೆ ಬೆಳವಣಿಗೆಯಾಗುತ್ತದೆ ಆತಂಕ. ಖಿನ್ನತೆಯು ಸೌಮ್ಯ ಮತ್ತು ಅಲ್ಪಾವಧಿಯದ್ದಾಗಿರಬಹುದು ಅಥವಾ ತೀವ್ರ ಮತ್ತು ದೀರ್ಘಾವಧಿಯದ್ದಾಗಿರಬಹುದು. ಕೆಲವರು ಒಮ್ಮೆ ಮಾತ್ರ ಖಿನ್ನತೆಗೆ ಒಳಗಾಗುತ್ತಾರೆ, ಆದರೆ ಇತರರು ಅದನ್ನು ಹಲವಾರು ಬಾರಿ ಅನುಭವಿಸಬಹುದು.

ಖಿನ್ನತೆಯು ಆತ್ಮಹತ್ಯೆಗೆ ಕಾರಣವಾಗಬಹುದು, ಆದರೆ ಸೂಕ್ತವಾದ ಬೆಂಬಲವನ್ನು ಒದಗಿಸಿದಾಗ ಇದನ್ನು ತಡೆಯಬಹುದು. ಆತ್ಮಹತ್ಯೆಯ ಬಗ್ಗೆ ಯೋಚಿಸುತ್ತಿರುವ ಯುವಕರಿಗೆ ಸಹಾಯ ಮಾಡಲು ಹೆಚ್ಚಿನದನ್ನು ಮಾಡಬಹುದು ಎಂದು ತಿಳಿಯುವುದು ಮುಖ್ಯ.

ಖಿನ್ನತೆಗೆ ಕಾರಣವೇನು?

ನಿಂದನೆ, ಶಾಲೆಯಲ್ಲಿ ಹಿಂಸಾಚಾರ, ಹತ್ತಿರವಿರುವವರ ಸಾವು ಅಥವಾ ಕೌಟುಂಬಿಕ ಹಿಂಸಾಚಾರ ಅಥವಾ ಕೌಟುಂಬಿಕ ವಿಘಟನೆಯಂತಹ ಕೌಟುಂಬಿಕ ಸಮಸ್ಯೆಗಳಿಗೆ ಪ್ರತಿಕ್ರಿಯೆಯಾಗಿ ಖಿನ್ನತೆ ಸಂಭವಿಸಬಹುದು. ದೀರ್ಘಕಾಲದವರೆಗೆ ಒತ್ತಡದ ನಂತರ ಯಾರಾದರೂ ಖಿನ್ನತೆಗೆ ಒಳಗಾಗಬಹುದು. ಇದು ಕುಟುಂಬದಲ್ಲಿಯೂ ನಡೆಸಬಹುದು. ಕೆಲವೊಮ್ಮೆ ಇದು ಏಕೆ ಸಂಭವಿಸುತ್ತದೆ ಎಂದು ನಮಗೆ ತಿಳಿದಿಲ್ಲ.

ನಮಗೆ ತೋಚದೆ ಇರುವ ಸರಳ ಉಪಾಯ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಒಂದು ಊರಿನಲ್ಲಿ ಶ್ರೀಮಂತ ಜಮೀನ್ದಾರನಿದ್ದ. ಆಗಿನ ಕಾಲಕ್ಕೆ ಕೋಟ್ಯಾಧಿಪತಿ. ಆದರೆ ದುರಹಂಕಾರಿ, ಊರಿಗೆ ಊರೇ ಅವನಿಗೆ ಹೆದರುತಿತ್ತು. ಅವನ ಮಾತೆ ಶಾಸನ. ಇಂತಿಪ್ಪ ಮನುಷ್ಯಗೆ ಒಮ್ಮೆ 'ಕಣ್ಣು' ಬೇನೆ ಬಂತು. ದೊಡ್ಡ ದೊಡ್ಡ ವೈದ್ಯರುಗಳಿಂದ ಔಷದೋಪಚಾರ ಮಾಡಿಸಿದ. ಆದರೆ ಫಲಕಾರಿ ಯಾಗದೆ ಕಣ್ಣಿನ ಉರಿ ಹೆಚ್ಚಾಗಿ ಪೂರ್ತಿ ಕಣ್ಣು ಬಿಡಲಾಗದೆ ರೆಪ್ಪೆ ಮುಚ್ಚಿ ನೋಡಬೇಕಾಯಿತು. ಕೊನೆಗೆ ಪಟ್ಟಣದ ಪ್ರಸಿದ್ಧ ಹಿರಿಯ ವೈದ್ಯರ ಹತ್ತಿರ ಹೋದನು, ಕಣ್ಣು ಪರೀಕ್ಷಿಸಿದ ಅವರು, 'ನಿಮ್ಮ ಕಣ್ಣಿಗೆ ಸೋಂಕು ಆಗಿದೆ. ಕಣ್ಣಿನ ಉರಿ ಕಡಿಮೆಯಾಗಲು ಸೂರ್ಯ ಕಿರಣ ಬೀಳಬಾರದು ಹಾಗೆ ಕೇವಲ ಹಸಿರು ಬಣ್ಣ ಮಾತ್ರ ನೋಡಬೇಕು ಬೇರೆ ಬಣ್ಣಗಳನ್ನು ನೋಡಿದರೆ ಕಣ್ಣಿನ ದೃಷ್ಟಿ ಹೋಗುತ್ತದೆ' ಎಂದರು.

ಶ್ರೀಮಂತ, ವೈದ್ಯರ ಮಾತಿಗೆ ಒಪ್ಪಿ ಔಷಧಿ ಪತ್ಯ ಮಾಡಿದ. ಕೇವಲ ಹಸಿರು ಬಣ್ಣ ಮಾತ್ರ ನೋಡಬೇಕೆಂದು, ಗೋಡೆಗಳಿಗೆ ಬಣ್ಣ ಹಚ್ಚುವ ಬಣ್ಣಗಾರರನ್ನು ಕರೆಸಿದ. ತನ್ನ ಮನೆಯ ಗೋಡೆ, ಮಾಳಿಗೆ, ಗೃಹೋಪಕರಣಗಳು ಎಲ್ಲವನ್ನು ಹಸಿರುಮಯ ಮಾಡಿಸಿದ. ಆದರೆ ಹೊರಗೆ ಹೋದಾಗ ಯೋಚಿಸಿದ, ತಾನು ನಿತ್ಯ ಓಡಾಡುವ ಜಾಗವನ್ನು ಹಸಿರು ಮಾಡಿಸಲು, ಮತ್ತಷ್ಟು ಬಣ್ಣ ಬಣ್ಣಗಾರರನ್ನು ಕರೆಸಿದ, 'ನಾನು ಎಲ್ಲೆಲ್ಲಿ ನಡೆದಾಡುತ್ತೇನೋ ಅಲ್ಲೆಲ್ಲ ಹಸಿರು ಬಣ್ಣ ಇರಬೇಕು ಬೇರೆ ಯಾವುದೇ ಬಣ್ಣವಿದ್ದರೂ ಅದನ್ನೆಲ್ಲ ತೆಗೆದು ಹಸಿರು ಬಣ್ಣ ಹಚ್ಚಿರಿ. ಗಮನದಲ್ಲಿರಲಿ ನಾನು ಓಡಾಡುವ ಜಾಗದಲ್ಲಿ ಹಸಿರು ಬಿಟ್ಟು ಬೇರೆ ಯಾವ ಬಣ್ಣಗಳು ಕಣ್ಣಿಗೆ ಬೀಳಬಾರದು' ಎಂದನು.

ಒಂದು ದಿನ ದೂರದ ಊರಿನಿಂದ ಒಬ್ಬ ಬುದ್ಧಿವಂತ ವ್ಯಕ್ತಿ ಬಂದ. ಊರನ್ನು ನೋಡಿದ ಎಲ್ಲೆಲ್ಲಿ ನೋಡಿದರೂ ಹಸಿರು. ಅಲ್ಲಿದ್ದ ಜನಗಳನ್ನು 'ಇದೇನು ನಿಮ್ಮ ಊರಿನಲ್ಲಿ ಎಲ್ಲವೂ ಹಸಿರು ಬಣ್ಣ ಏಕೆ' ಎಂದು ಕೇಳಿದ. ಊರಿನ ಜನರು ಶ್ರೀಮಂತನ ಕಥೆ ಹೇಳಿ ಎಲ್ಲರಿಗೂ ತೊಂದರೆಯಾಗಿದೆ ಆದರೆ ಮಾತಾಡುವಂತಿಲ್ಲ ಎಂದು ದುಃಖವನ್ನು ಹೇಳಿಕೊಂಡರು. ಹೊಸ ವ್ಯಕ್ತಿ ಯೋಚನೆ ಮಾಡಿದ ಮತ್ತು ಜನಗಳಿಗೆ ಹೇಳಿದ 'ಇದಕ್ಕೊಂದು ಸುಲಭ ಉಪಾಯವಿದೆ ಅದನ್ನು ನಿಮ್ಮ ಶ್ರೀಮಂತನಿಗೆ ಹೇಳುತ್ತೇನೆ ನನಗೆ ಅವರ ಪರಿಚಯ ಮಾಡಿಸಿ' ಎಂದನು.

ಜನರು ಶ್ರೀಮಂತನ ಮನೆ ತೋರಿಸಿದರು. ಆ ಬುದ್ಧಿವಂತ ಒಳಗೆ ಬಂದು ಶ್ರೀಮಂತನಲ್ಲಿ ತನ್ನ ಪರಿಚಯ ಮಾಡಿಕೊಂಡು, 'ನಿಮ್ಮ ಕಣ್ಣ ಬೇನೆಯ ಪರಿಹಾರಕ್ಕೆ ನನ್ನ ಹತ್ತಿರ ಒಂದು ಉಪಾಯ ಇದೆ. ಅದಕ್ಕೆ ನೀವು ಇಷ್ಟೊಂದು ಹಣ ಖರ್ಚು ಮಾಡಬೇಕಾಗಿಲ್ಲ, ಇಷ್ಟೊಂದು ಕೆಲಸಗಾರರು ಬೇಡ' ಎಂದನು. ಶ್ರೀಮಂತನಿಗೆ ಆ ಮಾತು ಕೇಳಿ ಬಹಳ ಸಂತೋಷವಾಯಿತು ಏಕೆಂದರೆ ಈಗಾಗಲೇ ಅವನು ನೀರಿನಂತೆ ಹಣ ಚೆಲ್ಲಿದ್ದಾನೆ. ಇನ್ನು ಎಷ್ಟು ಆಗುವುದು ಗೊತ್ತಿಲ್ಲ. ಅವನಿಗೆ ಯೋಚನೆ ಶುರುವಾಗಿದೆ. ಬೇಗ ಹೇಳಿ ಅದು ಎಂಥ ಉಪಾಯ ಎಂದು ಕಾತುರದಿಂದ ಕೇಳಿದ. ಬುದ್ಧಿವಂತ ಹೇಳಿದ, 'ನೀವು ನಿಮ್ಮ ಕಣ್ಣಿಗೆ ಹಸಿರು ಬಣ್ಣದ ಕನ್ನಡಕವನ್ನು ಹಾಕಿರಿ ಅದರ ಬೆಲೆ ಕೇವಲ ಕೆಲವೇ ರುಪಾಯಿಗಳು. ಆಗ ನೀವು ನೋಡುವ ಎಲ್ಲ ವಸ್ತುಗಳು, ಪ್ರಕೃತಿ ಮತ್ತು ವ್ಯಕ್ತಿಗಳು ಪ್ರಾಣಿ, ಪಶು, ಪಕ್ಷಿ, ಎಲ್ಲವೂ ಹಸಿರಾಗಿಯೇ ಕಾಣುತ್ತದೆ' ಎಂದನು.

ಶ್ರೀಮಂತನಿಗೆ ಈ ಮಾತು ಕೇಳಿ ತುಂಬಾ ಆಶ್ಚರ್ಯವಾಯಿತು 'ನಾನ್ಯಾಕೆ ಇಷ್ಟು ಸುಲಭದ ಉಪಾಯವನ್ನು ಯೋಚಿಸಲಿಲ್ಲ' ಎಂದು ಅವನಿಗೆ ಉಡುಗೊರೆಗಳನ್ನು ಕೊಟ್ಟು ಕಳಿಸಿದನು. ಕೆಲವೊಮ್ಮೆ ನಮಗೆ ಸಮಸ್ಯೆಗಳು ಬೆಟ್ಟದಂತೆ ಕಾಡುತ್ತಿರುತ್ತವೆ. ಆದರೆ ಅದನ್ನು ಮೂರನೆಯವರ ದೃಷ್ಟಿಕೋನದಿಂದ ನೋಡಿದಾಗ ಸುಲಭವಾದ ಉಪಾಯಗಳು ಸಿಕ್ಕಿ ಬಿಡಬಹುದು. ಆದ್ದರಿಂದಲೇ ಸ್ನೇಹಿತರನ್ನು ಸಂಪಾದಿಸಿ ಅವರೊಡನೆ ಕಷ್ಟ ಸುಖಗಳನ್ನ ಹಂಚಿಕೊಳ್ಳಿ. ನಮ್ಮ ಕಷ್ಟಕ್ಕೆ ಆತ್ಮೀಯರಿಂದ ಕೆಲವೊಮ್ಮೆ ಸಮಂಜಸವಾದ ಪರಿಹಾರ ಸಿಕ್ಕಿಬಿಡುತ್ತದೆ. ಅದನ್ನು ನೋಡುವ ದೃಷ್ಟಿಕೋನ ಬದಲಾಯಿಸಬೇಕಷ್ಟೆ.

ಪದಬಂಧ



ಎಡದಿಂದ ಬಲಕೆ

2. ಪತನವಾದಾಗ ದುಃಖಿಸುವುದು (3)
5. ಹಾನಿಕರವಾದುದು (3)
7. ಅಣ್ಣನ ಹೆಂಡತಿ (3)
9. ಅನ್ಯರಿಗೆ ಮಾಡುವ ಸಹಾಯ (5)
10. ನಿಸ್ಸಾರವಾದುದು ಚಟದ ನಡುವೆಯೇ ಇದೆ (3)
12. ಯಾರಿಗೂ ನಿಲ್ಲದೆ ಓದುವ ಕಾಲ (3)
14. ಊಳಿಗ ಅಥವಾ ನೌಕರಿ (3)
17. ಮೂರಕ್ಷರದ ನಶೆ (3)
19. ತುಳಸಿಯ ಜಾತಿಗೆ ಸೇರಿದ ಸುವಾಸನೆಯ ಸಸ್ಯ (5)
20. ಒಣಗಿರುವ ಸಣ್ಣ ಕಟ್ಟಿಗೆ ಮುಂತಾದ ಉರುವಲು ಅಸ್ತವ್ಯಸ್ತವಾಗಿದೆ (3)
22. ಇನ್ನೊಂದು ಕಾರ್ಯ (3)
24. ಅದೇ ಸಮಯ (3)

ಮೇಲಿನಿಂದಕೆಳಕ್ಕೆ

1. ದೂತ ಅಥವಾ ಸೇವಕನಿಗೆ ಮತ್ತೊಂದು ಹೆಸರು (2)
3. ಶಿವನಿಗೆ ಹೀಗೊಂದು ಹೆಸರಿದೆ (4)
4. ಮೇಲೇರಿ ಎನ್ನುತ್ತಾ ಬಂದ ಅರಳೆ (2)
5. ಸೀತೆಯ ಮುಂದೆ ಮಾಯಾಜಿಂಕೆಯಾಗಿ ಬಂದ ರಾಕ್ಷಸ (3)
6. ಮೋಸಕ್ಕೆ ಮತ್ತೊಂದು ಹೆಸರು (3)
7. ರಸದೊಂದಿಗೆ ಬಂದಿರುವ ರಾಜ (3)
8. ಕಷ್ಟ ಸುಖಗಳಲ್ಲಿ ಜೊತೆಯಾಗುವ ಮಿತ್ರ (3)
11. ಬಟ್ಟೆ ಒಗೆದು ಶುಚಿಮಾಡುವವನು (3)
13. ನಡುವೆ ಇರುವದು ಎಂದರ್ಥ (3)
14. ಚಮರೀ ಮೃಗದ ಕೂದಲಿನಿಂದ ಮಾಡಿದ ಬೀಸಣಿಕೆ (3)
15. ಜೇನಿಗೆ ಅಳವಡಿಸಿರುವ ಬಳೆ (3)
16. ವಿಷ್ಣುವಿಗೆ ಹೀಗೆನ್ನಬಹುದು (4)
17. ಆಕೆ ಮಾಡಿದ ವಿಜ್ಞಾಪನೆ (3)
18. ಸಾಲು ಸಾಲಾಗಿ ಮಾಡಿದ ಪ್ರಶ್ನೆ (3)
21. ನೀರಿನ ತರಂಗ ತಿರುಗಿದೆ (2)
23. ಶ್ರೀರಾಮನ ಒಬ್ಬ ಮಗ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ
1. ಆಕ್ರಂದನ 3. ಳಿವಅ 6. ಕರ್ಥರನಿ 7. ದುರದೃಷ್ಟ 9. ಧಿಮಾಕು 11. ಶಮನ 13. ಪತನ 15. ವತನ 17. ಅರವಿಂದ 18. ವರಮಾನ 19. ನವಣೆ 20. ಗಡಿಬಿಡಿ

ಮೇಲಿನಿಂದ ಕೆಳಕ್ಕೆ:
2. ನವನಿಧಿ 4. ಅಮಿಷ್ಟ 5. ಬದುಕು 6. ಕರ್ಕಶ 8. ದೃಷ್ಟಾಂತ 10. ಮಾರುತಿ 12. ಮಯೂರ 14. ನಯನ 15. ವದನ 16. ನವರಂಗ 17. ಅರ್ಜುನ

• ಸಿ. ರವಿಶಂಕರ ಶಾಸ್ತ್ರಿ ದಂಬೆ

ನಮ್ಮದು ಯಾವುದು, ನಮ್ಮದಲ್ಲದ್ದು ಯಾವುದು.. ?

ನಿತ್ಯ ಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ • ಕೆ.ಶಿವಪ್ರಸಾದ್

ನಮ್ಮ ಬುದ್ಧಿಮತ್ತೆಯನ್ನು ಉಪಯೋಗಿಸಿ ನಾವು ಮೋಹಕ ಲೀಲೆ (ಭ್ರಮೆ ಎಂಬ ಅಂಧಕಾರ)ಯನ್ನು ದಾಟಿದಾಗ ನಾವು ಕೇಳಿದ್ದರ ಅಥವಾ ಕೇಳಬಹುದಾದ ಬಗ್ಗೆ ಉದಾಸಿನರಾಗುತ್ತೇವೆ ಎಂಬುದು ಕೃಷ್ಣನ ಹೇಳಿಕೆ (2.55) ಇದರ ಅರ್ಥ ನಾವು ಮೋಹವನ್ನು ಜಯಸಿದಾಗ ಇಂದ್ರಿಯಗಳಿಂದ ನಮಗೆ ಬಂದ ವಿಷಯಗಳು ತಮಗೆ ಬಂದಂತೆ ನಮ್ಮ ಮೇಲೆ ಪ್ರಭಾವ ಬೀರುವ ಶಕ್ತಿಯನ್ನು ಕಳೆದುಕೊಳ್ಳುತ್ತವೆ ಎಂಬುದು ಕೃಷ್ಣನ ಹೇಳಿಕೆ. ಕೇಳುವುದು ಎಂಬ ಶಬ್ದವನ್ನು ಕೃಷ್ಣ ಇಲ್ಲಿ ರೂಪಕವಾಗಿ ಬಳಸಿದ್ದಾನೆ. ಯಾಕೆಂದರೆ ನಾವು ಇತರರ ಹೊಗಳಿಕೆ, ತೆಗಳಿಕೆ, ಕಾಡು ಹರಟೆ, ಗಾಳಿ ಸುದ್ದಿಗಳಿಂದ ಪದೇಪದೇ ಪ್ರಭಾವಿತ ರಾಗುತ್ತೇವೆ.

ವರ್ಣಿಸಲು ಸರಿಯಾದ ಶಬ್ದಗಳಿಲ್ಲದಿರುವಾಗ ಅಹಂಕಾರ ದಂತೆ ಮೋಹ ಎಂಬುದನ್ನು ವಿವರಿಸುವುದು ಕಷ್ಟವಾಗುತ್ತದೆ. ಮೂಲಭೂತವಾಗಿ ನಮ್ಮದು ಯಾವುದು ನಮ್ಮದಲ್ಲದ್ದು ಯಾವುದು ಎಂಬುದನ್ನು ಗುರುತಿಸುವಲ್ಲಿಯ ನಮ್ಮ ಸಾಮರ್ಥ್ಯ ಇದಾಗಿದೆ. ವರ್ತಮಾನ ಹಾಗೂ ಭವಿಷ್ಯದಲ್ಲಿ ಭೌತಿಕ ವಸ್ತುಗಳು ಹಾಗೂ ಭಾವನೆಗಳ ಮೇಲಿನ ನಮ್ಮ ಒಡೆತನದ ತಿಳುವಳಿಕೆ ಯಾಗಿದೆ. ನಿಜವಾಗಿ ನಾವು ಅವುಗಳ ಒಡೆಯರೇ ಅಲ್ಲ. ನಮ್ಮದಲ್ಲದಕ್ಕೆ ನಾವು ಅಂಟಿಕೊಳ್ಳುವಾಗ ನಮ್ಮದು ಯಾವುದು ಎಂಬುದರ ಬಗ್ಗೆ ನಮಗೆ ಸುಳಿವೇ ಸಿಗುವುದಿಲ್ಲ. (ಅದು ದೇಹಿ/ ಆತ್ಮವಾಗಿರುತ್ತದೆ) ಇದನ್ನು ಕೃಷ್ಣ (ಕಲಿಲಂ) ಅಥವಾ ಆಧ್ಯಾತ್ಮಿಕ ಅಂಧಕಾರ ಎಂದು ಕರೆಯುತ್ತಾನೆ. ಈ ಅಂಧಕಾರವನ್ನು ನಾವು ದಾಟಿ ಬಂದಾಗ ನಾವು ನಿರ್ವೇದ ಹೊಂದುತ್ತೇವೆ ಎಂದು ಕೃಷ್ಣ ತಿಳಿಸುತ್ತಾನೆ. ನಿರ್ವೇದವು ಉದಾಸೀನ ಎಂದು ವರ್ಣಿಸಲ್ಪಟ್ಟಿದ್ದರೂ ಇದು ಅಜ್ಞಾನದಿಂದ ಉದ್ಭವಿಸಿದ ಧನಾತ್ಮಕ ಅಥವಾ ಋಣಾತ್ಮಕದ ಉದಾಸೀನತೆ ಅಲ್ಲ. ಸಮಯಕ್ಕೆ ಸರಿಯಾಗಿ ಉದ್ಭವಿಸಿದ ಜಾಗೃತಿ. ಜೀವಂತಿಕೆಯಿಂದ ಉದ್ಭವಿಸಿದ ಉದಾಸೀನತೆ ಇದಾಗಿದೆ. ಇದು ಮೋಹವು ಅಲ್ಲ, ನಿರ್ಮೋಹವು ಅಲ್ಲ. ಇವೆರಡನ್ನು ಮೀರಿದೆ. ಯಾವ ನಿರ್ಣಯ ಅಥವಾ ಹಣೆಪಟ್ಟಿ ಕೊಡದೆ ಕ್ರಿಯಾಶೀಲ ಸ್ವೀಕಾರ ಇದಾಗಿದೆ. ಇತರರ ಇಷ್ಟ ಜೀವನದಲ್ಲಿ ನಾವು ನಮ್ಮ ಆಸ್ತಿ, ಸಾಮರ್ಥ್ಯ, ಸಾಧನೆ, ನಡತೆ, ದೃಷ್ಟಿಗಳ ಬಗ್ಗೆ ಇತರರ ಸ್ವೀಕೃತಿ, (ಸಮ್ಮತಿ) ಮೆಚ್ಚುಗೆ, ಹೊಗಳಿಕೆ, ನಡತೆಗಳ ಬಗ್ಗೆ ಹಾತೊರೆಯುತ್ತೇವೆ. ನಾವು ನಮ್ಮ ಜಾಗೃತಿಯಿಂದ ಮೋಹವನ್ನು ಜಯಿಸುವವರೆಗೆ ಜೀವನದುದ್ದಕ್ಕೂ ಪ್ರತಿಫಲವುಳ್ಳ ಸಂವೇದನಗಳು ಪಡೆಯಲು ಕಠಿಣ ಪರಿಶ್ರಮ ಮಾಡುತ್ತೇವೆ. ನಮ್ಮ ಸಮತೋಲಿತ ಹಾಗೂ ಸುಸಂಭದ್ಧ ಬುದ್ಧಿಯಿಂದ ಮೋಹದಿಂದುಂಟಾದ ಅಂಧಕಾರವನ್ನು ನಾವು ಒಮ್ಮೆ ತೊಡೆದು ಹಾಕಿದಾಗ ವರ್ತಮಾನದ ಅಥವಾ ಭವಿಷ್ಯದ ಈ ಇಂದ್ರಿಯ ಗ್ರಹಿಕೆಗಳು ನಮ್ಮ ಮೇಲಿನ ಯಾವ ಪರಿಣಾಮವನ್ನು ಮಾಡಲಾರವು.

ಸಮಾಚಾರ ಸಣ್ಣದಲ್ಲ

ಅಂಬಾಟಿ ರಾಯುಡುಗೂ ವಿರಾಟ್ ಕೊಹ್ಲಿ ತೊಂದರೆ

ದೆಹಲಿ: ಅಂಬಾಟಿ ರಾಯುಡು 2019ರ ವಿಶ್ವಕಪ್ ತಂಡಕ್ಕೆ ಆಯ್ಕೆ ಆಗದಿರಲು ಸಹ ವಿರಾಟ್ ಕೊಹ್ಲಿ ಅವರೇ ಕಾರಣ ಎಂದು ಹೊಸ ಟೀಂ ಇಂಡಿಯಾ ಮಾಜಿ ಆಟಗಾರ, ಕರ್ನಾಟಕದ ರಾಬಿನ್ ಉತ್ತಪ್ಪ ಹೇಳಿದ್ದಾರೆ. 2019ರ ವಿಶ್ವಕಪ್ ವೇಳೆಗೆ ಅಂಬಟಿ ರಾಯುಡು ಅವರು ಉತ್ತಮ ಫಾರ್ಮ್‌ನಲ್ಲಿದ್ದರು, ಹೀಗಾಗಿ ಭಾರತ ತಂಡಕ್ಕೆ ಆಯ್ಕೆಯಾಗುವ ನಿರೀಕ್ಷೆ ಇತ್ತು. ಆದರೆ ಎಂ.ಎಸ್.ಕೆ ನೇತೃತ್ವದ ಬಿಸಿಸಿಐ ಆಯ್ಕೆ ಸಮಿತಿ ಅವರನ್ನು ಕಡೆಗಣಿಸಿ ಸವ್ಯಸಾಚಿ ವಿಜಯಶಂಕರ್‌ಗೆ ಮಣೆ ಹಾಕಿತು. ಇದು ಅಂಬಾಟಿ ರಾಯುಡು ಅವರನ್ನು ರೊಚ್ಚಿಗೆಬ್ಬಿಸಿತ್ತು ಎಂದು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಆಯ್ಕೆ ಸಮಿತಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಇದರಿಂದಾಗಿ ಅಂಬಾಟಿ ರಾಯುಡು ವಿಶ್ವಕಪ್ ತಂಡಕ್ಕೆ ಸೇರ್ಪಡೆಯಾಗುವ ಇದ್ದ ಅವಕಾಶ ದೂರವಾಯಿತು. ಪ್ರವಾಸದ ಮಧ್ಯೆ ಭಾರತ ತಂಡಕ್ಕೆ ಇಬ್ಬರು ಆಟಗಾರರು ಬದಲಿ ಬೇಕಿದ್ದರೂ ಅಂಬಾಟಿ ರಾಯುಡು ಅವರನ್ನು ಪರಿಗಣಿಸಲೇ ಇಲ್ಲ ಎಂದೂ ರಾಬಿನ್ ಉತ್ತಪ್ಪ ಬಹಿರಂಗ ಗೊಳಿಸಿದ್ದಾರೆ.

ಜೆಮಿಮಾ ರಾಡ್ರಿಗಸ್ ಚೊಚ್ಚಲ ಶತಕ | ವನಿತಾ ಪಡೆಗೆ 2–0 ಏಕದಿನ ಸರಣಿ ಗೆಲುವು

ಐರ್ಲೆಂಡ್ ವಿರುದ್ಧ ಸರಣಿ ಜಯ

ರಾಜ್‌ಕೋಟ್: ಇಲ್ಲಿ ನಡೆದ ಐರ್ಲೆಂಡ್ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿಯ ಎರಡನೇ ಪಂದ್ಯವನ್ನು 115 ರನ್‌ಗಳಿಂದ ಗೆದ್ದುಕೊಳ್ಳುವು ದರೊಂದಿಗೆ ಇನ್ನೊಂದು ಪಂದ್ಯ ಬಾಕಿ ಇರುವಂತೆಯೇ ಭಾರತ ವನಿತಾ ಪಡೆ ಏಕದಿನ ಸರಣಿಯನ್ನು ತನ್ನ ಖಾತೆಗೆ ಹಾಕಿಕೊಂಡಿದೆ. ಈ ಮೂಲಕ ಈ ವರ್ಷವನ್ನು ಸರಣಿ ಗೆಲುವಿನೊಂದಿಗೆ ಮಹಿಳಾ ಪಡೆ ಆರಂಭಿಸಿದೆ. ಐರ್ಲೆಂಡ್ ಸರಣಿಗೂ ಮುನ್ನ ನಡೆದಿದ್ದ ವೆಸ್ಟ್ ಇಂಡೀಸ್ ವಿರುದ್ಧದ ಟಿ20 ಹಾಗೂ ಏಕದಿನ ಸರಣಿಯನ್ನು ಗೆದ್ದುಕೊಳ್ಳುವಲ್ಲಿ ಮಹಿಳಾ ತಂಡ ಯಶಸ್ವಿಯಾಗಿತ್ತು.

ನಾಯಕಿ ಹರ್ಮನ್ ಪ್ರೀತ್ ಕೌರ್ ಅವರ ಅನುಪಸ್ಥಿತಿಯಲ್ಲಿ ತಂಡದ ನಾಯಕತ್ವ ವಹಿಸಿಕೊಂಡಿರುವ ಸ್ಮೃತಿ ಮಂಧಾನ ತಂಡವನ್ನು ಗೆಲುವಿನತ್ತ ಮುನ್ನಡೆಸಿದ್ದಾರೆ. ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಟೀಂ ಇಂಡಿಯಾ, ಜೆಮಿಮಾ ರಾಡ್ರಿಗಸ್ ಅವರ ಮೊದಲ ಏಕದಿನ ಶತಕ ಮತ್ತು ಸ್ಮೃತಿ, ಪ್ರತಿಕಾ ಹಾಗೂ ಹರ್ಲೀನ್ ಅವರ ಅರ್ಧಶತಕದ ನೆರವಿನಿಂದ 370 ರನ್ ಕಲೆಹಾಕಿತು. ಈ ಗುರಿ ಬೆನ್ನಟ್ಟಿದ ಐರ್ಲೆಂಡ್ ತಂಡವು ದೀಪ್ತಿ ಶರ್ಮಾ ನೇತೃತ್ವದ ಸ್ಪಿನ್ನರ್‌ಗಳ ಬಿಗಿಯಾದ ಬೌಲಿಂಗ್ ದಾಳಿಗೆ ತತ್ತರಿಸಿ 50 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 254 ರನ್ ಕಲೆ ಹಾಕಲಷ್ಟೇ ಶಕ್ತವಾಯಿತು.

ಜೆಮಿಮಾ ಚೊಚ್ಚಲ ಶತಕ: ನಾಲ್ಕನೇ ಕ್ರಮಾಂಕದಲ್ಲಿ ಬಂದ ಜೆಮಿಮಾ ರಾಡ್ರಿಗಸ್ ಕೊನೆಗೂ ತಮ್ಮ ಶತಕದ ಬರವನ್ನು ನೀಗಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಟೀಂ ಇಂಡಿಯಾ ಪರ 7 ವರ್ಷಗಳಿಂದ ಆಡುತ್ತಿರುವ ಜೆಮಿಮಾಗೆ ಒಂದೇ ಒಂದು ಶತಕ ಬಾರಿಸಲು ಇದುವರೆಗೂ ಸಾಧ್ಯವಾಗಿರಲಿಲ್ಲ.

ಆದರೆ ಈ ಪಂದ್ಯದಲ್ಲಿ ಅದ್ಭುತ ಇನ್ನಿಂಗ್ಸ್ ಆಡಿದ ಜೆಮಿಮಾ ಕೇವಲ 91 ಎಸೆತಗಳಲ್ಲಿ 12 ಬೌಂಡರಿಗಳ ಸಹಿತ 102 ರನ್‌ಗಳ ಸ್ಮರಣೀಯ ಇನ್ನಿಂಗ್ಸ್ ಆಡಿದರು. ಹಾಗಾಗಿ ಭಾರತ ತಂಡ ಏಕದಿನದಲ್ಲಿ ಗರಿಷ್ಠ ಸ್ಕೋರ್ ದಾಖಲಿಸಿದ ದಾಖಲೆಯನ್ನು ಬರೆಯಿತು. ಇದಕ್ಕೂ ಮುನ್ನ ಭಾರತದ ಗರಿಷ್ಠ ಸ್ಕೋರ್ 358 ರನ್ ಆಗಿದ್ದು, ಕಾಕತಾಳೀಯವಾಗಿ ಅದೂ ಕೂಡ 2017ರಲ್ಲಿ ಐರ್ಲೆಂಡ್ ವಿರುದ್ಧವೇ ಬಂದಿತ್ತು.

ಈ ಬೃಹತ್ ಗುರಿ ಬೆನ್ನಟ್ಟಿದ ಐರ್ಲೆಂಡ್‌ಗೆ ಉತ್ತಮ ಆರಂಭ ಸಿಗಲಿಲ್ಲ. ತಂಡದ ನಾಯಕಿ ಗ್ಯಾಬಿ ಲೂಯಿಸ್ 8ನೇ ಓವರ್‌ನಲ್ಲಿ ಪೆವಿಲಿಯನ್ ಸೇರಿಕೊಂಡರು. ಇದಾದ ಬಳಿಕ ಕ್ರಿಸ್ಟಿನಾ ಕೌಲ್ಟರ್ ರಿಲೆ (82) ಬಲಿಷ್ಠ ಇನ್ನಿಂಗ್ಸ್ ಆಡಿದರೂ ಉಳಿದವರಿಂದ ಅವರಿಗೆ ಹೆಚ್ಚಿನ ಬೆಂಬಲ ಸಿಗಲಿಲ್ಲ. ಸ್ಪಿನ್ನರ್‌ಗಳಾದ ದೀಪ್ತಿ ಶರ್ಮಾ (3 ವಿಕೆಟ್) ಮತ್ತು ಪ್ರಿಯಾ ಮಿಶ್ರಾ (2 ವಿಕೆಟ್) ಐರ್ಲೆಂಡ್‌ನ ಮಧ್ಯಮ ಕ್ರಮಾಂಕವನ್ನು ಬೇಗನೇ ಪೆವಿಲಿಯನ್‌ಗಟ್ಟುವ ಕೆಲಸ ಮಾಡಿದರು. ಅಂತಿಮವಾಗಿ ಐರಿಷ್ ತಂಡ 50 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 254 ರನ್ ಗಳಿಸಲಷ್ಟೇ ಶಕ್ತವಾಯಿತು.

ಮೂವರ ಅರ್ಧಶತಕ

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಲು ನಿರ್ಧರಿಸಿದ ಭಾರತಕ್ಕೆ ಆರಂಭಿಕರಾದ ಸ್ಮೃತಿ ಮಂಧಾನ ಮತ್ತು ಪ್ರತೀಕಾ ಮೊದಲ ವಿಕೆಟ್‌ಗೆ 156 ರನ್‌ಗಳ ಜೊತೆಯಾಟ ನೀಡಿದರು. ಈ ವೇಳೆ ನಾಯಕಿ ಸ್ಮೃತಿ ಕೇವಲ 54 ಎಸೆತಗಳಲ್ಲಿ 75 ರನ್ ಕಲೆಹಾಕಿ ವಿಕೆಟ್ ಒಪ್ಪಿಸಿದರೆ, ಪ್ರತೀಕಾ ರಾವಲ್ ಕೂಡ (67) ಸತತ ಎರಡನೇ ಪಂದ್ಯದಲ್ಲಿ ಅರ್ಧ ಶತಕ ಗಳಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಹರ್ಲೀನ್ ಡಿಯೋಲ್ ಕೂಡ ತಮ್ಮ ಉತ್ತಮ ಫಾರ್ಮ್ ಅನ್ನು ಮುಂದುವರೆಸಿ 89 ರನ್‌ಗಳ ಇನ್ನಿಂಗ್ಸ್ ಆಡಿದರು.

ಸದ್ಯದಲ್ಲೇ ವೇಳಾಪಟ್ಟಿ ಪ್ರಕಟ | ರಾಜೀವ್ ಶುಕ್ಲಾ ಅಧಿಕೃತ ಘೋಷಣೆ

ಮಾರ್ಚ್ 23ರಿಂದ ಐಪಿಎಲ್ ಹಂಗಾಮ

ದೆಹಲಿ: 18ನೇ ಆವೃತ್ತಿಯ ಐಪಿಎಲ್ ಯಾವ ದಿನಾಂಕದಿಂದ ಆರಂಭವಾಗಲಿದೆ ಎಂಬುದು ಇದೀಗ ಖಚಿತವಾಗಿದೆ. ಈ ವಿಚಾರವನ್ನು ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ ಅವರು ಬಹಿರಂಗ ಪಡಿಸಿದ್ದಾರೆ. ಬಿಸಿಸಿಐನ ವಿಶೇಷ ಸಾಮಾನ್ಯ ಸಭೆಯ ನಂತರ ಮಾಧ್ಯಮಗಳೊಂದಿಗೆ ಮಾತನಾಡಿರುವ ರಾಜೀವ್ ಶುಕ್ಲಾ, ಮಾರ್ಚ್ 23ರಿಂದ ಐಪಿಎಲ್ ಆರಂಭವಾಗಲಿದೆ ಎಂದು ಖಚಿತಪಡಿಸಿದ್ದಾರೆ.

ಒಂದು ವರ್ಷಕ್ಕೆ ಐಪಿಎಲ್ ಆಯುಕ್ತರ ನೇಮಕವನ್ನೂ ಮಾಡಲಾಗಿದೆ, ಜೊತೆಗೆ ಮಹಿಳಾ ಪ್ರೀಮಿಯರ್ ಲೀಗ್ ಬಗ್ಗೆಯೂ ಕೆಲವೊಂದು ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದ್ದು, ಈ ಟೂರ್ನಿಯನ್ನು ಆಯೋಜಿಸಲು ಸ್ಥಳಗಳನ್ನು ಸಹ ನಿರ್ಧರಿಸಲಾಗಿದೆ, ಅದನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ರಾಜೀವ್ ಶುಕ್ಲಾ ಹೇಳಿದ್ದಾರೆ.

ಫೆಬ್ರವರಿ 18ರಿಂದ ಆರಂಭವಾಗಲಿರುವ ಚಾಂಪಿಯನ್ಸ್ ಟ್ರೋಫಿ ಹಾಗೂ ಅದಕ್ಕೂ ಮುನ್ನ ನಡೆಯುವ ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಗೆ ಭಾರತ ಏಕದಿನ ತಂಡದ ಆಯ್ಕೆ ಇನ್ನೂ ಆಗಿಲ್ಲ. ಚಾಂಪಿಯನ್ಸ್ ಟ್ರೋಫಿಗೆ ತಂಡವನ್ನು ಪ್ರಕಟಿಸಲು ಐಸಿಸಿ ಇಂದು ಕೊನೆಯ ದಿನವಾಗಿ ಗಡುವು ನೀಡಿತ್ತು. ಆದರೆ ಬಿಸಿಸಿಐ ತನ್ನ ತಂಡ ಪ್ರಕಟಿಸಲು ಐಸಿಸಿ ಬಳಿ ಕೊಂಚ ಸಮಯಾವಕಾಶ ಕೇಳಿದೆ ಎಂದು ಹೇಳಲಾಗಿತ್ತು. ಇದೀಗ ರಾಜೀವ್ ಶುಕ್ಲಾ ಅವರು ತಂಡವನ್ನು ಯಾವಾಗ ಆಯ್ಕೆ ಮಾಡುತ್ತಾರೆ ಎಂಬುದರ ಕುರಿತು ಸುಳಿವು ನೀಡಿದ್ದು ಜನವರಿ 18 ಅಥವಾ 19ರಂದು ಆಯ್ಕೆ ಸಮಿತಿ ಸಭೆ ನಡೆಯಲಿದೆ ಎಂದು ರಾಜೀವ್ ಶುಕ್ಲಾ ತಿಳಿಸಿದ್ದಾರೆ.

ಏಕದಿನದಲ್ಲಿ ತ್ರಿಶತಕದ ಸಾಧನೆ

ಬೆಂಗಳೂರು: ಭಾರತದ ದೇಶೀಯ ಕ್ರಿಕೆಟ್‌ನಲ್ಲಿ ನಡೆಯುತ್ತಿರುವ 19 ವರ್ಷದೊಳಗಿನವರ ಮಹಿಳಾ ಏಕದಿನ ಟ್ರೋಫಿಯಲ್ಲಿ ತ್ರಿಶಕದ ಇನ್ನಿಂಗ್ಸ್ ಮೂಡಿಬಂದಿದ್ದು, ಮುಂಬೈನ ಯುವ ಬ್ಯಾಟರ್ 14 ವರ್ಷದ ಇರಾ ಜಾಧವ್ ಈ ಸಾಧನೆ ಮಾಡಿದ್ದಾರೆ.

ಇಲ್ಲಿನ ಆಲೂರು ಕ್ರೀಡಾಂಗಣದಲ್ಲಿ ನಡೆದ ಮುಂಬೈ ಹಾಗೂ ಮೇಘಾಲಯ ನಡುವಿನ ಪಂದ್ಯದಲ್ಲಿ ಅವರು 157 ಎಸೆತಗಳಲ್ಲಿ 346 ರನ್‌ಗಳ ಅಜೇಯ ಇನ್ನಿಂಗ್ಸ್ ಆಡಿದರು. ಈ ವೇಳೆ ಅವರ ಬ್ಯಾಟ್‌ನಿಂದ 42 ಬೌಂಡರಿ ಹಾಗೂ 16 ಸಿಕ್ಸರ್ ಕೂಡ ಸಿಡಿದವು. 220 ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟ್ ಬೀಸಿದ ಅವರು 138 ಎಸೆತಗಳಲ್ಲಿ ತಮ್ಮ ತ್ರಿಶತಕ ಪೂರೈಸಿದರು. ಇದರೊಂದಿಗೆ ಇರಾ ಜಾಧವ್ 19 ವರ್ಷದೊಳಗಿನವರ ಏಕದಿನ ಟ್ರೋಫಿಯಲ್ಲಿ ತ್ರಿಶತಕ ಸಿಡಿಸಿದ ಭಾರತದ ಮೊದಲ ಆಟಗಾರ್ತಿ ಎನಿಸಿಕೊಂಡರು.

ಸ್ಮೃತಿ ದಾಖಲೆ ಉಡೀಸ್: ಇರಾ ಜಾಧವ್ ಅವರಿಗಿಂತ ಮೊದಲು 19 ವರ್ಷದೊಳಗಿನವರ ಏಕದಿನ ಟ್ರೋಫಿಯಲ್ಲಿ ಭಾರತದ ಪರ ಅತಿದೊಡ್ಡ ಇನ್ನಿಂಗ್ಸ್ ಆಡಿದ ದಾಖಲೆ ಸ್ಮೃತಿ ಮಂಧಾನ ಹೆಸರಿನಲ್ಲಿತ್ತು. ಅವರು 224 ರನ್‌ಗಳ ಅಜೇಯ ಇನ್ನಿಂಗ್ಸ್ ಆಡಿದ್ದರು. ಇದೀಗ ತ್ರಿಶತಕ ಬಾರಿಸಿರುವ ಇರಾ ಜಾಧವ್‌ರವರು ಮಂಧಾನ ದಾಖಲೆಯನ್ನು ಮುರಿದಿದ್ದಾರೆ. ಇವರಲ್ಲದೆ ರಾಘವಿ ಬಿಶ್ತ್, ಜೆಮಿಮಾ ರೋಡ್ರಿಗಸ್ ಮತ್ತು ಸಾನಿಕಾ ಚಲ್ಕೆ ಅವರು ಕೂಡ ಅಂಡರ್–19 ಏಕದಿನ ಪಂದ್ಯಗಳಲ್ಲಿ ದ್ವಿಶತಕ ಸಿಡಿಸಿದ ಸಾಧನೆ ಮಾಡಿದ್ದಾರೆ.

ಸತತ 4ನೇ ಶತಕ ಸಿಡಿಸಿದ ಕನ್ನಡಿಗ ಕರುಣ್ ನಾಯರ್ | ರಾಜಸ್ಥಾನ ತಂಡಕ್ಕೆ ಸೋಲು

ವಿದರ್ಭ ತಂಡ ಸೆಮೀಸ್‌ಗೆ

ವಡೋದರ: ವಿಜಯ್ ಹಜಾರೆ ಟ್ರೋಫಿಯನಲ್ಲಿ ಭಾನುವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ವಿದರ್ಭ ತಂಡವು ರಾಜಸ್ಥಾನ ತಂಡವನ್ನು 9 ವಿಕೆಟ್‌ಗಳಿಂದ ಮಣಿಸಿ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿದೆ. ವಡೋದರದ ಮೋತಿಬಾಗ್ ಕ್ರಿಕೆಟ್ ಮೈದಾನದಲ್ಲಿ ನಡೆದ ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ ತಂಡ 8 ವಿಕೆಟ್ ನಷ್ಟಕ್ಕೆ 291 ರನ್ ಕಲೆ ಹಾಕಿತು. ಈ ಗುರಿ ಬೆನ್ನಟ್ಟಿದ ವಿದರ್ಭ ತಂಡ ಇನ್ನು 39 ಎಸೆತಗಳು ಬಾಕಿ ಇರುವಂತೆಯೇ ಕೇವಲ 1 ವಿಕೆಟ್ ಕಳೆದುಕೊಂಡು ಜಯದ ನಗೆ ಬೀರಿತು. ತಂಡದ ಪರ ಗೆಲುವಿನ ಇನ್ನಿಂಗ್ಸ್ ಆಡಿದ ನಾಯಕ ಕರುಣ್ ನಾಯರ್ ಈ ಟೂರ್ನಿಯಲ್ಲಿ ಸತತ 4ನೇ ಶತಕ ಸಿಡಿಸಿ ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಈ ಸಾಧನೆ ಮಾಡಿದ ಮೂರನೇ ಭಾರತೀಯ ಎಂಬ ದಾಖಲೆಯನ್ನು ನಿರ್ಮಿಸಿದರು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ ತಂಡದ ಪರ ಶುಭಂ ಗರ್ವಾಲ್ 59, ಕಾರ್ತಿಕ್ ಶರ್ಮಾ 62 ಹಾಗೂ ದೀಪಕ್ ಹೂಡಾ 45 ರನ್‌ಗಳ ಇನ್ನಿಂಗ್ಸ್ ಆಡಿದರು. ಈ ಮೂವರನ್ನು ಬಿಟ್ಟರೆ ಉಳಿದವರಿಂದ ಹೇಳಿಕೊಳ್ಳುವಂತಹ ಪ್ರದರ್ಶನ ಕಂಡುಬರಲಿಲ್ಲ, ಆದಾಗ್ಯೂ ತಂಡ 291 ರನ್‌ಗಳ ಸ್ಪರ್ಧಾತ್ಮಕ ಮೊತ್ತ ದಾಖಲಿಸುವಲ್ಲಿ ಯಶಸ್ವಿಯಾಯಿತು.

ವಿದರ್ಭ ಪರ ಇಬ್ಬರ ಶತಕ: ಗುರಿ ಬೆನ್ನಟ್ಟಿದ ವಿದರ್ಭ ತಂಡದ ಪರ ಆರಂಭಿಕ ಧ್ರುವ್ ಶೋರೆ ಅಜೇಯ 118 ರನ್‌ಗಳ ಇನ್ನಿಂಗ್ಸ್ ಆಡಿದರೆ, ನಾಯಕ ಕರುಣ್ ನಾಯರ್ ಕೂಡ ತಮ್ಮ ಅದ್ಭುತ ಫಾರ್ಮ್ ಮುಂದುವರೆಸಿ ಅಜೇಯ 122 ರನ್ ಕಲೆ ಹಾಕಿ ತಂಡವನ್ನು ಗೆಲುವಿನ ದಡ ಮುಟ್ಟಿಸಿದರು. ಕರುಣ್ ಹಾಗೂ ಧ್ರುವ್ ಮುರಿಯದ 200 ರನ್‌ಗಳ ಜೊತೆಯಾಟವನ್ನಾಡಿದರು. ತಮ್ಮ ಇನ್ನಿಂಗ್ಸ್‌ನಲ್ಲಿ 114 ಎಸೆತಗಳನ್ನು ಎದುರಿಸಿದ ಕರುಣ್ 122 ರನ್‌ಗಳ ಇನ್ನಿಂಗ್ಸ್ ಆಡಿದರು. ಕರುಣ್ ಕೇವಲ 77 ಎಸೆತಗಳಲ್ಲಿ 11 ಬೌಂಡರಿ ಮತ್ತು ಮೂರು ಸಿಕ್ಸರ್‌ಗಳ ಸಹಾಯದಿಂದ ಸತತ ನಾಲ್ಕನೇ ಶತಕವನ್ನು ಪೂರ್ಣಗೊಳಿಸಿದರು. ಈ ಮೂಲಕ ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಈ ಮೈಲಿಗಲ್ಲು ತಲುಪಿದ ಮೂರನೇ ಭಾರತೀಯ ಮತ್ತು ವಿಶ್ವಕ್ರಿಕೆಟ್‌ನ ಐದನೇ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಕರುಣ್ ಪಾತ್ರರಾದರು.

ಮಿಚೆಲ್ ಸ್ಯಾಂಟ್ನರ್ ನಾಯಕತ್ವದ ತಂಡ | ಮತ್ತೆ ಮರಳಿದ ಹಿರಿಯರು

ಚಾಂಪಿಯನ್ಸ್ ಟ್ರೋಫಿ: ನ್ಯೂಜಿಲ್ಯಾಂಡ್ ತಂಡ ಪ್ರಕಟ

ವೆಲ್ಲಿಂಗ್‌ಟನ್: ಬಹುನಿರೀಕ್ಷಿತ ಚಾಂಪಿಯನ್ಸ್ ಟ್ರೋಫಿ ಏಕದಿನ ಟೂರ್ನಿಗಾಗಿ ನ್ಯೂಜಿಲ್ಯಾಂಡ್ ತಂಡವನ್ನು ಪ್ರಕಟಿಸಲಾಗಿದೆ. 15 ಸದಸ್ಯರ ಬಳಗವನ್ನು ಆಲ್‌ರೌಂಡರ್ ಮಿಚೆಲ್ ಸ್ಯಾಂಟ್ನರ್ ಮುನ್ನಡೆಸಲಿದ್ದಾರೆ. ಗಾಯದ ಕಾರಣಕ್ಕಾಗಿ ಏಕದಿನ ಸರಣಿಗಳಿಂದ ಹೊರಗುಳಿದಿದ್ದ ಕೇನ್ ವಿಲಿಯಮ್ಸನ್, ಲಾಕಿ ಫರ್ಗುಸನ್ ಹಾಗೂ ಡೆವೊನ್ ಕಾನ್ವೆ ಚಾಂಪಿಯನ್ಸ್ ಟೂರ್ನಿಯ ಮೂಲಕ ತಂಡಕ್ಕೆ ಮರಳಲಿದ್ದಾರೆ. ಈ ಮೂವರು ಕೊನೆಯ ಬಾರಿ 2023 ವಿಶ್ವಕಪ್ ಏಕದಿನ ಟೂರ್ನಿಯಲ್ಲಿ ತಂಡದಲ್ಲಿದ್ದರು, ಇದೀಗ ಒಂದು ವರ್ಷದ ಬಳಿಕ ಮತ್ತೆ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಹದಿನೈದು ಸದಸ್ಯರ ನ್ಯೂಜಿಲ್ಯಾಂಡ್ ತಂಡದಲ್ಲಿ ಯುವ ಆಟಗಾರ ನಾಥನ್ ಸ್ಮಿತ್‌ಗೂ ಸ್ಥಾನ ನೀಡಲಾಗಿದೆ. ಇದರ ಜೊತೆ ಅದ್ಭುತ ಬೌಲಿಂಗ್ ಮೂಲಕ ಸೆನ್ಸೇಷನ್ ಸೃಷ್ಟಿಸಿರುವ ವಿಲಿಯಂ ಒರೋಕ್ ಅವರನ್ನೂ ಸಹ ಚಾಂಪಿಯನ್ಸ್ ಟ್ರೋಫಿಗೆ ಆಯ್ಕೆ ಮಾಡಲಾಗಿದೆ. ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ನ್ಯೂಜಿಲ್ಯಾಂಡ್ ತಂಡ ಹೀಗಿದೆ: ಮಿಚೆಲ್ ಸ್ಯಾಂಟ್ನರ್ (ನಾಯಕ), ಡೆವೊನ್ ಕಾನ್ವೆ, ಟಾಮ್ ಲ್ಯಾಥಮ್ (ವಿಕೆಟ್ ಕೀಪರ್), ಕೇನ್ ವಿಲಿಯಮ್ಸನ್, ರಚಿನ್ ರವೀಂದ್ರ, ವಿಲ್ ಯಂಗ್, ಮಾರ್ಕ್ ಚಾಪ್ಮನ್, ಗ್ಲೆನ್ ಫಿಲಿಪ್ಸ್, ಡೇರಿಲ್ ಮಿಚೆಲ್, ನಾಥನ್ ಸ್ಮಿತ್, ಲಾಕಿ ಫರ್ಗುಸನ್, ಬೆನ್ ಸೀರ್ಸ್ , ವಿಲಿಯಂ ಒರೋಕ್, ಮ್ಯಾಟ್ ಹೆನ್ರಿ, ಮೈಕೆಲ್ ಬ್ರೇಸ್‌ವೆಲ್.



ವಿಟಾಕೀಸ್

ಜೇಮ್ಸ್ ಬಾಂಡ್‌ನ ಕಣ್ಮಣಿ

ಫಸ್ಟ್ ರ್‍ಯಾಂಕ್ ರಾಜು ಖ್ಯಾತಿಯ ಗುರುನಂದನ್ ಈಗ ಜೇಮ್ಸ್ ಬಾಂಡ್ ಅವತಾರ ತಾಳಿದ್ದು, ತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ರಾಜು ಜೇಮ್ಸ್ ಬಾಂಡ್ ಚಿತ್ರಕ್ಕಾಗಿ ಜ್ಯೋತಿ ವ್ಯಾಸರಾಜ್ ಬರೆದಿರುವ ಕಣ್ಮಣಿ.. ಎಂಬ ಹಾಡು ಬಿಡುಗಡೆಯಾಗಿದೆ. ಅನೂಪ್ ಸೀಳಿನ್ ಸಂಗೀತ ನೀಡಿರುವ ಈ ಹಾಡಿಗೆ ಗಾಯಕ ಸಂಜಿತ್ ಹೆಗ್ಡೆ ಮಾಧುರ್ಯಾ ತುಂಬಿದ್ದಾರೆ. ಕಣ್ಮಣಿ.. ಸಂಗೀತ ಪ್ರಿಯರ ಮನಗೆದ್ದಿದ್ದು ಮೂರು ಲಕ್ಷಕ್ಕೂ ಹೆಚ್ಚು ವೀಕ್ಷಣೆ ಕಂಡಿದೆ. ಮುರಳಿ ನೃತ್ಯ ಸಂಯೋಜನೆ ಈ ಹಾಡಿಗಿದ್ದು, ಗುರುನಂದನ್ ಹಾಗೂ ಮೃದುಲಾ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ. ಲಂಡನ್‌ನ ಸುತ್ತಮುತ್ತಲಿನ ಸುಂದರ ಪರಿಸರದಲ್ಲಿ ಚಿತ್ರೀಕರಣ ನಡೆಸಲಾಗಿದೆ. ಕರ್ಮ ಬ್ರೋಸ್ ಪ್ರೊಡಕ್ಷನ್ ಲಾಂಛನದಲ್ಲಿ ನಿರ್ಮಾಣವಾಗಿರುವ ಈ ಚಿತ್ರಕ್ಕೆ ದೀಪಕ್ ಮಧುವನಹಳ್ಳಿ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಮೃದುಲಾ, ಸಾಧು ಕೋಕಿಲ, ಅಚ್ಯುತ್ ಕುಮಾರ್, ಚಿಕ್ಕಣ್ಣ, ರವಿಶಂಕರ್, ಜೈ ಜಗದೀಶ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಅಣ್ಣಾವ್ರು ಅಭಿನಯಿಸಿದ್ದ ಜೇಮ್ಸ್ ಬಾಂಡ್ ಚಿತ್ರದ ಕಥೆಯೇ ಬೇರೆ, ರಾಜು ಜೇಮ್ಸ್ ಬಾಂಡ್ ಚಿತ್ರದ ಕಥೆಯೇ ಬೇರೆ. ಇಲ್ಲಿ ಲವ್, ಸೆಂಟಿಮೆಂಟ್ ಜತೆಗೆ ಪ್ರೇಕ್ಷಕರಿಗೆ ಅಗತ್ಯವಾದ ಎಲ್ಲಾ ಅಂಶಗಳು ಬೆರೆತಿವೆ ಎಂದು ನಿರ್ದೇಶಕ ದೀಪಕ್ ಮಧುವನಹಳ್ಳಿ ತಿಳಿಸಿದರು.

> ನಮ್ಮ ಚಿತ್ರ ಹಿಂದೆಯೇ ಬಿಡುಗಡೆಯಾಗಬೇಕಿತ್ತು, ಆದರೆ ಕಾರಣಾಂತರಗಳಿಂದ ಮುಂದೂಡಲಾಗಿತ್ತು. ಫೆಬ್ರವರಿ 14ರ ಪ್ರೇಮಿಗಳ ದಿನದಿಂದಲೇ ಸಿನಿಮಾ ತೆರೆಗೆ ಬರುತ್ತಿರುವುದು ಖುಷಿಕೊಟ್ಟಿದೆ. ರಾಜು ಜೇಮ್ಸ್ ಬಾಂಡ್‌ನಲ್ಲಿ ಒಳ್ಳೆಯ ಕಟೆಂಟ್ ಇದೆ. ಇದು ನನಗೆ ಮತ್ತೊಂದು ಬ್ರೇಕ್ ನಿರೀಕ್ಷೆಯಿದೆ ಎಂಬ ನಿರೀಕ್ಷೆ ನನಗಿದೆ.
> –ಗುರುನಂದನ್ ನಟ

> ನಮ್ಮ ಚಿತ್ರ ಫೆಬ್ರವರಿ 14 ರಂದು ಕನ್ನಡ ಹಾಗೂ ಹಿಂದಿ ಭಾಷೆಗಳಲ್ಲಿ ಏಕಕಾಲಕ್ಕೆ ಬಿಡುಗಡೆಯಾಗುತ್ತಿದೆ. ನೇಪಾಳಿ ಭಾಷೆಗೂ ನಮ್ಮ ಚಿತ್ರದ ಡಬ್ಬಿಂಗ್ ರೈಟ್ಸ್ ಮಾರಾಟವಾಗಿದೆ. ಸದ್ಯ ಬಿಡುಗಡೆಯಾಗಿರುವ ಹಾಡನ್ನು ಲಂಡನ್‌ನ ಸುಂದರ ಪರಿಸರದಲ್ಲಿ ಚಿತ್ರೀಕರಿಸಿದ್ದೇವೆ.
> –ಮಂಜುನಾಥ್ ವಿಶ್ವಕರ್ಮ ನಿರ್ಮಾಪಕ

ತೆರೆಗೆ ಸಿದ್ಧವಾದ ಎದ್ದೇಳು ಮಂಜುನಾಥ 2

ಇತ್ತೀಚೆಗೆ ನಿಧನರಾದ ಕನ್ನಡದ ಪ್ರಸಿದ್ಧ ನಿರ್ದೇಶಕ ಗುರುಪ್ರಸಾದ್ ಅವರ ಕೊನೆ ಸಿನಿಮಾ ಎದ್ದೇಳು ಮಂಜುನಾಥ 2 ಬಿಡುಗಡೆಗೆ ಸಿದ್ಧವಾಗಿದೆ. 2009ರಲ್ಲಿ ತೆರೆಕಂಡ ಎದ್ದೇಳು ಮಂಜುನಾಥ ಸಿನಿಮಾವನ್ನು ಗುರುಪ್ರಸಾದ್ ನಿರ್ದೇಶನ ಮಾಡಿದ್ದರು. ನವರಸ ನಾಯಕ ಜಗ್ಗೇಶ್ ನಾಯಕನಾಗಿ ಅಭಿನಯಿಸಿ ಮೋಡಿ ಮಾಡಿದ್ದರು. ಈಗ ಎದ್ದೇಳು ಮಂಜುನಾಥ್–2 ಚಿತ್ರಕ್ಕೆ ಗುರುಪ್ರಸಾದ್ ಅವರೇ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಜತೆಗೆ ನಾಯಕನಾಗಿಯೂ ನಟಿಸಿದ್ದಾರೆ. ಈ ಚಿತ್ರದ ಕಿತ್ತೋದ ಪ್ರೇಮ... ಹಾಡು ಬಿಡುಗಡೆಯಾಗಿದೆ. ನಿರ್ದೇಶಕದ ಸಿಂಪಲ್ ಸುನಿ, ನಿರ್ಮಾಪಕ ಉದಯ್.ಕೆ. ಮೆಹ್ತಾ ಎದ್ದೇಳು ಮಂಜುನಾಥ್ 2 ಚಿತ್ರದ ಹಾಡು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು.

ಕಿತ್ತೋದ ಪ್ರೇಮ... ಎಂಬ ಹಾಡಿಗೆ ಗುರುಪ್ರಸಾದ್ ಸಾಹಿತ್ಯ ಬರೆದಿದ್ದು, ನವೀನ್ ಸಜ್ಜು ದನಿಯಾಗಿದ್ದಾರೆ. ಅನೂಪ್ ಸೀಳಿನ್ ಸಂಗೀತ ಸಂಯೋಜಿಸಿದ್ದಾರೆ. ಗುರುಪ್ರಸಾದ್‌ಗೆ ನಾಯಕಿಯಾಗಿ ರಚಿತಾ ಮಹಾಲಕ್ಷ್ಮಿ ನಟಿಸಿದ್ದು, ಉಳಿದಂತೆ ಶರತ್ ಲೋಹಿತಾಶ್ವ, ಚೈತ್ರಾ ಆಚಾರ್, ವಿಘ್ನೇಶ್ ಕಟ್ಟಿ, ರವಿ ದೀಕ್ಷಿತ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಗುರುಪ್ರಸಾದ್ ಇದ್ದಿದ್ದರೆ ಈ ಸಭಾಂಗಣದಲ್ಲಿ ನಗು, ಅವರ ಓಡಾಟ, ಅಬ್ಬರ ಎಲ್ಲಾ ಇರುತಿತ್ತು. ನಾವು ಇಂದು ಅದೆಲ್ಲವನ್ನೂ ಮಿಸ್ ಮಾಡಿಕೊಳ್ಳುತ್ತಿದ್ದೇವೆ. ಪ್ರತಿಯೊಬ್ಬ ಕಲಾವಿದರಿಗೂ ಒಬ್ಬ ಒಳ್ಳೆ ನಿರ್ದೇಶಕರ ಜತೆಗೆ ಕೆಲಸ ಮಾಡಬೇಕು ಎಂಬ ಆಸೆ ಇರುತ್ತದೆ. ಆ ಆಸೆ ನನಗೂ ಇತ್ತು. ಅದು ಗುರುಪ್ರಸಾದ್ ಅವರ ಕೊನೆಯ ಚಿತ್ರದಲ್ಲಿ ಈಡೇರಿದೆ ಎಂದು ನಟ ಶರತ್ ಲೋಹಿತಾಶ್ವ ಹೇಳಿದರು.

ನಾನು ರಂಗನಾಯಕ ಸಿನಿಮಾಗೂ ಮೊದಲು ಒಪ್ಪಿದ್ದ ಸಿನಿಮಾವಿದು. ಐದು ವರ್ಷದ ಹಿಂದೆಯೇ ಚಿತ್ರೀಕರಣ ನಡೆಸಿದ್ದೆವು. ಈ ದಾರಿ ಬಹಳ ಸುಲಭವಾಗಿ ಇರಲಿಲ್ಲ. ಗುರುಪ್ರಸಾದ್ ಅವರ ನಿರ್ದೇಶನದಲ್ಲಿ ಕೆಲಸ ಮಾಡಿರುವುದು ಖುಷಿ ಕೊಟ್ಟಿದೆ ಎಂದು ನಟಿ ರಚಿತಾ ಮಹಾಲಕ್ಷ್ಮಿ ತಿಳಿಸಿದರು.

ಎದ್ದೇಳು ಮಂಜುನಾಥ್2 ಸಿನಿಮಾದಿಂದ ಬರುವ ಲಾಭದ ಶೇ 50ರಷ್ಟು ಭಾಗವನ್ನು ಗುರುಪ್ರಸಾದ್ ಅವರ ಮಗಳಾದ ನಗು ಶರ್ಮಾ ಭವಿಷ್ಯಕ್ಕೆ ಮೀಸಲಿಡಲಾಗುವುದು ಎಂದು ನಿರ್ಮಾಪಕ ಮೈಸೂರು ರಮೇಶ್ ಹೇಳಿದರು. ಈ ಚಿತ್ರಕ್ಕೆ ಮೈಸೂರು ರಮೇಶ್ ಬಂಡವಾಳ ಹೂಡಿದ್ದು, ರವಿ ದೀಕ್ಷಿತ್ ನಿರ್ಮಾಣದಲ್ಲಿ ಕೈ ಜೋಡಿಸಿದ್ದಾರೆ. ಅಶೋಕ ಛಾಯಾಗ್ರಹಣ, ಲಿಂಗರಾಜು ಹಾಗೂ ಉದಯ್ ಸಂಕಲನ ಈ ಚಿತ್ರಕ್ಕಿದೆ. ಫೆಬ್ರವರಿ 21ರಂದು ಚಿತ್ರ ರಾಜ್ಯಾದ್ಯಂತ ತೆರೆಗೆ ಬರಲಿದೆ.

ಕನಸಿನ ತಂಡಕ್ಕೆ ಸೋನು ಸಾಥ್

ಎಸ್.ಲಕ್ಷ್ಮಿಕಾಂತ್ ರೆಡ್ಡಿ ನಿರ್ಮಾಣದ ಕನಸೊಂದು ಶುರುವಾಗಿದೆ ಚಿತ್ರ ಶೂಟಿಂಗ್ ಮುಗಿಸಿ ತೆರೆಗೆ ಸಿದ್ಧವಾಗಿದೆ. ಶೀರ್ಷಿಕೆಯಲ್ಲಿಯೇ ಮನಗೆದ್ದ ಈ ಚಿತ್ರ, ಈಗ ಹಾಡಿನ ಮೂಲಕವೂ ಮನಸೆಳೆಯುತ್ತಿದೆ. ಆಜಾರೇ ಆಜಾರೇ.. ಎಂಬ ಹಾಡು ಬಿಡುಗಡೆಯಾಗಿದ್ದು, ಕೇಳಲು ಮಧುರವಾಗಿದೆ. ಖ್ಯಾತ ಗಾಯಕ ಸೋನು ನಿಗಮ್ ದನಿಯಲ್ಲಿ ಗೀತೆ ಮೂಡಿಬಂದಿದೆ. ನಿರ್ದೇಶಕ ಶಶಾಂಕ್ ಸಾಹಿತ್ಯದ ಈ ಹಾಡಿಗೆ ಸೂರಜ್ ಜೋಯಿಸ್ ಸಂಗೀತ ಸಂಯೋಜಿಸಿದ್ದಾರೆ. ಕಡಲ ಕಿನಾರೆಯ ಸುಂದರ ತಾಣದಲ್ಲಿ ಹಾಡನ್ನು ಸೆರೆಹಿಡಿಯಲಾಗಿದೆ. ಸಂತೋಷ್ ಬಿಲ್ಲವ ಹಾಗೂ ಸಾತ್ವಿಕಾ ರಾವ್ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ. ಕನಸಿನಲ್ಲಿ ಕಾಡುವ ಸುಂದರ ಘಟನೆಗಳ ಕುರಿತಂತೆ ಚಿತ್ರದ ಸ್ಟೋರಿ ಸಾಗುತ್ತದೆ. ಇಲ್ಲಿ ಲವ್ ಸ್ಟೋರಿಯ ಜತೆಗೆ, ಸೆಂಟಿಮೆಂಟ್, ಥ್ರಿಲ್ಲರ್ ಅಂಶಗಳೂ ಬೆರೆತಿವೆ. ಇಂದು ನಡೆಯುತ್ತಿರುವ ಕೆಲವು ಘಟನೆಗಳ ಕುರಿತಂತೆಯೂ ಚಿತ್ರದಲ್ಲಿ ಹೇಳಲಾಗಿದ್ದು ಅದು ಎಲ್ಲರಿಗೂ ಕನೆಕ್ಟ್ ಆಗುತ್ತದೆ ಎನ್ನುತ್ತಾರೆ ನಿರ್ಮಾಪಕ ಲಕ್ಷ್ಮಿಕಾಂತ್ ರೆಡ್ಡಿ.

ಮಂಜೇಶ್ ಭಗವತ್ ಕಥೆ, ಚಿತ್ರಕಥೆ ಬರೆದು ಚಿತ್ರ ನಿರ್ದೇಶನ ಮಾಡಿರುವ ಈ ಚಿತ್ರದಲ್ಲಿ ಸಂತೋಷ್ ಬಿಲ್ಲವ ನಾಯಕನಾಗಿ ನಟಿಸಿದ್ದು, ಸಾತ್ವಿಕಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಉಳಿದಂತೆ ದೊಡ್ಡ ತಾರಾಬಳಗವೇ ಇದೆ. ಈಗಾಗಲೇ ಚಿತ್ರೀಕರಣ ಪೂರ್ಣಗೊಳಿಸಿರುವ ಚಿತ್ರತಂಡ ಶೀಘ್ರದಲ್ಲಿಯೇ ಸಿನಿಮಾದ ಬಿಡುಗಡೆಯ ದಿನಾಂಕವನ್ನು ಘೋಷಿಸಲಿದೆ.

> ನಮ್ಮ ಚಿತ್ರದ ಕಥೆ ಸಿದ್ಧವಾಗಿತ್ತು. ಇನ್ನೇನು ಚಿತ್ರೀಕರಣಕ್ಕೆ ಹೊರಡಬೇಕು ಎನ್ನುವಾಗ ಶೀರ್ಷಿಕೆಯ ಬಗ್ಗೆ ಚರ್ಚೆಯೂ ಶುರುವಾಗಿತ್ತು. ಆ ಸಂದರ್ಭದಲ್ಲಿ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅಭಿನಯದ ಮಿಲನಾ ಚಿತ್ರದ ನಿನ್ನಿಂದಲೇ.. ಕನಸೊಂದು ಶುರುವಾಗಿದೆ.. ಹಾಡು ಕೇಳಿದೆ. ಚಿತ್ರದ ಕಥೆಗೆ ಇದೇ ಸರಿಯಾದ ಟೈಟಲ್ ಎಂದು ಕನಸೊಂದು ಶುರುವಾಗಿದೆ ಎಂಬ ಶೀರ್ಷಿಕೆ ಆಯ್ದುಕೊಂಡೆವು.
> –ಸಂತೋಷ್ ಬಿಲ್ಲವ ನಟ